Swabhimani Sahakari

# ಸ್ವಾಭಿಮಾನಿ ಸಹಕಾರಿ

Pages : 40 /12₹

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 02
February- 2022

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಪ್ರಧಾನಮಂತ್ರಿ ಗತಿಶಕ್ತಿ ಮೂಲಕ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ, ಉತ್ಪಾದಕತೆಯ ವೃದ್ಧಿ, ಅವಕಾಶಗಳ ಹೆಚ್ಚಳ, ವಿದ್ಯುತ್ ಉತ್ಪಾದನೆ, ವಿತರಣೆಯಲ್ಲಿ ಸುಧಾರಣೆ, ಪರಿಸರ ಸಂರಕ್ಷಣೆ, ವ್ಯವಸ್ಥಿತ ಹೂಡಿಕೆಗಳಿಗೆ ಒತ್ತು ನೀಡಲಾಗುವುದು

–ನಿರ್ಮಲಾ ಸೀತಾರಾಮನ್



* ಸಹಕಾರ ಸಂಘಗಳ ತೆರಿಗೆ ದರ ಶೇ.15ಕ್ಕೆ ಇಳಿಕೆ ಹಾಗೂ ಸರ್ ಚಾರ್ಜ್ 12% ರಿಂದ 7%ಕ್ಕೆ ಇಳಿಕೆ ಮಾಡಲಾಗಿದೆ

* ಪಿಎಂ ಆವಾಸ್ ಯೋಜನೆಯಡಿ 80 ಲಕ್ಷ ಮನೆಗಳ ನಿರ್ಮಾಣ, ರೂ 48,000 ಕೋಟಿ ಮಂಜೂರು

* 2022-23ರ ಒಳಗೆ 5G ಮೊಬೈಲ್ ಸೇವೆಗಳು ಬಿಡುಗಡೆ

* 75 ಜಿಲ್ಲೆಗಳಲ್ಲಿ 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳು,

* ಅಂಚೆ ಕಚೇರಿಗಳಲ್ಲಿ ಕೋರ್ ಬ್ಯಾಂಕಿಂಗ್ ಸೇವೆ.

ಆರ್‌ಬಿಐನಿಂದ ಡಿಜಿಟಲ್ ರೂಪಾಯಿ; ಕ್ರಿಪ್ಟೋಕರೆನ್ಸಿ ಗಳಿಕೆ ಮೇಲೆ ಶೇ 30ರಷ್ಟು ತೆರಿಗೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5487

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1470

# ವಿಶ್ವಾಸಾರ್ಹತೆಯ ಹೆಚ್ಚಿಸುವ ಸವಾಲು : ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಎಲ್ಲರಿಗೂ ಸಹೃದಯ ನಮಸ್ಕಾರಗಳು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗ, ಕ್ಷೇತ್ರದ ಪ್ರಗತಿ, ಕ್ಷೇತ್ರದ ಬಗ್ಗೆ ಪ್ರಚಾರ, ಕ್ಷೇತ್ರದ ವಿಶೇಷತೆ ಹಾಗೂ ವೈಶಿಷ್ಟತೆಗಳ ಉತ್ತಮ ಮಾತುಗಳು ಕೇಳಿಬರುತ್ತಿವೆಯಾದರೂ ಒಂದೆರಡು ಸೌಹಾರ್ದ ಸಹಕಾರಿಗಳು ಠೇವಣಿದಾರರ ಠೇವಣಿಗಳನ್ನು ಉತ್ತಮವಾಗಿ ವಿನಿಯೋಗಿಸದೇ ಠೇವಣಿಗಳನ್ನು ಹಿಂತಿರುಗಿಸಲು ಸಾಧ್ಯವಾಗದೇ ಮೋಸಮಾಡುತ್ತಿರುವುದು ಮತ್ತು ಈ ಕ್ಷೇತ್ರದ ಬಗ್ಗೆ ಸಾರ್ವಜನಿಕರ ವಿಶ್ವಾಸಾರ್ಹತೆಗೆ ಧಕ್ಕೆಯಾಗುತ್ತಿದೆ.

**ಆತ್ಮೀಯ ಸಹಕಾರಿ ಬಂಧುಗಳೇ,**

ಎಲ್ಲರಿಗೂ ಸಹೃದಯ ನಮಸ್ಕಾರಗಳು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗ, ಕ್ಷೇತ್ರದ ಪ್ರಗತಿ, ಕ್ಷೇತ್ರದ ಬಗ್ಗೆ ಪ್ರಚಾರ, ಕ್ಷೇತ್ರದ ವಿಶೇಷತೆ ಹಾಗೂ ವೈಶಿಷ್ಟತೆಗಳ ಉತ್ತಮ ಮಾತುಗಳು ಕೇಳಿಬರುತ್ತಿವೆಯಾದರೂ ಒಂದೆರಡು ಸೌಹಾರ್ದ ಸಹಕಾರಿಗಳು ಠೇವಣಿದಾರರ ಠೇವಣಿಗಳನ್ನು ಉತ್ತಮವಾಗಿ ವಿನಿಯೋಗಿಸದೇ ಠೇವಣಿಗಳನ್ನು ಹಿಂತಿರುಗಿಸಲು ಸಾಧ್ಯವಾಗದೇ ಮೋಸಮಾಡುತ್ತಿರುವುದು ಮತ್ತು ಈ ಕ್ಷೇತ್ರದ ಬಗ್ಗೆ ಸಾರ್ವಜನಿಕರ ವಿಶ್ವಾಸಾರ್ಹತೆಗೆ ಧಕ್ಕೆಯಾಗುತ್ತಿದೆ. ಈ ಕ್ಷೇತ್ರಕ್ಕೆ ನೀಡಿರುವ ಸ್ವಾಯತ್ತತೆ ಅದು ಸ್ವೇಚ್ಛಾಚಾರವಾಗುತ್ತಿದೆ. ಅದಕ್ಕೆ ನಿಯಂತ್ರಣ ಹಾಕಬೇಕು ಎನ್ನುವ ಬಗ್ಗೆ ಸರಕಾರದ ಹಂತದಲ್ಲಿ ಚರ್ಚೆಯಾಗುತ್ತಿರುವುದು ಕಳವಳಪಡುವ ವಿಷಯ. ಈ ಹಿನ್ನೆಲೆಯಲ್ಲಿ ಈ ಕ್ಷೇತ್ರದ ಬಗ್ಗೆ ಅಲ್ಲಲ್ಲಿ ಅಪಸ್ವರಗಳು ಕೂಡ ಕೇಳಿ ಬರುತ್ತಿರುವುದನ್ನು ಸಹಕಾರಿಗಳು ಗಮನಿಸುವುದು ಅಗತ್ಯವೆನಿಸಿದೆ.

ಈ ಬಗ್ಗೆ ಒಂದು ಮಹತ್ವದ ವಿಷಯವನ್ನು ಎಲ್ಲರೂ ಗಮನಿಸಬೇಕಾಗುತ್ತದೆ. ಒಂದನೇಯದಾಗಿ ಇದು ಕೇಂದ್ರದ ಯೋಜನಾ ಆಯೋಗದ ವರದಿಯ ಆಧಾರದ ಮೇಲೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಅವುಗಳಿಗೆ ಆರ್ಥಿಕ ಹಾಗೂ ವ್ಯವಹಾರಿಕ ಸ್ವಾತಂತ್ರವನ್ನು ನೀಡಬೇಕೆಂತಲೇ ಸಿದ್ಧಪಡಿಸಿ ಜಾರಿಗೆ ತಂದಿರುವ ಸ್ವಾಯತ್ತತೆ ಸಹಕಾರಿ ಕಾಯ್ದೆ (ಲಿಬರಲ್ ಸಹಕಾರಿ ಕಾಯ್ದೆ) ವಿಶೇಷವಾಗಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ವ್ಯವಸ್ಥೆ ದೇಶದ ಸಹಕಾರಿ ಕ್ಷೇತ್ರದಲ್ಲಿ ಒಂದು ಮಾದರಿ ವ್ಯವಸ್ಥೆಯಾಗಿ ಹೊರಹೊಮ್ಮಿರುವುದು ಮತ್ತು ಉತ್ತಮ ಪ್ರಗತಿಯನ್ನು ಸಾಧಿಸಿರುವುದು ಕರ್ನಾಟಕದ ಸಹಕಾರಿಗಳಿಗೆ ಹಾಗೂ ಸರಕಾರಕ್ಕೆ ಹೆಮ್ಮೆಯ ವಿಷಯ. ದೇಶದ ಯಾವುದೇ ರಾಜ್ಯಗಳಲ್ಲಿ ಈ ವ್ಯವಸ್ಥೆ ಇರದಿರುವುದು ಬೇರೆ ರಾಜ್ಯಗಳು ಈ ವ್ಯವಸ್ಥೆಯನ್ನು ಅನುಕರಿಸುವ ಬಗ್ಗೆ ಚಿಂತನೆ ನಡೆಸುತ್ತಿರುವುದು ಹೆಮ್ಮೆಯ ವಿಷಯ. ಇದನ್ನು ಕಾಪಾಡಿಕೊಂಡು ಉಳಿಸಿಕೊಂಡು ಬೆಳೆಸಿಕೊಂಡು ಈ ಕ್ಷೇತ್ರದ ಘನತೆಯನ್ನು ಎತ್ತಿಹಿಡಿಯುವುದಕ್ಕೆ ಚಿಂತನೆಗಳಾಗಬೇಕಾಗುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದರಲ್ಲಿ ಸಹಕಾರಿಗಳ ನಾಯಕತ್ವವನ್ನು ವಹಿಸಿಕೊಂಡಿರುವುದರ ಹಾಗೂ ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಮೇಲೆ ಹೆಚ್ಚಿನ ಹೊಣೆಗಾರಿಕೆ ಇರುತ್ತದೆ. ಸಹಕಾರಿ ತತ್ವಗಳನ್ನು ಅಧ್ಯಯನ ಮಾಡಿ ಕಾರ್ಯಚಟುವಟಿಕೆಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸಿಕೊಂಡು ಕ್ರಿಯಾತ್ಮಕವಾಗಿ ಸಕಾರಾತ್ಮಕ ದೃಷ್ಟಿಯಿಂದ ಕಾರ್ಯನಿರ್ವಹಿಸುತ್ತ ಸಮಾಜ ಶೋಷಣೆ ಮಾಡುತ್ತಿರುವ ಠೇವಣಿದಾರರಿಗೆ ಮೋಸಮಾಡುವ ಸಹಕಾರಿ ಸಂಸ್ಥೆಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಇಂತಹ ಸಹಕಾರಿ ಸಂಸ್ಥೆಗಳು ಹುಟ್ಟಲಿಕ್ಕೆ ಮತ್ತು ಬೆಳೆಯಲಿಕ್ಕೆ ಅವಕಾಶವಾಗದಂತೆ ಸಹಕಾರಿಗಳು ನಿರ್ದಾಕ್ಷಿಣ್ಯವಾಗಿ ಎಲ್ಲ ಹಂತಗಳಲ್ಲೂ ಕ್ರಮವಿಡುವುದರಿಂದ ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಸಕ್ರೀಯವಾದ ಪ್ರೋತ್ಸಾಹ ನೀಡುವುದರ ಜೊತೆಗೆ ಈ ಕ್ಷೇತ್ರದ ಗುಣಾತ್ಮಕ ಬೆಳವಣಿಗೆಯಲ್ಲಿ ಪಾಲ್ಗೊಳ್ಳುವುದು ಅಗತ್ಯ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–25
ಸರ್ಕಾರದ ಸುತ್ತೋಲೆ .................... 26–27
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 28–34
**ಲೇಖನಗಳು :**
"ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಮತ್ತು ಚಟುವಟಿಕೆಗಳ ಬಗ್ಗೆ ವಿಸ್ತೃತ ಅರಿವು ಹಾಗೂ ಪ್ರಚಾರ ಅಗತ್ಯ" ............................ 35–38
ಆರ್.ಬಿ.ಐ ಸುತ್ತೋಲೆ ........................ 40

# ಸಂಪಾದಕೀಯ

## ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಕಾರ್ಯನಿರ್ವಹಣೆ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ವೇಗವಾಗಿ ಉತ್ತಮವಾಗಿ ವೈಶಿಷ್ಟಪೂರ್ಣವಾಗಿ ಬೆಳೆಯುತ್ತಿರುವುದು ಸ್ವಾಗತಾರ್ಹ. ರಾಜ್ಯದ 5400 ಸೌಹಾರ್ದ ಸಹಕಾರಿಗಳಲ್ಲಿ 60 ಲಕ್ಷ ಸದಸ್ಯರು 50,000 ಸಾವಿರ ಜನರಿಗೆ ಉದ್ಯೋಗ ಒದಗಿಸಿರುವುದು ಹೆಚ್ಚಾಗಿ ಯುವಕರು ಈ ಕ್ಷೇತ್ರದ ಕಡೆಗೆ ಆಕರ್ಷಿತರಾಗುತ್ತಿರುವುದು ಸೌಹಾರ್ದ ಸಹಕಾರಿಗಳ ಕಾರ್ಯವೈಖರಿ ಸಹಕಾರಿ ಕ್ಷೇತ್ರದಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆದಿರುವುದು ಸೌಹಾರ್ದ ಸಹಕಾರಿಗಳಿಗೆ ಹೆಮ್ಮೆಯ ವಿಷಯ.

ಈ ಕ್ಷೇತ್ರದ ಬೆಳವಣಿಗೆಯ ನೇತಾರನಾಗಿ ಸಂಯುಕ್ತ ಸಹಕಾರಿಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಹಕಾರ ಕ್ಷೇತ್ರದ ಹಿರಿಯ ಧುರೀಣರು ತಿಳಿಸಿರುವುದು ಹೆಮ್ಮೆಯ ಸಂಗತಿ. ಹಾಗೆ ಈ ಕ್ಷೇತ್ರ ಬೆಳೆದು ದೊಡ್ಡದಾಂತೆಲ್ಲ ಪೂರಕ ಸಂಸ್ಥೆಗಳ ಸಹಕಾರವೂ ಅಗತ್ಯವೆನಿಸುತ್ತದೆ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಕಾರ್ಯಯೋಜನೆಯಂತೆ ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳ ಸ್ಥಾಪನೆಗೆ ಮುಂದಾಗಿ ಇದುವರೆಗೆ 17 ಜಿಲ್ಲೆಗಳಿಂದ 14 ಜಿಲ್ಲಾ ಹಾಗೂ ಒಂದು ರಾಜ್ಯ ಮಟ್ಟದ ಸಹಕಾರಿ ಒಕ್ಕೂಟಗಳು ನೊಂದಾವಣೆಯಾಗಿದೆ. ಒಕ್ಕೂಟಗಳು ತಮ್ಮ ಉಪವಿಧಿಗಳ ಪ್ರಕಾರ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿವೆ. ಇವುಗಳ ಸ್ಥಾಪನೆಯಿಂದಾಗಿ ಸಂಯುಕ್ತ ಸಹಕಾರಿಗೆ ಇನ್ನೂ ಹೆಚ್ಚಿನ ಬಲಬರಬೇಕೆಂಬುವುದು ಸಹಕಾರಿಗಳ ಆಶಯ.

ಈ ಹಂತದಲ್ಲಿ ಸೌಹಾರ್ದ ಸಹಕಾರಿಗಳು ಈ ಒಕ್ಕೂಟಗಳ ಕಾರ್ಯನಿರ್ವಹಣೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಒಕ್ಕೂಟಗಳಲ್ಲಿ ಹೆಚ್ಚಿನ ಚಟುವಟಿಕೆಗಳನ್ನು ಹಮ್ಮಿಕೊಂಡು ಸದಸ್ಯರಿಗೆ ವಿವಿಧ ಸೇವೆಗಳನ್ನು ಒದಗಿಸುವುದರ ಜೊತೆಗೆ ಒಕ್ಕೂಟಗಳು ಸುಸ್ಥಿರ ಬೆಳವಣಿಗೆ ಹೊಂದಬೇಕಿದೆ. ಕಾರ್ಯನಿರ್ವಹಣೆಗೆ ಅಗತ್ಯ ಸಲಹೆ ಮಾರ್ಗದರ್ಶನವನ್ನು ಸಂಯುಕ್ತ ಸಹಕಾರಿ ನೀಡುತ್ತದೆ. ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸೌಹಾರ್ದ ಸಹಕಾರಿಗಳನ್ನು ಸದಸ್ಯರನ್ನಾಗಿಸಿಕೊಂಡು ಸಂಪನ್ಮೂಲ ಕ್ರೂಢೀಕರಣೆಗೆ ಆದ್ಯತೆ ನೀಡುತ್ತ ಒಕ್ಕೂಟಗಳು ವಿವಿಧ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಂಡು ಹತ್ತಾರು ಜನರಿಗೆ ಉದ್ಯೋಗವನ್ನು ನೀಡುವುದರ ಜೊತೆಗೆ ಒಕ್ಕೂಟದ ಅರ್ಥವ್ಯವಸ್ಥೆಯನ್ನು ಬಲಪಡಿಸಿಕೊಂಡು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವ ಕ್ರಮಗಳನ್ನು ಬೆಳೆಸಿಕೊಂಡಲ್ಲಿ ಮಾತ್ರ ಒಕ್ಕೂಟಗಳ ಸ್ಥಾಪನೆ ಫಲಕಾರಿಯಾಗುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಯುಕ್ತ ಸಹಕಾರಿಯ ಜೊತೆಗೆ ಈ ಒಕ್ಕೂಟಗಳು ಪೂರಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಉತ್ತಮ ನಾಯಕತ್ವದ ಬೆಳವಣಿಗೆಗೆ ಜಿಲ್ಲಾ ಒಕ್ಕೂಟಗಳು ಸಹಕಾರಿಯಾಗಲಿದೆ. ಸಂಯುಕ್ತ ಸಹಕಾರಿಯ ಮತ್ತು ಸೌಹಾರ್ದ ಸಹಕಾರಿಗಲ ಧ್ಯೇಯ ವಾಕ್ಯವಾದ **"ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ"** ಎಂಬ ಸಂದೇಶದಂತೆ ಒಕ್ಕೂಟ ಸಹಕಾರಿಗಳು ಈ ಮಹತ್ವದ ಕಾರ್ಯದಲ್ಲಿ ಕೈಜೋಡಿಸಲು ಕೋರಿದೆ.

ಶ್ರೇಣಿ 70



# ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಉಣೀಸನೀವನು ದನಕೆ ತಣಿಪನೀವನು ಜನಕೆ ಗುಣಶಾಲಿತೃಣಸಾಧು"

ಹಸನ್ಮುಖಿತ್ವದೊಡನೆ ಘನಘೋರ ರೌದ್ರ ರೂಪಗಳನ್ನೊಳಗೊಂಡ ಸರ್ವೇಶ್ವರನಾದ ಜಗದೀಶ್ವರನಾದ ತನ್ನ ಸೃಷ್ಟಿಕಾರ್ಯವನ್ನೆಸುಗುತ್ತಾ, ಅನೇಕ ಕಿರುಗಾತ್ರದಿಂದ ಬಹುಗಾತ್ರದ ಸಮುದ್ರ ಸಸ್ಯ, ವೃಕ್ಷ, ಪ್ರಾಣಿಗಳನ್ನು ಹಾಗೂ ಮನುಷ್ಯನನ್ನು ಸೃಷ್ಟಿಸಿದ ವಿಶಾಲವಾದ ಸಮುದ್ರ, ಅತ್ಯುನ್ನತ ಶಿಖರವುಳ್ಳ ಪರ್ವತ ಶ್ರೇಣಿಗಳನ್ನೊಳಗೊಂಡಂತೆ ಪರಮಾಶ್ಚರ್ಯ ಹಾಗೂ ನಯನಮನೋಹರವಾದ ಸೃಷ್ಟಿಗಳಿಗೂ ಅಸ್ತಿತ್ವ ನೀಡಿದ, ಆಯಾ ವಸ್ತು ವೈವಿಧ್ಯಗಳು ತಳೆದಿರುವ ಗಾತ್ರಗಳಿಂದ ಮಾತ್ರ ಅವುಗಳ ಉಪಯೋಗವನ್ನು ಪರಿಗಣಿಸದೇ ಕಿಂದರಲ್ಲಿ ಕಿರಿದಾದ ಪ್ರಾಣಿ ಹಾಗೂ ಸಸ್ಯಗಳು ಸಹ ಉಪಯುಕ್ತತೆಯನ್ನು ನೀಡಬಲ್ಲವೆಂಬ ಅಂಶವನ್ನು ಆಧ್ಯಾತ್ಮ ಕವಿ ಡಿ.ವಿ. ಜಿಯವರು ಗರಿಕೆ ಹುಲ್ಲಿ ಉದಾಹರಣೆ ನೀಡುತ್ತಾ ಅದು ಜಗತ್ತಿಗೆ ತಂಪನ್ನು ನೀಡುವುದರ ಜೊತೆಗೆ ದನದ ಬಡಲಿಗೆ ಸಂತೃಪ್ತ ಆಹಾರವಾಗುತ್ತಾವೆಂಬ ಅಂಶವನ್ನು ಬಹು ಮನೋಜ್ಞವಾಗಿ ಹಾಗೂ ಭಾವಾವೇಶದಿಂದ ಬಣ್ಣಿಸಿದ್ದಾರೆ. ಗರಿಕೆಯ ಗುಣಶಾಲಿತ್ವ ಮತ್ತು ಅಕ್ಷಯತೆಗಳನ್ನು ಜೀವರಾಶಿಗೆ ಸಾಧುವಾದ ಅಂಶವೆಂದು ಹೊಗಳಿದ್ದಾರೆ. ಪದ್ಯದ ಪುಟ ಈ ಕೆಳಗಿನಂತಿದೆ.

ಅಣಗಿದ್ದು ಬೇಸುಗೆಯೊಳ ಎದ್ದು ಮಳೆ ಕರೆದಂದು
ಗುಣಿಯನದೆ ತಿಟ್ಟೆನದೆ ಸಿಕ್ಕಿದೆಡೆ ಬೆಳೆದು
ಉಣೀಸನೀವನು ದನಕೆ ತಣಿಪನೀವನು ಜಗಕೆ
ಗುಣಶಾಲಿ ತೃಣಸಾಧು ॥ಮಂಕುತಿಮ್ಮ॥

ಸುಡು ಬಿಸಿಲಿನ ಬೇಸಿಗೆಯಲ್ಲಿ ತಾಪದಿಂದಾಗಿ ಕಣ್ಣಿಗೆ ಕಾಣಿಸದಷ್ಟು ಅದೃಶ್ಯ ಸ್ಥಿತಿಯಲ್ಲಿದ್ದು ಪ್ರಕೃತಿಯ ಅಮೃತ ಸದೃಶ ವರ್ಷಧಾರೆ ಬಂದೊಡನೆ ನಿಸರ್ಗದ ಕರೆಗೆ ಓಗೊಟ್ಟು ಬೀಜರೂಪವಾಗಿ ಹಳ್ಳ, ತಿಟ್ಟು, ಕಾಡು, ಮೇಡು ಹಾಗೂ ಕಲ್ಲುಪೂಟರೆಗಳ ಸಂದುಸಂಧುಗಳಲ್ಲಿಯೂ ಜನ್ಮತಾಲಿ ಕಾಣಿಸಿಕೊಳ್ಳಲು ಹಸಿರು ಗರಿಕೆ, ಇದೇ ಬಯಲಿಗೆ ಹಸಿರು ಸೀರೆಯುಡಿಸಿದಂತೆ ಭವ್ಯ ಸೌಂಧರ್ಯ ನೀಡುತ್ತದೆಯೆಂದಿದ್ದಾರೆ. ಇಂಥಹ ಗರಿಕೆ ತನ್ನ ಕಸುವನ್ನು, ಜೀವವಾಗುವ ರಹಸ್ಯಶಕ್ತಿಯನ್ನು ಅಷ್ಟೊಂದು ದೀರ್ಘಕಾಲದ ಸುಡು ಬೇಸಿಗೆಯಲ್ಲಿಯೂ ಉಳಿಸಿಕೊಂಡಿರುವುದು ಅದರ ಸೃಷ್ಟಿಗುಣದ ಅಕ್ಷಯತೆಯೆಂದಿದ್ದಾರೆ. ಈ ಗರಿಕೆಯು ಬಹೋಪಯೋಗಿಯಾಗಿ ಹಾಲು, ಮೊಸರು ನೀಡುವ ದನಗಳಿಗೆ ಮೇವಾಗಿ ತೃಪ್ತಿ ನೀಡುವುದರ ಜೊತೆಗೆ ಪ್ರಾಣಿಪಕ್ಷಿ ಹಾಗೂ ಮನುಷ್ಯನಿಗೆ ತಂಪನ್ನೀಯುತ್ತದೆಯೆಂದಿದ್ದಾರೆ.

ಗಾತ್ರದಲ್ಲಿ ಕಿರಿದಾಗಿದ್ದರೂ ಮಹತ್ವಪೂರ್ಣಸೇವೆ ನೀಡುವ ಗರಿಕೆಯ ಔಷಧೀಯ ಸಸ್ಯವೂ, ಹೌದು. ಆಯುರ್ವೇದದಲ್ಲಿ ಗರಿಕೆಯ ಔಷಧಗಳಿಗೆ ಬಹಳ ಪ್ರಾಮುಖ್ಯತೆಯಿದೆ. ಅಡ್ಡಪರಿಣಾಮಗಳಿಲ್ಲದೇ ಇಚ್ಚಿತ ಪರಿಹಾರವನ್ನು ನೀಡಬಲ್ಲ ಔಷಧವಾಗಿಯೂ ಜನಸೇವೆಗೆ ತೆರೆದುಕೊಂಡಿದೆ. ಇದರಂತೆಯೇ ಜೇನುದುಂಬಿ ಹಾಗೂ ಅಳಿಲುಗಳನ್ನು ತಮ್ಮ ತಮ್ಮ ಪಾಲಿನ ಸೇವೆ ಗೈಯ್ಯುವುದರಲ್ಲಿ ಹಿಂದೆ ಬಿದ್ದಿಲ್ಲ. ಕಿರಿದಾದ ಜೇನುದುಂಬಿ ಬಹುಪುಷ್ಪಗಳ ಸುರ್ಪವಿರಿಸಿಕೊಂಡು ಮಧುವನ್ನು ಹುಟ್ಟುಹಾಕಿ ಜೇನುಗೂಡಿನಲ್ಲಿ ಸಂಗ್ರಹಿಸಿಟ್ಟಿದ್ದನ್ನು ನಾವು ಮಾನವರು ಅಪಹರಿಸುತ್ತೇವೆ. ಅಂತೆಯೇ ಸೇವೆಯ ವಿಷಯ ಬಂದಾಗ "ಅಳಿಲಸೇವೆ" ಯೆಂದೇ ಹೆಸರು ಪಡೆದಿರುವ ಅಳಿಲು ಧರ್ಮಗ್ರಂಥ ರಾಮಾಯಣದ ನಾಯಕ ಶ್ರೀರಾಮ ರಾವಣರ ಸಮರ ಕಾಲದಲ್ಲಿ ಮಹಾಸೇತುಬಂಧ ಕಾಲದಲ್ಲಿ ಮರಳನ್ನು ತನ್ನ ಮೈಯಿಂದ ತಂದು ಹಾಕಿ ನಿರ್ಮಾಣ ಕಾರ್ಯಕ್ಕೆ ನೆರವಾದದ್ದು ಪೌರಣಿಕ ಸ್ವರಣಾಂಶವಾಗಿದೆ.

ಹೀಗೆ ಯಾವುದೇ ಜೀವಿಯಾಗಲೀ ವ್ಯಕ್ತಿಯಾಗಲೀ ತನ್ನ ಗಾತ್ರ ಸ್ಥಿತಿಯನ್ನವಲಂಬಿ ಸದೇ ಮಾಡಬೇಕಾದ ಕಾರ್ಯದಲ್ಲಿ ನೆರವಾಗಬೇಕೆಂಬ ಸದುದ್ದೇಶವನ್ನು ಹೊಂದಿದ್ದಲ್ಲಿ ಖಂಡಿತವಾಗಿಯೂ ಗ್ರಾತ್ರ ಹಾಗೂ ಸ್ಥಿತಿ ಅವಲಂಬಿನೆಯಲ್ಲದೇ ನೆರವಾಗ ಬಹುದೆಂಬುದೇ ಈ ಪದ್ಯದ ಸಾರಾಂಶವಾಗಿದೆ. ನನ್ನಿಂದೇನಾದೀತು, ನನಗಷ್ಟು ಶಕ್ತಿಯಲ್ಲಿ ಎಂಬ ಕೀಳರಿಮೆಯನ್ನು ತೊರೆದು ಧೈರ್ಯಶಾಲಿಯಾಗಿ ಕಾರ್ಯೋನ್ಮುಖನಾಗಿ ಸಫಲತೆ ಪಡೆಯನ್ನುವ ಪ್ರೇರಪಣೆ ನೀಡುತ್ತದೆ ಈ ಕಗ್ಗ ಪದ್ಯ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 20719 ಆಗಿರುತ್ತದೆ. ಇವುಗಳ ಪೈಕಿ 11334 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,385.

**ಜನವರಿ ತಿಂಗಳ ಪ್ರಕರಣಗಳು :** ಒಟ್ಟು ದಾವಾಪ್ರಕರಣ 493 ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 294.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 3913 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 491 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 3422 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 104 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 441 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜನವರಿ ತಿಂಗಳಿನಲ್ಲಿ 189 ಪ್ರಕರಣ ದಾಖಲಾಗಿರುತ್ತವೆ.

# ಕೇಂದ್ರ ಬಜೆಟ್ 2022 : ಶ್ರೀಮತಿ ನಿರ್ಮಲ ಸೀತಾರಾಮ್ ಅವರ 4ನೇ ಬಜೆಟ್ ಸಹಕಾರ ಸಂಘಗಳಿಗೆ ಡಿಜಿಟಲೀಕರಣ, ನಾಗರಿಕ ಸಬಲೀಕರಣದ, ಯುವಕರಿಗೆ ಉದ್ಯೋಗ ಸೃಷ್ಟಿಸುವ ಪ್ರಗತಿಪರ ಬಜೆಟ್



**ನವದೆಹಲಿ :** ಕೇಂದ್ರ ಕೋವಿಡ್ ಲಾಕ್‌ಡೌನ್ ಹಿಂಜರಿತದ ನಂತರ ಆರ್ಥಿಕತೆಯ ಶೀಘ್ರ ಪುನಶ್ಚೇತನ ಮತ್ತು ಆರ್ಥಿಕ ಚೇತರಿಕೆ ಭಾರತದ ಅತಿದೊಡ್ಡ ಶಕ್ತಿಯಾಗಿದೆ, ದೇಶದ ಸ್ಥಿತಿಸ್ಥಾಪಕತ್ವವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ. ತಕ್ಷಣವೇ ಶೀಘ್ರ ಆರ್ಥಿಕ ಪುನಶ್ಚೇತನ, ಆರ್ಥಿಕ ಸುಧಾರಣೆ ಭಾರತದ ಬಲವಾದ ಸ್ಥಿತಿಸ್ಥಾಪಕತ್ವ ಶಕ್ತಿಯನ್ನು ತೋರಿಸುತ್ತದೆ ಎಂದು ಕೇಂದ್ರ ಬಜೆಟ್ ಮಂಡನೆ ವೇಳೆ ಹೇಳಿದ್ದಾರೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದಿಂದ ಶತಮಾನೋತ್ಸವ ಸಂಭ್ರಮದವರೆಗಿನ 25 ವರ್ಷಗಳ ಅವಧಿಯ ಅಭಿವೃದ್ಧಿಯನ್ನು ಗುರಿಯಾಗಿಸಿ ಅರ್ಥ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಭಾಷಣದಲ್ಲಿ ತಿಳಿಸಿದ್ದಾರೆ.

ಕೋವಿಡ್–19 ಸಾಂಕ್ರಾಮಿಕದಿಂದ ಆರ್ಥಿಕವಾಗಿ ಮತ್ತು ಆರೋಗ್ಯ ವಿಷಯದಲ್ಲಿ ಕಷ್ಟ, ನೋವು, ತೊಂದರೆಗಳನ್ನು ಕಳೆದೆರಡು ವರ್ಷಗಳಲ್ಲಿ ಅನುಭವಿಸಿದ ಜನರ ಬಗ್ಗೆ ಅನುಕಂಪ ವ್ಯಕ್ತಪಡಿಸಿದ ಅವರು, ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತ ದೇಶದ ಆರ್ಥಿಕ ಬೆಳವಣಿಗೆಯನ್ನು ಶೇಕಡಾ 9.2ರಷ್ಟು ಅಂದಾಜು ಮಾಡಲಾಗಿದೆ ಎಂದಿದ್ದಾರೆ.

ಭಾರತ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ನಮ್ಮ ಸರ್ಕಾರ ಭಾರತ 100 ದೃಷ್ಟಿಕೋನವನ್ನು ಹೊಂದಿದ್ದು, ಅದನ್ನು ಕಳೆದ ಸ್ವಾತಂತ್ರ್ಯ ದಿನಾಚರಣೆ ಭಾಷಣದಲ್ಲಿ ಪ್ರಧಾನ ಮಂತ್ರಿಗಳು ಪ್ರಸ್ತಾಪಿಸಿದ್ದರು ಎಂದು ಸ್ಮರಿಸಿಕೊಂಡರು.

2022–23ರ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಲವು ಪ್ರಮುಖ ಘೋಷಣೆಗಳನ್ನು ಮಾಡಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಹಲವು ಅಗತ್ಯ ವಸ್ತುಗಳ ಇಳಿಕೆ ಆಗಿರೋದು ಗಮನಾರ್ಹ ಸಂಗತಿ. ವಿಶೇಷವಾಗಿ ಸಹಕಾರ ಕ್ಷೇತ್ರದಲ್ಲಿ ಏಕರೂಪ ತೆರಿಗೆ ಪದ್ಧತಿ ಹಾಲಿಯಿರುವ ತೆರಿಗೆ ದರವನ್ನು 15% ಇಳಿಸಿರುವುದು ನಾಗರಿಕ ಸಬಲೀಕರಣ, ಮಹಿಳಾ ಸಬಲೀಕರಣ, ಯುವಕರಿಗೆ ಉದ್ಯೋಗ ಸೃಷ್ಟಿಸುವ ಪ್ರತಿ ಶಾಲೆಯ ಪ್ರತಿ ತರಗತಿಯಲ್ಲಿ ಟಿ.ವಿ ಅಳವಡಿಸುವ ಮೂಲಕ ಶಿಕ್ಷಣದಲ್ಲಿ ನವಿನತೆಯನ್ನು ತರುವುದು ಈ ಬಜೆಟ್ ಅಭಿವೃದ್ಧಿ ಪರವಾಗಿದೆ ಎಂದು ಅರ್ಥೈಸಬಹುದು.

### ಅಮಿತಾ ಶಾ ನೇತೃತ್ವದ ಸಹಕಾರ ಸಚಿವಾಲಯಕ್ಕೆ 900 ಕೋಟಿ ರೂ :

ನೂತನವಾಗಿ ರಚಿಸಲಾದ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಸಹಕಾರ ಸಚಿವಾಲಯಕ್ಕೆ ಭರ್ಜರಿ 900 ಕೋಟಿ ರೂ. ಅನುದಾನ ಘೋಷಣೆ ಮಾಡಲಾಗಿದೆ. ಇದರಲ್ಲಿ 350 ಕೋಟಿ ರೂ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಡಿಜಿಟಲೀಕರಣಕ್ಕೆ ನೀಡಲಾಗಿದ್ದರೆ 274 ಕೋಟಿ ರೂ ಅನ್ನು ಸಹಕಾರ ಸಂಘಗಳ ಮೂಲಕ ಅಭ್ಯುದಯದ ಯೋಜನೆಗಾಗಿ ಮೀಸಲಿರಿಸಲಾಗಿದೆ.

### ಯಾವ ವಸ್ತುಗಳ ಬೆಲೆ ಇಳಿಕೆ ?

ಆಭರಣಗಳ ಸುಂಕ ಇಳಿಕೆ, ಚಿನ್ನ, ವಜ್ರಾಭರಣ ತೆರಿಗೆ ಇಳಿಕೆ, ಡೈಮಂಡ್ ಕಸ್ಟಮ್ ದರ ಶೇ. 5ರಷ್ಟು ಇಳಿಕೆ. ಬಟ್ಟೆ, ಚರ್ಮದ ಉತ್ಪನ್ನಗಳ ಬೆಲೆ ಇಳಿಕೆ, ಚಪ್ಪಲಿ ದರ ಇಳಿಕೆ, ಮೊಬೈಲ್, ಚಾರ್ಜರ್ ಬೆಲೆ ಇಳಿಕೆ, ಕೃಷಿ ಉಪಕರಣ, ವಿದೇಶಿ ಉತ್ಪನ್ನಗಳ ಬೆಲೆ ಇಳಿಕೆ,ಕಾರ್ಪೋರೇಟ್ ಸರ್ಚಾರ್ಜ್ ಶೇ. 12 ರಿಂದ 7ಕ್ಕೆ ಇಳಿಕೆ,

ಎಲೆಕ್ಟ್ರಾನಿಕ್ ಉಪಕರಣ ದರ ಇಳಿಕೆ, ಕೆಲವು ರಾಸಾಯನಿಕ ವಸ್ತುಗಳ ಆಮದು ಸುಂಕ ಇಳಿಕೆ, ಸಣ್ಣ, ಮಧ್ಯಮ ಕೈಗಾರಿಕೆಗಳಿಗೆ ಉಕ್ಕಿನ ತ್ಯಾಜ್ಯದ ಮೇಲಿನ ಕಸ್ಟಮ್ ಸುಂಕದಿಂದ ವಿನಾಯಿತಿ, ಕಲೆ ರಹಿತ ಉಕ್ಕು, ಸ್ಟೀಲ್ ಬಾರ್‌ಗಳ ಮೇಲಿನ ಕಸ್ಟಮ್ ಸುಂಕ ತೆರವು.



ಸಹಕಾರ ಸಂಘಗಳ ತೆರಿಗೆಯನ್ನು ಕೇಂದ್ರ ಸರ್ಕಾರ ಇಳಿಕೆ ಮಾಡಿದೆ. ಪ್ರಸ್ತುತ ಪಾವತಿಸುತ್ತಿದ್ದ 18% ತೆರಿಗೆಯನ್ನು 15%ಗೆ ಇಳಿಕೆ ಮಾಡಿದೆ. ಒಂದು ಕೋಟಿಗಿಂತ ಹೆಚ್ಚು ಮತ್ತು 10 ಕೋಟಿ ರೂ.ವರೆಗಿನ ಆದಾಯ ಹೊಂದಿರುವ ಸಹಕಾರ ಸಂಘಗಳ ಮೇಲಿನ ಸರ್ ಚಾರ್ಜ್ ಅನ್ನು 12% ರಿಂದ 7%ಕ್ಕೆ ಇಳಿಕೆ ಮಾಡಲಾಗಿದೆ. ಇದು ಸಹಕಾರ ಸಂಘಗಳು ಮತ್ತು ಸಂಘದ ಸದಸ್ಯರುಗಳ ಆದಾಯ ಹೆಚ್ಚಳಕ್ಕೆ ಸಹಕಾರಿಯಾಗಲಿದೆ.

- ಎಸ್.ಟಿ ಸೋಮಶೇಖರ್, ಸಹಕಾರ ಸಚಿವರು, ಕರ್ನಾಟಕ ಸರ್ಕಾರ

## ವರ್ಷದಲ್ಲಿ ಸಹಕಾರಿ ಬ್ಯಾಂಕ್‌ಗಳಿಗೆ ಏಕರೂಪದ ತಂತ್ರಾಂಶ - ಎಸ್.ಟಿ ಸೋಮಶೇಖರ್



ಸಹಕಾರಿ ಬ್ಯಾಂಕ್‌ಗಳಿಗೆ ಒಂದು ವರ್ಷದಲ್ಲಿ ಏಕರೂಪದ ತಂತ್ರಾಂಶ ರೂಪಿಸುವ ಯೋಜನೆ ಪ್ರಗತಿಯಲ್ಲಿದೆ ಎಂದು ಸಹಕಾರ ಸಚಿವ ಎಸ್.ಟಿ ಸೋಮಶೇಖರ ತಿಳಿಸಿದ್ದಾರೆ. ರಾಜ್ಯದ ಡಿಸಿಸಿ ಬ್ಯಾಂಕ್‌ಗಳ ಸಹಿತ ವಿವಿಧ ಸಹಕಾರಿ ಬ್ಯಾಂಕ್‌ಗಳಿಗೆ ಏಕರೂಪದ ತಂತ್ರಾಂಶ ಅಳವಡಿಕೆಯ ಬಗ್ಗೆ ರೂಪಿಸಲಾದ 3 ವರ್ಷಗಳ ಯೋಜನೆಯನ್ನು ಒಂದೇ ವರ್ಷದಲ್ಲಿ ಪೂರ್ಣಗೊಳಿಸಲು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕೇಂದ್ರದ ಶೇ.60 ಅಪೆಕ್ಸ್ ಬ್ಯಾಂಕ್‌ನ ಶೇ. 10. ಡಿಸಿಸಿ ಬ್ಯಾಂಕ್ ಮತ್ತು ರಾಜ್ಯ ಸರ್ಕಾರದ ಶೇ.20 ಅನುದಾನದಿಂದ ಈ ಯೋಜನೆ ಪೂರ್ಣ ಗೊಳಿಸಲಾಗುವುದು. ಇದು ಪೂರ್ಣಗೊಂಡರೆ ರಾಜ್ಯದ 5400 ಬ್ಯಾಂಕ್ ಶಾಖೆಗಳ ಆಡಳಿತ ವ್ಯವಹಾರಗಳನ್ನು ಅಪೆಕ್ಸ್ ಬ್ಯಾಂಕ್‌ನ ಒಂದೇ ಕಡೆಯಿಂದ ನಿರ್ವಹಣೆ ಮಾಡಬಹುದು ಮತ್ತು ನಿರ್ದೇಶನ ನೀಡಬಹುದಾಗಿದೆ ಇಂದವರು ಸುದ್ದಿಗಾರರಿಗೆ ತಿಳಿಸಿದರು.

ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಜತೆಗೆ ರಾಜ್ಯದಲ್ಲಿ ನಿಗದಿಯಾಗಿದ್ದ ಎರಡು ಸಭೆಗಳನ್ನು ಕೊರೊನಾ ಹಿನ್ನಲೆಯಲ್ಲಿ ಮುಂದೂಡಲಾಗಿದೆ. ಮುಂದಿನ ಸಭೆಯಲ್ಲಿ ನಬಾರ್ಡ್ ನಿಂದ ರಾಜ್ಯಕ್ಕೆ ಹೆಚ್ಚುವರಿ ಸಾಲಕ್ಕೆ ಬೇಡಿಕೆ ಸಲ್ಲಿಸಲಾಗುವುದು ಎಂದರು.

**ಸಹಕಾರ ಕಾಯ್ದೆಗೆ ತಿದ್ದುಪಡಿ ಮುಂದಿನ ಅಧಿವೇಶನದಲ್ಲಿ ಕ್ರಮ :**

ಸಹಕಾರ ಕ್ಷೇತ್ರಕ್ಕೆ ಅಡಚಣೆ ಇರುವಂತಹ ಅಂಶಗಳನ್ನು ಕೆಲವನ್ನು ಈಗಾಗಲೇ ತಿದ್ದುಪಡಿ ಮಾಡಲಾಗಿದ್ದು. ಉಳಿದ ತಿದ್ದುಪಡಿಗಳ ಬಗ್ಗೆ ಸಹಕಾರಿ ಕ್ಷೇತ್ರದ ಪ್ರಮುಖರು ಬೇಡಿಕೆ ಮಂಡಿಸಿದ್ದಾರೆ. ಅವುಗಳನ್ನು ಕೂಡ ತಿದ್ದುಪಡಿ ಮಾಡಲು ಮುಂದಿನ ಅಧಿವೇಶನದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಸೋಮಶೇಖರ್ ಆತ್ಮಶಕ್ತಿ ಸೌಧ ಉದ್ಘಾಟನೆ ಸಮಾರಂಭದಲ್ಲಿ ತಿಳಿಸಿದರು.

ದೊಡ್ಡ ಮೊತ್ತದ ಸಹಕಾರಿ ಸಾಲ ಮರು ಪಾವತಿಸದೆ ಸುಸ್ಥಿದಾರರಾಗಿರುವವರು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹತೆ ವಿಚಾರ, ಸಹಕಾರಿ ಸಂಸ್ಥೆಯ ನಿರ್ದೇಶಕರು ಅಧಿಕಾರಾವಧಿಯು ಎರಡೂವರೆ ವರ್ಷದೊಳಗೆ ಸಾವನ್ನಪ್ಪಿದರೆ ತೆರವಾದ ಸ್ಥಾನಕ್ಕೆ ಸಹಕಾರಿ ಸಾಲ ಮರು ಪಾವತಿಸದೆ ಸುಸ್ತಿದಾರರಾಗಿರುವವರು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹತೆ ವಿಚಾರ, ಸಹಕಾರಿ ಸಂಸ್ಥೆಯ ನಿರ್ದೇಶಕರು ಅಧಿಕಾರಾವಧಿಯ ಎರಡೂವರೆ ವರ್ಷದೊಳಗೆ ಸಾವನ್ನಪ್ಪಿದರೆ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಸುವುದು ಮತ್ತಿತರ ಕೆಲವು ಅಂಶಗಳು ತಿದ್ದುಪಡಿಯ ಪ್ರಮುಖ ಅಂಶಗಳು ಕೇಂದ್ರ ಸರಕಾರದ ಮಟ್ಟದಲ್ಲಿ ತಿದ್ದುಪಡಿ ಮಾಡಬೇಕಾದ ಕೆಲವು ಅಂಶಗಳನ್ನು ಕೇಂದ್ರಕ್ಕೆ ಕಳುಹಿಸಿಕೊಡಲಾಗಿದೆ ಎಂದರು.

## ಉನ್ನತ ಶಿಕ್ಷಣ ಸಚಿವ ಶ್ರೀ ಡಾ. ಸಿ.ಎನ್ ಅಶ್ವತ್ಥ ನಾರಾಯಣ ಹಾಗೂ ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ ರವರಿಗೆ ಅಭಿನಂದನಾ ಸಮಾರಂಭ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೂತನ ಕಟ್ಟಡ "ಸೌಹಾರ್ದ ಸಹಕಾರಿ ಸೌಧ"ಕ್ಕೆ ಪ್ರಥಮ ಬಾರಿಗೆ ಆಗಮಿಸಿದ ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಎಸ್ ಟಿ ಸೋಮಶೇಖರ್‌ರವರಿಗೆ ಹಾಗೂ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಸಿ ಎನ್ ಅಶ್ವತ್ಥನಾರಾಯಣ ರವರಿಗೆ ದಿನಾಂಕ 07ನೇ ಜನವರಿ 2022ರಂದು ಅಭಿನಂದನಾ ಸಮಾರಂಭವನ್ನು ಸಂಯುಕ್ತ ಸಹಕಾರಿ ವತಿಯಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆ ಮಾಡಿದ ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಎಸ್ ಟಿ ಸೋಮಶೇಖರ್‌ರವರು ಅಭಿನಂದನೆ ಸ್ವೀಕರಿಸಿ ಮಾತನಾಡುತ್ತಾ, ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಬಹಳ ವ್ಯವಸ್ಥಿತವಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂಚೂಣಿಯಲ್ಲಿ ಇದೆ. ಇದಕ್ಕಾಗಿ ಈ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಆಡಳಿತ ಮಂಡಲಿಯವರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಯಾವುದೇ ಒಂದು ಅಥವಾ ಎರಡು ಸಂಸ್ಥೆಯವರು ಕೆಟ್ಟದ್ದಾಗಿ ಕೆಲಸ ಕಾರ್ಯಗಳನ್ನು ಮಾಡಿದಾಗ ಅದು ಇಡೀ ಸಹಕಾರಿ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ ಮೀಡಿಯಾಗಳಲ್ಲಿ ಅದನ್ನೇ ವೈಭವೀಕರಿಸಲಾಗುತ್ತದೆ ಕೆಟ್ಟ ಕೆಲಸ ಮಾಡಿದವರನ್ನು ಅಂದರೆ ಮೋಸ ವಂಚನೆಗಳನ್ನು ಮಾಡಿದವರ ಮೇಲೆ ಕಠಿಣ ಶಿಕ್ಷೆಯನ್ನು ಕೊಡುವಂತಹ ಕಾನೂನು ತಿದ್ದುಪಡಿಗಳಿಗೆ ಕ್ರಮವಿಡಲಾಗುವುದು. ಈ ಬಗ್ಗೆ ಸರ್ಕಾರಿ ಅಧಿಕಾರಿಗಳ, ಸಹಕಾರಿ



**ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಸಿ ಎನ್ ಅಶ್ವತ್ಥನಾರಾಯಣ್ ಇವರಿಗೆ ಸನ್ಮಾನ**



**ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಎಸ್ ಟಿ ಸೋಮಶೇಖರ್‌ರವರಿಗೆ ಸನ್ಮಾನ**

ಇಲಾಖಾ ಅಧಿಕಾರಿಗಳ, ನಿವೃತ್ತ ಅಧಿಕಾರಿಗಳ, ಹಿರಿಯ ಸಹಕಾರಿಗಳೊಂದು ಸಭೆಯನ್ನು ಜರುಗಿಸಿ ಸಹಕಾರ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚಿಸುವುದಕ್ಕೆ ಅಗತ್ಯ ತಿದ್ದುಪಡಿಗಳನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸಲು ಕ್ರಮವಿಡಲಾಗುವುದು.

ಸೌಹಾರ್ದ ಸಹಕಾರಿ ಕ್ಷೇತ್ರ ರಾಜ್ಯದಲ್ಲಿ ಸಾವಿರಾರು ಕೋಟಿ ಠೇವಣಿಗಳನ್ನು ಹೊಂದಿದೆ, ಸಾವಿರಾರು ಕೋಟಿ ಸಾಲಗಳನ್ನು ನೀಡಿದೆ, ಸಾವಿರಾರು ಜನಕ್ಕೆ ಉದ್ಯೋಗವನ್ನು ನೀಡಿದೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಚಳುವಳಿಯ ನೇತಾರನಾಗಿ ರಾಜ್ಯದ ಸಂಯುಕ್ತ ಸಹಕಾರಿಯು ಬೆಂಗಳೂರು, ಬೆಳಗಾವಿ & ಕಲಬುರಗಿಗಳಲ್ಲಿ ತನ್ನದೇ ಆದ ಸ್ವಂತ ಕಟ್ಟಡಗಳನ್ನು ಹೊಂದುತ್ತಿರುವುದು & ಮೈಸೂರಿನಲ್ಲಿಯೂ ಕೂಡ ಕಟ್ಟಡವನ್ನು ಹೊಂದಿರುವುದು ಸಂತೋಷದ ವಿಷಯ. ಇದಕ್ಕಾಗಿ ಈ ಸಂಸ್ಥೆಯ ಆಡಳಿತ ಮಂಡಲಿಯವರನ್ನು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವರಾದ ಡಾ. ಸಿ ಎನ್ ಅಶ್ವತ್ಥನಾರಾಯಣ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅಭಿನಂದನೆ ಸ್ವೀಕರಿಸಿ ಮಾತನಾಡುತ್ತಾ, ಸಮಾಜದಲ್ಲಿ ಸಹಕಾರ ಕ್ಷೇತ್ರದ ಪಾತ್ರ ಅತ್ಯಂತ ಮಹತ್ವದ್ದು, ಉಳ್ಳವರಿಂದ ಠೇವಣಿ ಸಂಗ್ರಹಿಸಿ ಇಲ್ಲದವರಿಗೆ ಆರ್ಥಿಕ ನೆರವು ನೀಡುವ ಮಹತ್ವದ ಕೆಲಸವನ್ನು ಈ ಸಹಕಾರ ಕ್ಷೇತ್ರ ಮಾಡುವುದರಿಂದ ಸಮಾಜದಲ್ಲಿ ದುರ್ಬಲವಾಗಿರುವವರ ಸಬಲೀಕರಣ ಮಾಡಿದಂತಾಗುತ್ತದೆ. ಈ ಸಹಕಾರಿ ಕ್ಷೇತ್ರ ಇನ್ನು ಬಲವಾಗಿ ಬೆಳೆಯಬೇಕು, ವಿಶೇಷವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಮಾತೃ ಸಂಸ್ಥೆಯಾಗಿರುವ ಸಂಯುಕ್ತ ಸಹಕಾರಿಯ ಸ್ವಂತ ಕಟ್ಟಡ ಮಲ್ಲೇಶ್ವರದಲ್ಲಿ ನಿರ್ಮಾಣವಾಗಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಒಂದು ಆನೆ ಬಲ ಬಂದಂತಾಗಿದೆ ಎಂದು ತಿಳಿಸುತ್ತಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರನ್ನು ಅಭಿನಂದಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಸ್ವಾಗತ ಕೋರಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿಯವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ, ಕರ್ನಾಟಕದಲ್ಲಿ ಈ 21 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 5436 ಸೌಹಾರ್ದ ಸಹಕಾರಿಗಳು, 62 ಲಕ್ಷ ಸದಸ್ಯರು, ರೂ. 989 ಕೋಟಿ ಶೇರು ಬಂಡವಾಳ, ರೂ. 2,180 ಕೋಟಿ ಕಾಯ್ದಿಟ್ಟ ನಿಧಿಗಳು, ರೂ. 24,172 ಕೋಟಿ ಠೇವಣಿಗಳು, ರೂ. 27,663 ಕೋಟಿ ದುಡಿಯುವ ಬಂಡವಾಳ, ರೂ. 321 ಕೋಟಿ ಲಾಭ, 1456 ಇ–ಸ್ಟಾಂಪಿಂಗ್ ಕೇಂದ್ರಗಳು ಹಾಗೂ ಒಟ್ಟು 55,000 ಜನಕ್ಕೆ ಉದ್ಯೋಗ ಒದಗಿಸಿರುವ ಹೆಮ್ಮೆಯ ಕ್ಷೇತ್ರ ಈ ಸೌಹಾರ್ದ ಸಹಕಾರಿ ಕ್ಷೇತ್ರ. ಎಂದು ತಿಳಿಸುತ್ತಾ ಸಚಿವದ್ವಯರಾದ ಸಹಕಾರ ಸಚಿವರಾದ ಸನ್ಮಾನ್ಯ ಶ್ರೀ ಎಸ್ ಟಿ ಸೋಮಶೇಖರ್ ಹಾಗೂ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಸಿ. ಎನ್. ಅಶ್ವತ್ಥ ನಾರಾಯಣ ಇವರು ಸಂಯುಕ್ತ ಸಹಕಾರಿಯ ನೂತನ ಕಟ್ಟಡಕ್ಕೆ ಪ್ರಥಮ ಬಾರಿಗೆ ಆಗಮಿಸಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿದಂತ್ತಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಕಲಬುರಗಿ ಸಂಸದರಾದ ಶ್ರೀ ಉಮೇಶ್ ಜಾಧವ್, ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಅರುಣ ಶಹಪೂರ್, ಶ್ರೀ ಪುಟ್ಟಣ್ಣ, ಶ್ರೀ ಆಯನೂರು ಮಂಜುನಾಥ, ಶ್ರೀ ಸಂಕನೂರ ಎಸ್ ವಿ., ಶ್ರೀ ಹನುಮಂತ ನಿರಾಣಿ, ಶ್ರೀ ಅ ದೇವೇಗೌಡ, ಶ್ರೀ ನಾರಾಯಣಸ್ವಾಮಿ ವೈ ಎ, ಶ್ರೀ ಚಿದಾನಂದಗೌಡ, ಶ್ರೀ ಶಶಿಲ್ ನಮೋಶಿ, ಶ್ರೀ ಕೆ ಟಿ ಶ್ರೀಕಂಠೇಗೌಡ, ಶ್ರೀ ಬೋಜೇಗೌಡ ಇವರುಗಳನ್ನು ಹಾಗು ಮಾಜಿ ಸಚಿವೆ ಶ್ರೀಮತಿ ಬಿ ಟಿ ಲಲಿತಾ ನಾಯಕ್ ಹಾಗು ಹಲವಾರು ಗಣ್ಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತೀಕರ್, ಶ್ರೀ ಬಿ ಎಸ್ ಗುಂಡೂರಾವ್ ಹಾಗು ಅನೇಕ ಸಹಕಾರಿ ಗಣ್ಯರು, ಸಹಕಾರಿ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಅಶ್ವಥನಾರಾಯಣ್, ಉಪನಿಬಂಧಕರಾದ ಶ್ರೀ ಮಂಜುನಾಥ ಸಿಂಗ್, ಶ್ರೀ ಶಶಿಧರ್, ಹಾಗೂ ಸಹಕಾರಿ ಇಲಾಖಾ ಅಧಿಕಾರಿಗಳು ಹಾಗೂ ಸಹಕಾರಿಗಳು ಉಪಸ್ಥಿತರಿದ್ದರು.

ಕೊನೆಯಲ್ಲಿ ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಂದನಾರ್ಪಣೆ ಮಾಡಿದರು.



ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರು



ಕಲಬುರಗಿ ಸಂಸದರಾದ ಶ್ರೀ ಉಮೇಶ್ ಜಾಧವ್ ಇವರಿಗೆ ಸನ್ಮಾನ

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಶ್ರೀ ಅರುಣ್ ಶಹಪೂರ್ ಭೇಟಿ



**ಬೆಂಗಳೂರು** : ದಿನಾಂಕ 05.01.2022 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ವಿಧಾನ ಪರಿಷತ್ ಸದಸ್ಯರು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಅರುಣ ಶಹಪೂರ್, ಇವರು ಭೇಟಿ ನೀಡಿ ಸಹಕಾರ ಕ್ಷೇತ್ರದ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಈ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಟಾಸ್ಕಫೋರ್ಸ್ ಸಭೆ ಬೆಳಗಾವಿ ಹಾಗೂ ಬೆಂಗಳೂರು




**ಬೆಳಗಾವಿ :** ದಿನಾಂಕ 25 ಜನವರಿ 2022 ರಂದು ಬೆಳಗಾವಿ ಪ್ರಾಂತೀಯ ಕಛೇರಿಯ ವತಿಯಿಂದ ಹೋಟೆಲ್ ಸನ್ಮಾನ, ಬೆಳಗಾವಿ ಇಲ್ಲಿ ಟಾಸ್ಕಫೋರ್ಸ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ್ ಇವರುಗಳು ಉಪಸ್ಥಿತ–ರಿದ್ದರು. ಹಾಗೂ ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಟಾಸ್ಕಫೋರ್ಸ ವಿಭಾಗದ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಮತ್ತು ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಭಾಗವಹಿಸಿದ್ದರು. ಸಭೆಯಲ್ಲಿ ನ್ಯಾಯವಾದಿಗಳು, ಸನ್ನದು ಲೆಕ್ಕ ಪರಿಶೋಧಕರು ಹಾಗೂ ನಿವೃತ್ತ ಇಲಾಖಾ ಅಧಿಕಾರಿಗಳು ಹೀಗೆ ಒಟ್ಟು 55 ಜನ ಭಾಗವಹಿಸಿ ಸಲಹೆ, ಅಭಿಪ್ರಾಯಗಳನ್ನು ಮಾನ್ಯ ಅಧ್ಯಕ್ಷರೊಂದಿಗೆ ಹಂಚಿಕೊಂಡರು.



**ಬೆಂಗಳೂರು** : ದಿನಾಂಕ 29.01.2022 ರಂದು ಬೆಳಿಗ್ಗೆ 11:00 ಗಂಟೆಗೆ ಟಾಸ್ಕ್ ಫೋರ್ಸ್ ವತಿಯಿಂದ ಸೌಹಾರ್ದ ಸಹಕಾರಿ ಸೌಧ, ಬೆಂಗಳೂರು ಇಲ್ಲಿ ಟಾಸ್ಕ್‌ಫೋರ್ಸ್ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಎಸ್. ಗುಂಡೂರಾವ್ ಮತ್ತು ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ಇವರುಗಳು ಉಪಸ್ಥಿತರಿದ್ದರು ಹಾಗೂ ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಬೆಂಗಳೂರು ಮತ್ತು ಮೈಸೂರು ಪ್ರಾಂತದ ಟಾಸ್ಕ್‌ಫೋರ್ಸ್ ಮುಖ್ಯಸ್ಥರು ಹಾಗೂ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಮತ್ತು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೊರಟಕರ ಇವರುಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ನ್ಯಾಯವಾದಿಗಳು, ಸನ್ನದು ಲೆಕ್ಕಪರಿಶೋಧಕರು ಹಾಗೂ ನಿವೃತ್ತ ಇಲಾಖಾ ಅಧಿಕಾರಿಗಳು ಹೀಗೆ ಒಟ್ಟು 41 ಜನ ಭಾಗವಹಿಸಿ ಸಲಹೆ, ಅಭಿಪ್ರಾಯಗಳನ್ನು ಮಾನ್ಯ ಅಧ್ಯಕ್ಷರೊಂದಿಗೆ ಹಂಚಿಕೊಂಡರು.

## ಶಿವಶ್ರೀ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಿಶೇಷ ಸಭೆ

**ಬೆಂಗಳೂರು** : ದಿನಾಂಕ 29.01.2022 ರಂದು ಮಧ್ಯಾಹ್ನ 3:30 ಗಂಟೆಗೆ ಬೆಂಗಳೂರು ಪ್ರಾಂತೀಯ ಕಚೇರಿ ವತಿಯಿಂದ ಸೌಹಾರ್ದ ಸಹಕಾರಿ ಸೌಧ, ಬೆಂಗಳೂರು ಇಲ್ಲಿ ಶಿವಶ್ರೀ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್ ತುಮಕೂರು. ಇದರ ಆಡಳಿತ ಮಂಡಳಿಯ ವಿಶೇಷ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ಇವರುಗಳು ಉಪಸ್ಥಿತ–ರಿದ್ದರು ಹಾಗೂ ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್, ಬೆಂಗಳೂರು ಮತ್ತು ಮೈಸೂರು ಪ್ರಾಂತದ ಟಾಸ್ಕ್‌ಫೋರ್ಸ್ ಮುಖ್ಯಸ್ಥರು ಹಾಗೂ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಮತ್ತು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೊರಟಕರ ಇವರುಗಳು ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಯ ನಿರ್ದೇಶಕರುಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು ಸದರಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಸದರಿ ಸಹಕಾರಿಯ ಆರ್ಥಿಕ ಚಟುವಟಿಕೆಗಳ ಕುರಿತಂತೆ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಿದರು.

## ಸಮನ್ವಯ ಸಮಿತಿ ಸಭೆ

**ತುಮಕೂರು** : ದಿನಾಂಕ 31.01.2022ರಂದು ತುಮಕೂರು ಸಹಕಾರ ಸಂಘಗಳ ಲೆಕ್ಕಪರಿಶೋಧನ ಇಲಾಖೆ ವತಿಯಿಂದ ಉಪ ನಿಬಂಧಕರ ಕಚೇರಿಯಲ್ಲಿ ತುಮಕೂರು ಜಿಲ್ಲೆಯ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ತುಮಕೂರು ಜಿಲ್ಲೆಯ ಸಹಕಾರಿಗಳ ಉಪನಿಬಂಧಕರಾದ ಶ್ರೀ ಆರ್.ಜೆ ಕಾಂತರಾಜು ಹಾಗೂ ತುಮಕೂರು ಜಿಲ್ಲೆಯ ಲೆಕ್ಕಪರಿಶೋಧನ ಜಂಟಿ ನಿರ್ದೇಶಕರಾದ ಶ್ರೀ ಎಂ.ರಾಮಯ್ಯ ರವರು ಜಂಟಿಯಾಗಿ ವಹಿಸಿದ್ದರು. ಸಭೆಯಲ್ಲಿ ಜಿಲ್ಲೆಯ ಸಹಾಯಕ ನಿಬಂಧಕರು, ಜಿಲ್ಲೆಯ ಸಹಕಾರ ಅಭಿವೃದ್ಧಿ ಅಧಿಕಾರಿಗಳು ಹಾಗೂ ಲೆಕ್ಕಪರಿಶೋಧನ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

## ಸಂಯುಕ್ತ ಸಹಕಾರಿಯ ದೂರವಾಣಿ ಸಂಖ್ಯೆಗಳು

**ಕೇಂದ್ರ ಕಛೇರಿ** : 080–23378375–80, 23474408, 23573291

**ಇ–ಸ್ಟಾಂಪಿಂಗ್ ವಿಭಾಗ** : 080–23378375–80, 23474408, 23573291

**ಬೆಂಗಳೂರು ಪ್ರಾಂತೀಯ ಕಛೇರಿ** : 080–23525546

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ** : 080–23449933/34

# ಸಂಭ್ರಮದ ಗಣರಾಜ್ಯೋತ್ಸವ ಆಚರಣೆ

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 73ನೇ ಗಣರಾಜ್ಯೋತ್ಸವ ದಿನಾಚರಣೆ.



**ಬೆಂಗಳೂರು :** ಸಂಯುಕ್ತ ಸಹಕಾರಿಯ ನೂತನ ಕಟ್ಟಡ "ಸೌಹಾರ್ದ ಸಹಕಾರಿ ಸೌಧ"ದಲ್ಲಿ 73ನೇ ಗಣರಾಜ್ಯೋತ್ಸವದ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ, ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಹಾಗೂ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಹಾಗೂ ದಾವಾ ಪಂಚಾಯ್ತಿ ನ್ಯಾಯಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ :** ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ 73ನೇ ಗಣರಾಜ್ಯೋತ್ಸವದ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳಗಾವಿ :** ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ 73ನೇ ಗಣರಾಜ್ಯೋತ್ಸವದ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ, ನೆರವೇರಿಸಿದರು. ಕಾರ್ಯಕ್ರಮದಲ್ಲಿ ಟಾಸ್ಕ ಫೋರ್ಸ್ ವಿಭಾಗದ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು :** ಮೈಸೂರು ಪ್ರಾಂತೀಯ ಕಛೇರಿಯಲ್ಲಿ 73ನೇ ಗಣರಾಜ್ಯೋತ್ಸವದ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಮೈಸೂರು, ಮಂಡ್ಯ, ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ನವೀನ ಹೆಚ್. ಎನ್ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳು ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಹಾಗೂ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೀದರ :** ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಛೇ–ರಿಯಲ್ಲಿ 73ನೇ ಗಣರಾಜ್ಯೋತ್ಸವ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ನೇರವೆರಿಸಿದ್ದರು. ಕಾರ್ಯಕ್ರಮದಲ್ಲಿ ಸರ್ಕಾರಿ ಅಭಿಯೋಜಕರಾದ ರಾಮಸಿಂಗ್ ರಾಠೋಡ, ಭೀಮಾಶಂಕರ ಅಂಬಲಗಿ, ಹಿರಿಯ ಸಹಕಾರಿಗಳಾದ ಮಾನಶೆಟ್ಟಿ ಬೆಳಕೆರಿ, ಒಕ್ಕೂಟ ನಿರ್ದೇಶಕರಾದ ಶಿವಬಸಪ್ಪ ಚನ್ನಮಲೆ, ಸಂಜಯ ಕ್ಯಾಸಾ, ಶ್ರೀಕಾಂತ ಸ್ವಾಮಿ ಸೋಲಪುರ, ಸರ್ಕಾರಿ ಅಭಿಯೋಜಕರಾದ ರಾಮಸಿಂಗ್ ರಾಠೋಡ, ಭೀಮಾಶಂಕರ ಅಂಬಲಗಿ, ಹಿರಿಯ ಸಹಕಾರಿಗಳಾದ ಅಣ್ಣಾರಾವ ನಾವದಗೇರಿ, ಮಹೇಶ್ವರ ಸ್ವಾಮಿ, ಶ್ರೀಕಾಂತ ಮೊದಿ, ರಾಜಕುಮಾರ ಚಟ್ನನಳ್ಳಿ, ಕುಬೇರಪ್ಪ, ರತ್ನಸಾಗರ, ಮುಖ್ಯ ಕಾರ್ಯನಿರ್ವಾಹಕ ಅಮೃತ ಹೊಸಮನಿ ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ 2022ರ ಡೈರಿ ಬಿಡುಗಡೆ



**ಬೆಂಗಳೂರು** : ದಿನಾಂಕ 18.01.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 2022ರ ಡೈರಿಯನ್ನು ಸಹಕಾರಿಗಳ ನಿಬಂಧಕರಾದ ಶ್ರೀ ಎಸ್. ಜಿಯಾಉಲ್ಲಾ ಇವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಹಕಾರ ಇಲಾಖೆಯ ಅಧಿಕಾರಿಗಳಾದ ಶ್ರೀ ಕೆ.ಎಸ್. ನವೀನ್, ಶ್ರೀಮತಿ ಕೆ.ಎಂ ಆಶಾ, ಶ್ರೀ ಸಿ. ಪ್ರಸಾದ್ ರೆಡ್ಡಿ, ಶ್ರೀ ಶಶಿಧರ್, ಶ್ರೀ ಉಮೇಶ್, ಶ್ರೀ ಮಂಜುನಾಥ್ ಸಿಂಗ್, ಶ್ರೀ ಶ್ರೀಧರ, ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಉಪಸ್ಥಿತರಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು

**ಬೆಂಗಳೂರು** : ದಿನಾಂಕ 03.01.2022 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಸೌಹಾರ್ದ ಸಹಕಾ-ರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ಸಭೆ/"ಲೆಕ್ಕಪರಿಶೋಧನಾ ವರದಿ ತಯಾರಿ" ಹಾಗೂ "ಆದಾಯ ತೆರಿಗೆ, ಜಿಎಸ್.ಟಿ" ಕುರಿತ ತರಬೇತಿ ಕಾರ್ಯಕ್ರಮವನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು. ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಜಯಪ್ರಕಾಶ್ ರವರು, ಉಪನ್ಯಾಸಕರು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ, ಇವರು ಉಪಸ್ಥಿತರಿದ್ದರು. 108 ಸೌಹಾರ್ದ ಸಹಕಾರಿಗಳಿಂದ 117 ಪ್ರತಿನಿಧಿಗಳು ಭಾಗವಹಿಸಿದ್ದರು.

**ಶಿವಮೊಗ್ಗ** : ದಿನಾಂಕ 01.01.2022 ರಂದು ಸೌಹಾರ್ದ ಸಹಕಾರಿ ದಿನಾಚರಣೆ, ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಹಾಗೂ "ಲೆಕ್ಕಪರಿಶೋಧಕರಿಗೆ ಸಲ್ಲಿಸಬೇಕಾದ ದಾಖಲೆಗಳು" ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಸರ್ಕಾರಿ ನೌಕರರ ಭವನ, ಶಿವಮೊಗ್ಗ, ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಅಶ್ವಥ್ ನಾರಾಯಣ ರವರು, ಬೆಂಗಳೂರು ಪ್ರಾಂತದ ಜಂಟಿ ನಿಬಂಧಕರು, ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಧ್ವಜಾರೋಹಣ, ಉದ್ಘಾಟನೆ ಹಾಗೂ ಸಂಯು-ಕ್ತ ಸಹಕಾರಿಯ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಅಧ್ಯಕ್ಷತೆಯನ್ನು ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಇವರು ವಹಿಸಿದ್ದರು. ಶ್ರೀ ನಾಗೇಶ್ ಡೋಂಗ್ರೆ ರವರು, ಶಿವಮೊಗ್ಗ ಜಿಲ್ಲೆಯ ಉಪನಿಬಂಧಕರು ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ, ಇವರು ನೆರವೇರಿಸಿದರು. ವಂದನಾರ್ಪಣೆಯನ್ನು ಶ್ರೀ ಹರಿಕೃಷ್ಣ ರವರು, ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರು ನೆರವೇರಿಸಿದರು. 89 ಸೌಹಾರ್ದ ಸಹಕಾರಿಗಳಿಂದ 118 ಜನರು ಭಾಗವಹಿಸಿದ್ದರು.

**ಕೋಲಾರ** : ದಿನಾಂಕ 07.01.2022 ರಂದು ಕೋಲಾರ ಜಿಲ್ಲಾ ಸಹಕಾರ ಯೂನಿಯನ್, ಕೋಲಾರ, ಇಲ್ಲಿ ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾ-ರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ಸಭೆ/"ಆದಾಯ ತೆರಿಗೆ, ಜಿಎಸ್.ಟಿ ಮತ್ತು ನಗದು ವ್ಯವಹಾರ ಮತ್ತು ಬಡ್ಡಿಯೇತರ ಆದಾಯ ಮೂಲಗಳು" ಕುರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಜಿಲ್ಲಾ ಒಕ್ಕೂಟದ ಮುಖ್ಯ ಪ್ರವರ್ತಕರಾದ ಶ್ರೀ ಅಮರ್ ಆರ್. ರವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೋಲಾರ ಜಿಲ್ಲಾ ಸಹಕಾರ ಯೂನಿಯನ್ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಭಾರತಿ ರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸ್ವರ್ಣವಿಲಾಸ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಬಸವರಾಜು ಕೆ.ಎಮ್. ರವರು ನಡೆಸಿಕೊಟ್ಟರು. 19 ಸೌಹಾರ್ದ ಸಹಕಾರಿಗಳಿಂದ 24 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಾವಣಗೆರೆ :** ದಿನಾಂಕ 04.01.2022 ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ಸಭೆ/"ಆದಾಯ ತೆರಿಗೆ, ಜಿಎಸ್.ಟಿ ಮತ್ತು ನಗದು ವ್ಯವಹಾರ ಮತ್ತು ಬಡ್ಡಿಯೇತರ ಆದಾಯ ಮೂಲಗಳು" ಕುರಿತ ತರಬೇತಿ ಕಾರ್ಯಕ್ರಮವನ್ನು ಹೋಟೇಲ್ ಅಶೋಕ ಇನ್, ಹಳೆಯ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಹಿಂಭಾಗ, ಆನಂದ್ ರೆಸಿಡೆನ್ಸಿ ಪಕ್ಕದ ರಸ್ತೆ, ಪಿ.ಬಿ ರಸ್ತೆ, ದಾವಣಗೆರೆ. ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್. ಎಮ್. ನಾಗರಾಜ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ರವರು, ಶ್ರೀ ನಾಗರಾಜ್ ಎಮ್, ವ್ಯವಸ್ಥಾಪಕ ನಿರ್ದೇಶಕರು, ಮನಿಪ್ಲಾಂಟ್ ಸೌಹಾರ್ದ ಸಹಕಾರಿ ನಿ,. ದಾವಣಗೆರೆ, ಇವರು ಭಾಗವಹಿಸಿದ್ದರು. ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ, ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜ–ಕರಾದ ಶ್ರೀ ನಟರಾಜ ರವರು ನೆರವೇರಿಸಿದರು. 50 ಸೌಹಾರ್ದ ಸಹಕಾ–ರಿಗಳಿಂದ 65 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿತ್ರದುರ್ಗ :** ದಿನಾಂಕ 05.01.2022 ರಂದು ದಿ ಮರ್ಚಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ,. ಚಿತ್ರದುರ್ಗ ಇಲ್ಲಿ ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ಸಭೆ/"ಆದಾಯ ತೆರಿಗೆ, ಜಿಎಸ್.ಟಿ ಮತ್ತು ನಗದು ವ್ಯವಹಾರ" ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿ ರವರು, ಶ್ರೀ ಬಿ.ವಿ ರವೀಂದ್ರನಾಥ್, ಲೆಕ್ಕಪರಿಶೋಧಕರು, ಸಾಗರ, ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತ, ಇವರು ಉಪಸ್ಥಿತರಿದ್ದರು. 40 ಸೌಹಾರ್ದ ಸಹಕಾರಿಗಳಿಂದ 50 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಬಳ್ಳಾಪುರ :** ದಿನಾಂಕ 06.01.2022 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಚಿಕ್ಕಬಳ್ಳಾಪುರ, ಇಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಮುಖ್ಯ ಕಾರ್ಯನಿರ್ವಾಹಕರ ಸಭೆ/"ಆದಾಯ ತೆರಿಗೆ, ಜಿಎಸ್.ಟಿ ಮತ್ತು ನಗದು ವ್ಯವಹಾರ ಮತ್ತು ಬಡ್ಡಿಯೇತರ ಆದಾಯ ಮೂಲಗಳು" ಕುರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಚಿಕ್ಕಬಳ್ಳಾಪುರ ಸಹಕಾರಿ ಉಪನಿಬಂಧಕರಾದ ಶ್ರೀಮತಿ ಬಿ. ಮಂಜುಳಾ ರವರು ಹಾಗೂ ಸಹಾಯಕ ನಿಬಂಧಕರಾದ ಶ್ರೀ ವೆಂಕಟೇಶ್ ಮೂರ್ತಿ ರವರು ವಹಿಸಿದ್ದರು. ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಬೆಂಗಳೂರು ನಗರ(1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಮ್. ರವರು ನಡೆಸಿಕೊಟ್ಟರು. 27 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಮಗಳೂರು :** ದಿನಾಂಕ 07.01.2022 ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್.ಎನ್ ವಿಶ್ವನಾಥ ರವರು, ಮಾಜಿ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಸುಬ್ರಹ್ಮಣ್ಯ ವೈ.ಎಸ್, ಅಧ್ಯಕ್ಷರು, ಯಡಗೆರೆ ಸೌಹಾರ್ದ ಪತ್ತಿನ ಸಹಕಾರಿ ನಿ., ಕೊಪ್ಪ ಇವರು ನೆರವೇರಿಸಿದರು. ಶಾಸನಾತ್ಮಕ ಕರ್ತವ್ಯಗಳು ವಿಷಯದ ಕುರಿತು ಉಪನ್ಯಾಸಕರಾಗಿ ಶ್ರೀ ಶಿವಕುಮಾರ ಬಿರಾದಾರ, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಸಹಕಾರಿಗಳ ವಾರ್ಷಿಕ ಲೆಕ್ಕಪರಿಶೋಧನೆ ವರದಿ ಸಿದ್ಧತೆ ಮತ್ತು ಪ್ರಕ್ರಿಯೆಗಳು ವಿಷಯದ ಕುರಿತು ಶ್ರೀ ರವಿಕುಮಾರ, ಹಿರಿಯ ನಿರೀಕ್ಷಕರು, ಸಹಕಾರಿಗಳ ಲೆಕ್ಕಪರಿಶೋಧನೆ ಇಲಾಖೆ, ಚಿಕ್ಕಮಗಳೂರು ಇವರು ಉಪನ್ಯಾಸ ನೀಡಿದರು. ನಂತರದಲ್ಲಿ ಪ್ರತಿನಿಧಿಗಳಿಗೆ ನೂತನ ವರ್ಷದ ಸಂಯುಕ್ತ ಸಹಕಾರಿಯ ಕ್ಯಾಲೆಂಡರ್ ವಿತರಿಸಲಾಯಿತು.

ಸಭೆ ಕಾರ್ಯಕ್ರಮದ ನಿರೂಪಣೆ ಶ್ರೀ ಜಗತ್ ವಿ ಗೌಡ, ಸಿಇಓ, ಸುಭದ್ರ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಳೆಹೊನ್ನೂರು, ಇವರು ಸ್ವಾಗತ ಮತ್ತು ಪರಿಚಯ ಶ್ರೀ ಗೌತಮ್ ಜಿ.ಎಂ, ಸಿಇಓ, ಮೂಡಿಗೆರೆ ಪತ್ತಿನ ಸೌಹಾರ್ದ ಸಹಕಾರಿ ನಿ., ಮೂಡಿಗೆರೆ ಇವರು ವಂದನಾರ್ಪಣೆ ಶ್ರೀ ಗುರುರಾಜ್ ಎಸ್.ಸಿ, ಸಿಇಓ, ಧಾತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಇವರು ಮಾಡಿದರು. ಸದರಿ ಸಭೆಯಲ್ಲಿ 18 ಸೌಹಾರ್ದ ಸಹಕಾರಿಗಳಿಂದ 23 ಪ್ರತಿನಿಧಿಗಳು ಇತರೆ 05 ಜನರು ಸೇರಿ ಒಟ್ಟು 28 ಪ್ರತಿನಿಧಿಗಳು ಹಾಜರಾಗಿ ಸದುಪಯೋಗ ಪಡೆದುಕೊಂಡರು.

**ತುಮಕೂರು :** ದಿನಾಂಕ 10.01.2022 ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕನ್ನಡ ಭವನ, ತುಮಕೂರು ಜಿಲ್ಲಾ ಕನ್ನಡ ಸಾಹಿತ್ತಯ ಪರಿಷತ್ತು, ತುಮಕೂರು ಇಲ್ಲಿ, ಮುಖ್ಯ ಕಾರ್ಯನಿರ್ವಾಹಕರ ಸಭೆ/"ಆದಾಯ ತೆರಿಗೆ, ಜಿಎಸ್.ಟಿ ಮತ್ತು ನಗದು ವ್ಯವಹಾರ ಮತ್ತು ಬಡ್ಡಿಯೇತರ ಆದಾಯ ಮೂಲಗಳು" ಕುರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತುಮಕೂರು ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಚಂದ್ರಶೇಖರ್ ರವರು, ತುಮಕೂರು ಜಿಲ್ಲಾ ಸವಹಾದ್ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ರವರು, ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ರವರು, ತುಮಕೂರು ಉಪನಿಬಂಧಕರ ಕಛೇರಿಯ ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀ ಶ್ರೀನಿವಾಸ್ ರವರು, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆ ರವರು, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. 102 ಸೌಹಾರ್ದ ಸಹಕಾರಿಗಳಿಂದ 124 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾಸನ :** ದಿನಾಂಕ 13.01.2022 ರಂದು ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ" ಯ ಅಧ್ಯಕ್ಷತೆಯನ್ನು ಶ್ರೀ ಬಿ. ಚಾಮರಾಜೇಗೌಡರು ರವರು, ಅಧ್ಯಕ್ಷರು, ಸ್ವರ್ಣಭಾರತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀಮತಿ ಡಿ.ಎಸ್.ತೇಜಸ್ವಿನಿ ರವರು, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಸನ ಉಪ ವಿಭಾಗ, ಹಾಸನ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಶಿವಕುಮಾರ ಬಿರಾದಾರ, ಪ್ರಾಂತೀಯ ವ್ಯವಸ್ಥಾಪಕರು, ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

"ಶಾಸನಾತ್ಮಕ ಕರ್ತವ್ಯಗಳು"* ವಿಷಯದ ಕುರಿತು ಉಪನ್ಯಾಸಕರಾಗಿ ಶ್ರೀ ಶಿವಕುಮಾರ ಬಿರಾದಾರ, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ–1997 ಪ್ರಮುಖ ಕಲಂ ಗಳ ಪಾಲನೆ ಮತ್ತು ಅನುಷ್ಠಾನ ವಿಷಯದ ಕುರಿತು ಶ್ರೀಮತಿ ಡಿ.ಎಸ್ ತೇಜಸ್ವಿನಿ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಸನ ಉಪವಿಭಾಗ ಇವರು ಹಾಗೂ ಸಹಕಾರಿಗಳ ಬಡ್ಡಿಯೇತರ ಆದಾಯದ ಮೂಲಗಳು ವಿಷಯದ ಕುರಿತು ಶ್ರೀಮತಿ ಕುಸುಮಾ ರವರು, ಸಂಪನ್ಮೂಲ ವ್ಯಕ್ತಿಗಳು, ಅರಸೀಕೆರೆ ಇವರು ಉಪನ್ಯಾಸ ನೀಡಿದರು. ನಂತರದಲ್ಲಿ ಪ್ರತಿನಿಧಿಗಳಿಗೆ ನೂತನ ವರ್ಷದ ಸಂಯುಕ್ತ ಸಹಕಾರಿಯ ಕ್ಯಾಲೆಂಡರ್ ವಿತರಿಸಲಾಯಿತು.

ಸಭೆ ಕಾರ್ಯಕ್ರಮದ ನಿರೂಪಣೆ ಶ್ರೀ ರಮೇಶ್ ರವರು, ಅಧ್ಯಕ್ಷರು, ಶ್ರೀ ಹಂಸ ಸೌಹಾರ್ದ ಸಹಕಾರಿ ನಿ., ಹಾಸನ, ಇವರು ಪ್ರಾರ್ಥನೆ ಶ್ರೀಮತಿ ಪದ್ಮಾವತಿ ಎಸ್. ಸಿಇಓ, ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇವರು ಸ್ವಾಗತ ಮತ್ತು ಪರಿಚಯ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಇವರು ವಂದನಾರ್ಪಣೆ ಶ್ರೀ ಬಸವರಾಜು, ಸಿಇಓ, ಭೂಮಾತಾ ಕೃಷಿ ಬೆಳೆಗಾರರ ಸೌಹಾರ್ದ ಸಹಕಾರಿ ನಿ., ಗಂಡಸಿ ಇವರು ಮಾಡಿದರು. ಸದರಿ ಸಭೆಯಲ್ಲಿ 24 ಸೌಹಾರ್ದ ಸಹಕಾರಿಗಳಿಂದ 27 ಪ್ರತಿನಿಧಿಗಳು ಇತರೆ 08 ಸೇರಿ ಒಟ್ಟು 35 ಜನರು ಹಾಜರಿದ್ದರು.

**ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ :** ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ದಿನಾಂಕ: 20.01.2022 ಗುರುವಾರ ಬೆಳಿಗ್ಗೆ 10:30 ಗಂಟೆಗೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಮೈಸೂರು ಲೋಕಲ್ ಸೆಂಟರ್), ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ವಿ ರಾಜೀವ್‌ರವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಜಿ.ಆರ್. ವಿಜಯಕುಮಾರ್‌ರವರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಇ.ಸಿ. ಜನಾರ್ಧನ್‌ರವರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾರಾಯಣ ರಾವ್‌ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 62 ಸೌಹಾರ್ದ ಸಹಕಾರಿಗಳಿಂದ 71 ಪ್ರತಿನಿಧಿಗಳು ಭಾಗವಹಿಸಿದ್ದರು.

**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ದಿನಾಂಕ: 21.01.2022 ಶುಕ್ರವಾರ ಬೆಳಿಗ್ಗೆ 10:30 ಗಂಟೆಗೆ ಗೋ–ಟು ಮೀಟಿಂಗ್ ಆನ್ ಲೈನ್/ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಂತರ ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಟಾಸ್ಕ್‌ಫೋರ್ಸ್ ಅಧಿಕಾರಿ ಇವರು ಸೌಹಾರ್ದ ಸಹಕಾರಿಗಳ ಅಧಿನಿಯಮಕ್ಕೆ ಮಾಡಲಾದ ತಿದ್ದುಪಡಿಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಬಂಗೇರ ಮತ್ತು ವಿಜಯ್ ಬಿ.ಎಸ್ ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 102 ಸೌಹಾರ್ದ ಸಹಕಾರಿಗಳಿಂದ 114 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ದಿನಾಂಕ: 18.01.2022 ಮಂಗಳವಾರ ಬೆಳಿಗ್ಗೆ 10:30 ಗಂಟೆಗೆ ಗೋ–ಟು ಮೀಟಿಂಗ್ ಆನ್ ಲೈನ್/ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಂತರ ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಟಾಸ್ಕ್‌ಫೋರ್ಸ್ ಅಧಿಕಾರಿ ಇವರು ಸೌಹಾರ್ದ ಸಹಕಾರಿಗಳ ಅಧಿನಿಯಮಕ್ಕೆ ಮಾಡಲಾದ ತಿದ್ದುಪಡಿಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಬಂಗೇರ ಮತ್ತು ವಿಜಯ್ ಬಿ.ಎಸ್ ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 104 ಸೌಹಾರ್ದ ಸಹಕಾರಿಗಳಿಂದ 119 ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಯಚೂರು :** ದಿನಾಂಕ 04.01.2022 ರಂದು ದೇವದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ನಮ್ಮ ದೇವದುರ್ಗ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ದೇವದುರ್ಗ ಈ ಸಹಕಾರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಗೆ ಮುಖ್ಯ ಅತಿಥಿಗಳಾಗಿ ಹಿರಿಯ ಸಹಕಾರಿಗಳಾದ ಶ್ರೀ ಮಹಾಂತಯ್ಯ ಸ್ವಾಮಿ ಮತ್ತು ಯಕ್ಷ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋಪಾಲ ಇವರುಗಳು ಆಗಮಿಸಿದ್ದರು, ಸದರಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮತ್ತು ಶಾಸನಾತ್ಮಕ ವರದಿಗಳ ಸಲ್ಲಿಸುವ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಮಾಹಿತಿ ನೀಡಿದರು. ಈ ಸಭೆಯಲ್ಲಿ ಒಟ್ಟು 13 ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಈ ಸಭೆಯಲ್ಲಿ ಸಂಯುಕ್ತ ಸಹಕಾರಯ ದಿನಾಚರಿಯನ್ನು ಹಂಚಿಕೆ ಮಾಡಲಾಯಿತು.

ದಿನಾಂಕ 04.01.2022 ರಂದು ಮಧ್ಯಾಹ್ನ 3:00 ಗಂಟೆಗೆ ರಾಯಚೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ನಮ್ಮ ಕನ್ನಡ ಭವನ, ರಂಗ ಮಂದಿರ ಹಿಂದುಗಡೆ, ರಾಯಚೂರು ಇಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಗೆ ಮುಖ್ಯ ಅತಿಥಿಗಳಾಗಿ ಹಿರಿಯ ಸಹಕಾರಿಗಳಾದ ಮತ್ತು ಶಿವ ಪಾರ್ವತಿ ಗಣೇಶ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಪ್ಪ ಹೆಚ್ ಇವರು ಆಗಮಿಸಿದ್ದರು. ವೇದಿಕೆ ಮೇಲೆ ರಾಯಚೂರು ತಾಲೂಕು ಕಾರ್ಯನಿರತ ಸಿಬ್ಬಂದಿಗಳ ಸಂಘದ ಅಧ್ಯಕ್ಷರಾದ ಶ್ರೀ ರವಿ ಕುಮಾರ ಮತ್ತು ಭಗಾವನ ಮಹಾವೀರ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಚನ್ನಬಸಯ್ಯ ಇವರುಗಳು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮತ್ತು ಶಾಸನಾತ್ಮಕ ವರದಿಗಳ ಸಲ್ಲಿಸುವ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಮಾಹಿತಿ ನೀಡಿದರು. ಈ ಸಭೆಯಲ್ಲಿ ಒಟ್ಟು 36 ಸಹಕಾರಿಗಳಿಂದ 41 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ದಿನಾಚರಿಯನ್ನು ಹಂಚಿಕೆ ಮಾಡಲಾಯಿತು.

ದಿನಾಂಕ : 05.01.2022ರಂದು ಬೆಳಿಗ್ಗೆ 10:30 ಗಂಟೆಗೆ ಮಾನವಿ ಮತ್ತು ಸಿರವಾರ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ ನಿ., ಮಾನವಿ ಇಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಗೆ ಮುಖ್ಯ ಅತಿಥಿಗಳಾಗಿ ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ನಾಗರಾಜ ಇವರು ಆಗಮಿಸಿದ್ದರು. ವೇದಿಕೆ ಮೇಲೆ ವೀರುಪಾಕ್ಷೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶಂಕ್ರನಾಂದ ಮತ್ತು ಲಕ್ಷ್ಮಿ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಬಸವರಾಜ ಇವರುಗಳು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ನಾಗರಾಜ ಇವರು ಮಾಹಿತಿ ನೀಡಿದರು ಮತ್ತು ಶಾಸನಾತ್ಮಕ ವರದಿಗಳ ಸಲ್ಲಿಸುವ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಮಾಹಿತಿ ನೀಡಿದರು. ಈ ಸಭೆಯಲ್ಲಿ ಒಟ್ಟು 35

ಸಹಕಾರಿಗಳಿಂದ 38 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ದಿನಾಚರಿಯನ್ನು ಹಂಚಿಕೆ ಮಾಡಲಾಯಿತು.

ದಿನಾಂಕ: 05.01.2022ರಂದು ಮಧ್ಯಾಹ್ನ 3:00 ಗಂಟೆಗೆ ಸಿಂಧನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಬಸವ ಚರಿಟೇಬಲ್ ಟ್ರಸ್ಟ್, ಕುಷ್ಟಗಿ ರಸ್ತೆ, ಸಿಂಧನೂರು ಇಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಗೆ ಮುಖ್ಯ ಅತಿಥಿಗಳಾಗಿ ಸಿಂಧೂ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜಶೇಖರ ಬಿ. ಮತ್ತು ಮುಕ್ತಾ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪ ಇವರುಗಳು ಆಗಮಿಸಿದ್ದರು.. ವೇದಿಕೆ ಮೇಲೆ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಪಂಪಾನಗೌಡ ಇವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಸಿಂಧೂ ಪತ್ತಿನ ಸೌಹಾರ್ದ ಸಹಕಾ-ರಿಯ ಅಧ್ಯಕ್ಷರಾದ ಶ್ರೀ ರಾಜಶೇಖರ ಬಿ. ಇವರು ಮಾಹಿತಿ ನೀಡಿದರು ಮತ್ತು ಶಾಸನಾತ್ಮಕ ವರದಿಗಳ ಸಲ್ಲಿಸುವ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಮಾಹಿತಿ ನೀಡಿದರು. ಈ ಸಭೆಯಲ್ಲಿ ಒಟ್ಟು 45 ಸಹಕಾರಿಗಳಿಂದ 51 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ದಿನಾಚರಿಯನ್ನು ಹಂಚಿಕೆ ಮಾಡಲಾಯಿತು.

ದಿನಾಂಕ 06.01.2022 ರಂದು ಮಸ್ಕಿ ಮತ್ತು ಲಿಂಗಸೂಗುರ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ರೆಡ್ಡರ ಪತ್ತಿನ ಸೌಹಾರ್ದ ಸಹಕಾರಿ ನಿ., ಲಿಂಗಸೂಗುರ ಈ ಸಹಕಾರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಗೆ ಮುಖ್ಯ ಅತಿಥಿಗಳಾಗಿ ರೆಡ್ಡರ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್. ಕುಮಾರಪ್ಪ ಇವರು ಆಗಮಿಸಿದ್ದರು. ಸದರಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಮತ್ತು ಶಾಸನಾತ್ಮಕ ಮಾಹಿತಿಗಳ ಸಲ್ಲಿಸುವ ಕುರಿತು ಜಿಲ್ಲಾ ಸಂಯೋಜ-ಕರಾದ ಶ್ರೀ ವೆಂಕಟೇಶ ರಾಠೋಡ ಮಾಹಿತಿ ನೀಡಿದರು. ಈ ಸಭೆಯಲ್ಲಿ ಒಟ್ಟು 42 ಸಹಕಾರಿಗಳಿಂದ 49 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಸಹಕಾರಿಗಳ ದಿನಾಚರಿಯನ್ನು ಹಂಚಿಕೆ ಮಾಡಲಾಯಿತು.

---

**ಕೊಪ್ಪಳ :** ದಿನಾಂಕ 13.01.2022 ರಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾ, ಕುಕನೂರು, ಕುಷ್ಟಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಾರ್ಷಿಕ ಸಭೆಯನ್ನು ಯಲಬುರ್ಗಾದ ಶ್ರೀ ವಾಲ್ಮೀಕಿ ಭವನದಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಆರ್‌ಡಿಸಿಸಿ ಬ್ಯಾಂಕಿನ ನೂತನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಪಾಟೀಲರವರು ನೇರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರುವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪದಾಧಿಕಾರಿಗಳು ಮತ್ತು ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲೆಯಿಂದ ಆಯ್ಕೆಯಾದ ಆರ್‌ಡಿಸಿಸಿ ಬ್ಯಾಂಕಿನ ನೂತನ ನಿರ್ದೇಶಕರು ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಬಳ್ಳಾರಿ ಶಾಖಾ ವ್ಯವಸ್ಥಾಪಕರಾದ ಶ್ರೀ ಮಹೇಶರವರು ಉಪಸ್ಥಿತರಿದ್ದರು. ಸಹಕಾರಿಗಳಲ್ಲಿ ವ್ಯವಹಾರ ಅಭಿವೃದ್ಧಿ ಎಂಬ ವಿಷಯದ ಕುರಿತು ಶ್ರೀ ಮಹೇಶ ವಿಕಾಸ ಸಹಕಾರಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರು, ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ಮುಖ್ಯಕಾರ್ಯನಿರ್ವಾಹಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಕೊಪ್ಪಳ ಜಿಲ್ಲಾ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಮಹಾಲಿಂಗಪ್ಪರವರು ನೇರವೇರಿಸಿದರು. ವಂದನಾರ್ಪಣೆಯನ್ನು ಕೊಪ್ಪಳ ಜಿಲ್ಲಾ ಸಂಯೋಜಕರಾದ ಪವನ ಎಮ್ ಆರ್ ನೇರವೇರಿಸಿದರು. 130 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 12.01.2022 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ, ಕನಕಗಿರಿ ತಾಲ್ಲೂಕುಗಳ ಮುಖ್ಯಕಾರ್ಯನಿರ್ವಾಹಕರುಗಳ ವಾರ್ಷಿಕ ಸಭೆಯನ್ನು ಗಂಗಾವತಿಯ ಹೋಟೆಲ್ ಲಲಿತ ಮಹಲ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ನಾಗಲಿಂಗಪ್ಪ ಪತ್ತಾರ, ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರು ಇವರು ನೆರವೇರಿಸಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆರ್‌ಡಿಸಿಸಿ ಬ್ಯಾಂಕಿನ ನೂತನ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ, ಕೊಪ್ಪಳ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಕುಮಾರೆಪ್ಪ ಸಿಂಗನಾಳ, ಸಿಬಿಎಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿಜೆ ಜವಳಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಹೇಶ ಕುಮಾರ ಆಗಮಿಸಿ ಉಪನ್ಯಾಸ ನೀಡಿದರು. ನಿರೂಪಣೆ ಮತ್ತು ವಂದನಾರ್ಪಣೆ ಬಳ್ಳಾರಿ ಜಿಲ್ಲಾ ಸಂಂ-ಯೋಜಕರು ನೆರವೇರಿಸಿದರು. 120 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಕಲಬುರಗಿ :** ದಿನಾಂಕ 12.01.2022 ರಂದು ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿಯ ತರಬೇತಿಯನ್ನು ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಹಾಯಕ ನಿಬಂಧಕರಾದ ಶ್ರೀ ಕಿಶೋರರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲ, ಹಾಗೂ ಕಲಬುರಗಿ ಜಿಲ್ಲಾ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ

ಎಸ್.ಎಸ್. ಪಾಟೀಲರವರು ಭಾಗವಹಿಸಿದ್ದರು. ತರಬೇತಿಯ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಲಿಯಾಕತ್ ಅಲಿಯವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿಯ ಕುರಿತು ಉಪನ್ಯಾಸ ನೀಡಿದರು. ಮುಖ್ಯಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಓಂಕಾರ ಜಿಲ್ಲಾ ಸಂಯೋಜಕರು ಉಪನ್ಯಾಸ ನೀಡಿದರು. ಸ್ವಾಗತ ಮತ್ತು ನಿರೂಪಣೆ ಜಿಲ್ಲಾ ಸಂಯೋಜಕರು ನೆರೆವೇರಿಸಿದರು. 90 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೀದರ :** ದಿನಾಂಕ 01.01.2022 ರಂದು ಬೀದರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತೀಕರ, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರು ಮತ್ತು ನಿರ್ದೇಶಕರು ಹಾಗೂ 25 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು. ಮುಖ್ಯಕಾರ್ಯನಿರ್ವಾಹಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ಇವರು ಮಾಹಿತಿ ನೀಡಿದರು.

ದಿನಾಂಕ 04.01.2022 ರಂದು ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಾರ್ಷಿಕ ಸಭೆಯನ್ನು ಪಂಡಿತ ದೀನ್ ದಯಾಳ ಉಪಾಧ್ಯಾಯ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿ–ತ್ತು. ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಕರ್ತವ್ಯಗಳ ಕುರಿತು ಜಿಲ್ಲಾ ಸಂಯೋಜಕರು ವಿಷಯದ ಕುರಿತು ಉಪನ್ಯಾಸ ನೀಡಿದರು. 15 ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.

**ಬಳ್ಳಾರಿ :** ದಿನಾಂಕ 06.01.2022 ಬಳ್ಳಾರಿ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಕರುಗಳ ವಾರ್ಷಿಕ ಸಭೆಯನ್ನು ಬಳ್ಳಾರಿ ಜಿಲ್ಲೆಯ ರಾಯಲ್ ಪೋರ್ಟ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿಗಳ ಪ್ರತಿನಿಧಿಗಳಿಂದ ನೆರವೇರಿಸಲಾಯಿತು. ಸಭೆಯ ಉಪನ್ಯಾಸವನ್ನು ಶ್ರೀ ಮಹೇಶ ವಿಕಾಸ ಸಹಕಾರಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರು ಸಹಕಾರಿಗಳ ವ್ಯವಹಾರದ ಅಭಿವೃದ್ಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಪಾತ್ರದ ಕುರಿತು ಉಪನ್ಯಾಸ ನೀಡಿದರು. ಆರ್ಥಿಕ ಸಬಲತೆಯ ಮಾನದಂಡಗಳು ಹಾಗೂ ಮುಖ್ಯಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಜಿಲ್ಲಾ ಸಂಯೋಜಕರಾದ ರವಿಕುಮಾರರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ಸತ್ಯನಾರಾಯಣ ಮೇಘ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಇವರ ನೇರವೇರಿಸಿದರು. ಸಭೆಯಲ್ಲಿ 36 ಸಹಕಾರಿಗಳಿಂದ 42 ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯನಗರ :** ದಿನಾಂಕ 10.01.2022 ವಿಜಯನಗರ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಕರುಗಳ ವಾರ್ಷಿಕ ಸಭೆಯನ್ನು ಹೊಸಪೇಟೆಯ ಮಲ್ಲಿಗೆ ಹೋಟೆಲ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠರವರು ನೇರವೇರಿಸಿದರು. ಉಪನ್ಯಾಸವನ್ನು ಶ್ರೀಮತಿ ಮಧುಶ್ರೀ ವಿಕಾಸ ಸಹಕಾರಿ ಬ್ಯಾಂಕಿನ ವಿಭಾಗಿಯ ವ್ಯವಸ್ಥಾಪಕರು ಸಹಕಾರಿಗಳ ವ್ಯವಹಾರದ ಅಭಿವೃದ್ಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಪಾತ್ರದ ಕುರಿತು ಉಪನ್ಯಾಸ ನೀಡಿದರು. ಆರ್ಥಿಕ ಸಬಲತೆಯ ಮಾನದಂಡಗಳು ಹಾಗೂ ಮುಖ್ಯಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಜಿಲ್ಲಾ ಸಂಯೋಜಕರಾದ ರವಿಕುಮಾರರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ಜಿಲ್ಲಾ ಸಂಯೋಜಕರಾದ ರವಿಕುಮಾರರವರು ನೇರವೇರಿಸಿದರು. ಸಭೆಯಲ್ಲಿ 74 ಸಹಕಾರಿಗಳಿಂದ 87 ಪ್ರತಿನಿಧಿಗಳು ಭಾಗವಹಿಸಿದ್ದರು.

**ಯಾದಗಿರಿ :** ದಿನಾಂಕ 07.01.2022 ರಂದು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ದಿ ಮುಸ್ಲಿಂ ಸೌಹಾರ್ದ ಸಹಕಾರಿ ನಿ., ಶಹಪೂರ ಇದರ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ದಿ ಮುಸ್ಲಿಂ ಸೌಹಾರ್ದ ಸಹಕಾರಿ ನಿ., ಶಹಪೂರ ಇದರ ಅಧ್ಯಕ್ಷರಾದ ಶ್ರೀ ಯೂಸುಫ್ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ. ಪಾಟೀಲ ರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಲಿಯಾಕತ್ ಅಲಿ ನಿವೃತ್ತ ಸಹಾಯಕ ನಿಬಂಧಕರು ಇವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿಯ ವಿಷಯದ ಕುರಿತು ಉಪನ್ಯಾಸ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್ ಇವರು ಪ್ರಾಸ್ತಾವಿಕ ನುಡಿಯನ್ನು ಮತ್ತು ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ನೀರುಪಣೆಯನ್ನು ಶ್ರೀ ವೀರಶೇಟ್ಟಿ ಕೆ, ಜಿಲ್ಲಾ ಸಂಯೋಜಕರು ಇವರು ನೇರವೇರಿಸಿದರು.

**ಹಾವೇರಿ :** ದಿನಾಂಕ: 06 ಜನವರಿ 2022 ರಂದು ಗ್ರೀನ್ ಕೋರ್ಟ್ ಸಾಯಿ ರೆಸಿಡೆನ್ಸಿ, ಹಾವೇರಿಯಲ್ಲಿ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾ–ರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿ–ತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಂ.ಬಿ. ಕಲಾಲ್ ಅವರು ನೇರವೇರಿಸಿದರು. ಅತಿಥಿಗಳು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಜಿ. ಕೆ.ರಾಮಪ್ಪ, ಮಾನ್ಯ ಉಪನಿರ್ದೇಶಕರು(ನಿವೃತ್ತ), ಲೆಕ್ಕಪರಿಶೋಧನಾ

ಇಲಾಖೆ, ಶಿರಸಿ ಇವರು ಭಾಗವಹಿಸಿದ್ದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಶ್ರೀ ಜಿ.ಕೆ.ರಾಮಪ್ಪ, ಮಾನ್ಯ ಉಪನಿರ್ದೇಶಕರು(ನಿವೃತ್ತ), ಲೆಕ್ಕಪರಿಶೋಧನಾ ಇಲಾಖೆ, ಶಿರಸಿ ಇವರು ಉಪನ್ಯಾಸ ನೀಡಿದರು. ನಂತರದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಎಸ್.ಎಂ. ಇವರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಇತ್ತೀಚಿನ ತಿದ್ದುಪಡಿ ವಿಷಯದ ಕುರಿತು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ 141 ಸೌಹಾರ್ದ ಸಹಕಾರಿಗಳಿಂದ 149 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟೆ :** ದಿನಾಂಕ 06 ಜನವರಿ 2022ರಂದು ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ.. ನವನಗರ ಇಲ್ಲಿ ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು, ಸದರಿ ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಿ.ಎನ್.ಪಾಟೀಲ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸ.ಸ.ನಿ. ಬೆಂಗಳೂರು ಇವರು ವಹಿಸಿದ್ದರು. ಸಭೆಯ ಉದ್ಘಾಟನೆಯನ್ನು ಶ್ರೀ ಕಲ್ಲಪ್ಪ ಓಬಣ್ಣಗೊಳ, ಮಾನ್ಯ ಉಪನಿಬಂಧಕರು ಬಾಗಲಕೋಟೆ ಇವರು ನೇರವೇರಿಸಿದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಇತ್ತೀಚಿನ ತಿದ್ದುಪಡಿ ವಿಷಯದ ತರಬೇತಿ ಕುರಿತು ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಟಾಸ್ಕ್ ಫೋರ್ಸ್ ಉಸ್ತುವಾರಿಗಳು ಇವರು ಉಪನ್ಯಾಸ ನೀಡಿದರು ಮತ್ತು ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು ವಿಷಯದ ಬಗ್ಗೆ ಜಿಲ್ಲಾ ಸಂಯೊಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 250 ಸೌಹಾರ್ದ ಸಹಕಾರಿಗಳಿಂದ 320 ಪ್ರತಿನಿಧಿಗಳು ಭಾಗವಹಿಸಿದ್ದರು.

**ಧಾರವಾಡ :** ದಿನಾಂಕ 10 ಜನವರಿ 2022 ರಂದು ಕೆ. ಎಂ. ಎಫ್ ತರಬೇತಿ ಕೇಂದ್ರ ಧಾರವಾಡದಲ್ಲಿ, ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ರವೀಂದ್ರ ಆರ್ ಎಲಿಗಾರ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು, ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ರಂಜನಾ.ಟಿ.ಪೋಳ, ಮಾನ್ಯ ಉಪನಿಬಂಧಕರು, ಸಹಕಾರ ಸಂಘಗಳ ಇಲಾಖೆ ಧಾರವಾಡ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಪ್ರಕಾಶ್ ನಾಜರೇ, ಮಾನ್ಯ ಅಧ್ಯಕ್ಷರು ವಿಜಯಲಕ್ಷ್ಮಿ ಸೌಹಾರ್ದ ಸಹಕಾರಿ ನಿ., ಧಾರವಾಡ, ಶ್ರೀ ಮಲ್ಲಿಕಾರ್ಜುನ ಹೊರಕೇರಿ ಮಾನ್ಯ ಅಧ್ಯಕ್ಷರು ಧಾರವಾಡ ಜಿಲ್ಲಾ ಸೌಹಾರ್ದ ಒಕ್ಕೂಟ ಸಹಕಾರಿ ನಿ., ಧಾರವಾಡ, ಶ್ರೀ ಎಂ.ಬಿ.ಪೂಜಾರ, ಮಾನ್ಯ ಸಹಾಯಕ ನಿಬಂಧಕರು, ಸಹಕಾರ ಸಂಘಗಳು ಧಾರವಾಡ ಇವರು ಭಾಗವಹಿಸಿದ್ದರು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಇತ್ತೀಚಿನ ತಿದ್ದುಪಡಿಗಳು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು ಕುರಿತು ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಟಾಸ್ಕಫೋರ್ಸ ವಿಭಾಗ ಇವರು ಉಪನ್ಯಾಸ ನೀಡಿದರು. ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜಿ.ಕೆ. ರಾಮಪ್ಪ, ಮಾನ್ಯ ನಿವೃತ್ತ ಲೆಕ್ಕಪರಿಶೋಧನಾ ಉಪನಿರ್ದೇಶಕರು ಇವರು ಮುಖ್ಯಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು ಮತ್ತು ಲೆಕ್ಕ ಪರಿಶೋಧನೆಗೆ ಆರ್ಥಿಕ ತಃಖ್ತೆಗಳನ್ನು ಸಿದ್ಧಪಡಿಸುವುದು ಹಾಗೂ ಲೆಕ್ಕಪತ್ರಗಳ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಸಭೆಯಲ್ಲಿ ಧಾರವಾಡ ಜಿಲ್ಲೆಯ ಸಂಯೋಜಕರಾದ ಶ್ರೀ ಬಸವರಾಜ.ಎಸ್.ಇವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 72 ಸೌಹಾರ್ದ ಸಹಕಾರಿಗಳಿಂದ 84 ಪ್ರತಿನಿಧಿಗಳು ಭಾಗವಹಿಸಿದ್ದರು

**ಬೆಳಗಾವಿ :** ದಿನಾಂಕ: 11 ಜನವರಿ 2022 ರಂದು ಬೆಳಗಾವಿಯ ಮಹಾಂತ ಭವನದಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಹುಕ್ಕೇರಿ, ಖಾನಾಪುರ ಹಾಗೂ ಚನ್ನಮ್ಮ ಕಿತ್ತೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಪವಾರ ಇವರು ವಹಿಸಿದ್ದರು ಹಾಗೂ ಉದ್ಘಾಟನೆಯನ್ನು ಶ್ರೀ ರವೀಂದ್ರ ಪಾಟೀಲ, ಮಾನ್ಯ ಸಹಾಯಕ ನಿಬಂಧಕರು, ಸಹಕಾರಿ ಸಂಘಗಳ ಇಲಾಖೆ, ಬೆಳಗಾವಿ ಇವರು ನೆರವೇರಿಸಿದರು. ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಟಾಸ್ಕ್ ಫೋರ್ಸ್ ವಿಭಾಗ, ಬೆಳಗಾವಿ ಹಾಗೂ ಕಲಬುರಗಿ ಪ್ರಾಂತ, ಶ್ರೀ ಬಸವರಾಜ ಹೊಂಗಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಇವರುಗಳು ಭಾಗವಹಿಸಿದ್ದರು. ಸಭೆಯಲ್ಲಿ ಶ್ರೀ ಶ್ರೀಕಾಂತ್ ಬರುವೆ ಇವರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಇತ್ತೀಚಿನ ತಿದ್ದುಪಡಿಗಳ ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ಮಾನವ ಸಂಪನ್ಮೂಲ ಅಭಿವೃದ್ಧಿ ವಿಷಯದ ಕುರಿತು ಶ್ರೀ ಶ್ರೀವತ್ಸ ಗುಡಿ ಇವರು ಉಪನ್ಯಾಸ ನೀಡಿದರು. ಸಭೆಯಲ್ಲಿ ಶ್ರೀ ಗಂಗಾರಾಮ ಕೋಳಾಪ್ಪೆ, ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರು ಇವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಂದ 255 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ: 12 ಜನವರಿ 2022 ರಂದು ಸಾಯಿ ಸೌಹಾರ್ದ ಭವನ, ಚಿಕ್ಕೋಡಿಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ, ಕಾಗವಾಡ, ಚಿಕ್ಕೋಡಿ, ನಿಪ್ಪಾಣಿ ಮತ್ತು ರಾಯಬಾಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ

ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು ಹಾಗೂ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಪವಾರ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಚಿಕ್ಕೋಡಿ ಪುರಸಭೆ ಅಧ್ಯಕ್ಷರಾದ ಶ್ರೀ ಪ್ರವೀಣ್ ಕಾಂಬಳೆ ಇವರು ಹಾಗೂ ಅತಿಥಿಗಳಾಗಿ ಸಾಯಿ ಸೌಹಾರ್ದ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ಹಾಗೂ ನಿರ್ದೇಶಕರಾದ ಶ್ರೀ ರಾಜಕುಮಾರ ಹಿರೇಮಠ ರವರು ಭಾಗವಹಿಸಿದ್ದರು. ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಟಾಸ್ಕ್ ಫೋರ್ಸ್ ವಿಭಾಗ, ಬೆಳಗಾವಿ ಹಾಗೂ ಕಲಬುರಗಿ ಪ್ರಾಂತ ಇವರು ಹಾಗೂ ಶ್ರೀ ಬಸವರಾಜ ಹೊಂಗಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಇವರುಗಳು ಭಾಗವಹಿಸಿದ್ದರು. ಸಭೆಯಲ್ಲಿ ಶ್ರೀ ಶ್ರೀಕಾಂತ್ ಬರುವೆ ಇವರು ಕಾಯ್ದೆ ತಿದ್ದುಪಡೆ ಮತ್ತು ಆರ್ಥಿಕ ಸಭಲತೆಯ ಮಾನದಂಡಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ವಿಷಯದ ಕುರಿತು ಶ್ರೀ ಅಮೃತ ಜೋಷಿ, ಮಾನ್ಯ ನಿರ್ದೇಶಕರು, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ ನಿ., ಹೊಸಪೇಟ ಇವರು ಉಪನ್ಯಾಸ ನೀಡಿದರು. ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಇವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಂದ 167 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ: 13 ಜನವರಿ 2022 ರಂದು ಹೋಟೆಲ್ ರತ್ನಸಂಗಮ, ರೆಸಿಡೆನ್ಸಿ ಯರಗಟ್ಟಿಯಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕ, ಮೂಡಲಗಿ, ಬೈಲಹೊಂಗಲ, ರಾಮದುರ್ಗ, ಸವದತ್ತಿ ಮತ್ತು ಯರಗಟ್ಟಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಮಾರುತಿ ಪವಾರ್ ಇವರು ವಹಿಸಿದ್ದರು. ಶ್ರೀ ಬಸವರಾಜ ಹೊಂಗಲ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಕ.ರಾ.ಸೌ.ಸಂ.ಸ.ನಿ. ಬೆಳಗಾವಿ ಇವರು ಪ್ರಾಸ್ಥಾವಿಕವಾಗಿ ಮಾತನಾಡಿದರು. ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಟಾಸ್ಕ್ ಫೋರ್ಸ್ ವಿಭಾಗ, ಬೆಳಗಾವಿ ಹಾಗೂ ಕಲಬುರಗಿ ಪ್ರಾಂತ ಇವರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಇತ್ತೀಚಿನ ತಿದ್ದುಪಡಿಗಳ ಕುರಿತು ಮತ್ತು ಆರ್ಥಿಕ ಸಬಲತೆಯ ಮಾನದಂಡಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ಮಾನವ ಸಂಪನ್ಮೂಲ ಅಭಿವೃದ್ಧಿ ವಿಷಯದ ಕುರಿತು ಶ್ರೀ ಅಮೃತ ಜೋಷಿ ಇವರು ಉಪನ್ಯಾಸ ನೀಡಿದರು. ವ್ಯವಸ್ಥಾಪಕರು/ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಪೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ್ ಬೆಳವಿ ಇವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಂದ 165 ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯಪುರ** : ದಿನಾಂಕ 07 ಜನವರಿ 2022ರಂದು ಹೋಟೆಲ್ ಶುಭಶ್ರೀ ಸಾಗರ, ವಿಜಯಪುರದಲ್ಲಿ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಶ್ರೀ ಸಿದ್ರಾಮಪ್ಪ ಚ. ಉಪ್ಪಿನ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸ.ಸ.ನಿ. ಬೆಂಗಳೂರು ಇವರು ನೆರವೇರಿಸಿದರು. ಸಭೆಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಇತ್ತೀಚಿನ ತಿದ್ದುಪಡಿ ವಿಷಯದ ತರಬೇತಿ ಕುರಿತು ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಟಾಸ್ಕ್ ಫೋರ್ಸ್ ಉಸ್ತುವಾರಿಗಳು ಇವರು ಉಪನ್ಯಾಸ ನೀಡಿದರು ಮತ್ತು ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು ವಿಷಯದ ಬಗ್ಗೆ ಜಿಲ್ಲಾ ಸಂಯೊಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಉಪನ್ಯಾಸ ನೀಡಿದರು. ಜಿಲ್ಲಾ ಸಂಯೋಜಕರುಗಳಾದ ಶ್ರೀ ಶಿವಕಾಂತ್ ಎನ್ ಮತ್ತು ಶ್ರೀ ಪ್ರಭಯ್ಯಾ ಹಿರೇಮಠ ಇವರು ಸಭೆಯಲ್ಲಿ ಉಪಸ್ಥಿತ-ರಿದ್ದರು. ಸದರಿ ಸಭೆಯಲ್ಲಿ 222 ಸೌಹಾರ್ದ ಸಹಕಾರಿಗಳಿಂದ 276 ಪ್ರತಿನಿಧಿಗಳು ಭಾಗವಹಿಸಿದ್ದರು.

**ಉತ್ತರ ಕನ್ನಡ** : ದಿನಾಂಕ: 12 ಜನವರಿ 2022 ರಂದು ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹವ್ಯಕ ಸಭಾಮಂಟಪ, ಕುಮುಟಾ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರು ವಹಿಸಿದ್ದರು ಹಾಗೂ ಉದ್ಘಾಟನೆಯನ್ನು ನೆರವೇರಿಸಿದರು. ಮುಖ್ಯ ಅತಿಥಿಗಳು ಹಾಗೂ ಉಪನ್ಯಾಸಕರಾಗಿ ಶ್ರೀ ಜಿ.ಕೆ.ರಾಮಪ್ಪ, ನಿವೃತ್ತ ಉಪ ನಿರ್ದೇಶಕರು, ಲೆಕ್ಕ-ಪರಿಶೋಧನಾ ಇಲಾಖೆ ಇವರು ಭಾಗವಹಿಸಿದ್ದರು. ಶ್ರೀ ಬಸವರಾಜ ಹೊಂಗಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಇವರು ಉಪಸ್ಥಿತರಿದ್ದರು. ಆರ್ಥಿಕ ಸಬಲತೆಯ ಮಾನದಂಡಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ರಾಚಯ್ಯ ಹಿರೇಮಠ ಇವರು ಉಪನ್ಯಾಸ ನೀಡಿದರು. ಸಭೆಯಲ್ಲಿ ಶ್ರೀ ಸಂತೋಷ್ ಕುಮಾರ್ ಎಂ ಜಿ ಜಿಲ್ಲಾ ಸಂಯೋಜಕರು ಇವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸೌಹಾರ್ದ ಸಹಕಾರಿಗಳಿಂದ 135 ಪ್ರತಿನಿಧಿಗಳು ಭಾಗವಹಿಸಿದ್ದರು

## ಸರಣಿ ತರಬೇತಿ ಕಾರ್ಯಕ್ರಮ

**ಬೆಳಗಾವಿ :** ದಿನಾಂಕ 14 ಜನವರಿ 2022 ರಿಂದ, ಸಾಯಿ ಸೌಹಾರ್ದ ಭವನ, ಚಿಕ್ಕೋಡಿಯಲ್ಲಿ ಚಿಕ್ಕೋಡಿ ಪಟ್ಟಣದಲ್ಲಿನ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಸರಣಿ ತರಬೇತಿಯನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸಾಯಿ ಕ್ರೇಡಿಟ್ ಸೌಹಾರ್ದ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ, ಮಾನ್ಯ ನಿರ್ದೇಶಕರುಗಳಾದ ಶ್ರೀ ಲೋಕಪ್ಪ ಗುಂಬಾಳಿ, ಶ್ರೀ ರಾಜಕುಮಾರ ಹಿರೇಮಠ, ಚಿಕ್ಕೋಡಿ ಪುರಸಭೆ ಸದಸ್ಯರಾದ ಶ್ರೀ ಪ್ರವೀಣ ಕಾಂಬಳೆ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ಬಿ.ಚಂದರಗಿ ಇವರುಗಳು ಭಾಗವಹಿಸಿದ್ದರು. ತರಬೇತಿಯಲ್ಲಿ ಟಾಸ್ಕಫೋರ್ಸ್ ವಿಭಾಗದ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಕಾಂತ್ ಬರುವೆ, ಬೆಳಗಾವಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರಿ ಜವಾಹರ ಮುಗ್ಗನವರ ಇವರು ತರಬೇತಿಯಲ್ಲಿ ಭಾಗವಹಿಸಿದ್ದರು. ಲೆಕ್ಕಪತ್ರ ಹಾಗೂ ದಾಖಲಾತಿಗಳ ನಿರ್ವಹಣೆ ವಿಷಯದ ಕುರಿತು ಶ್ರೀ ಬಿ.ಬಿ.ಚಂದರಗಿ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಬೆಳಗಾವಿ ಇವರು ಉಪನ್ಯಾಸ ನೀಡಿದರು ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ವಿಷಯದ ಕುರಿತು ಶ್ರಿ ಅಮೃತ ಜೋಶಿ, ಮಾನ್ಯ ನಿರ್ದೇಶಕರು, ವಿಕಾಸ ಸೌಹಾರ್ದ ಕೋ-ಆಪ್ ಬ್ಯಾಂಕ ಲಿ., ಹೊಸಪೇಟ. ಇವರು ಸಹಕಾರಿಯ ಸಿಬ್ಬಂದಿಗಳಿಗೆ ಉಪನ್ಯಾಸ ನೀಡಿದರು.

ತರಬೇತಿಯಲ್ಲಿ ಶ್ರೀ ಸಾಯಿ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಶ್ರೀ ಮಹಾಲಕ್ಷ್ಮಿ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಶ್ರೀ ವೀರಸಾವರ್ಕರ ಸೌಹಾರ್ದ ಸಹಕಾರಿ ನಿ., ಹಾಗೂ ಶ್ರೀ ಪ್ರಭುದೇವ ಕ್ರೇಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ. ಸಹಕಾರಿಗಳಿಂದ ಒಟ್ಟು 58 ಸಿಬ್ಬಂದಿಗಳು ಭಾಗವಹಿಸಿ ಪ್ರಯೋಜನ ಪಡೆದಿರುತ್ತಾರೆ.


## SWABHIMANI SAHAKARI

### Form IV (See Rule-8)

| | | |
|---|---|---|
| 1. Place of Publication | : | **Bangalore, Karnataka** |
| 2. Periodicity of its Publications | : | **Monthly** |
| 3. Printer's Name | : | Omkar offset printers, 3/4, 1st Main Rd, New Tharagupet, Bengaluru Karnataka - 560021 |
| Whether Citizen of India | : | Yes |
| If foreigner, State the country of origin | | |
| 4. Editor's Name | : | **Sharangouda G. Patil** |
| Whether Citizen of India | : | Yes |
| If foreigner, State the country of origin | | |
| Address | : | Karnataka State Souharada Federal Co operative Ltd., "Souharda Sahakari Soudha", 1st Floor, Between 17th & 18th Cross, Margosa Road, Malleswaram, Bengaluru-560 055. |
| Name and Address of individuals who own the Newspaper and partners or share holders holding more than percent of the total capital | : | Managing Director<br>Karnataka State Souharada Federal Co operative Ltd.,<br>"Souharda Sahakari Soudha", 1st Floor, Between 17th & 18th Cross, Margosa Road, Malleswaram, Bengaluru-560 055. |

I, Sharangouda G. Patil here by declare that the particulars given above are true to the best of my knowledge and belief.

**Date : 28/02/2022** Sd/-

**Place : Bengaluru.** **Signature of the Publisher / Editor**

# ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳ ಫೋಟೋಗಳು























# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ದೂರ ಶಿಕ್ಷಣ)
## 4ನೇ ತಂಡದ ಸಂಪರ್ಕ ವರ್ಗದ ವಿವರಗಳು (contact classes details)

| ಕ್ರ. ಸಂ. | ಕೇಂದ್ರ | ದಿನಾಂಕ | ಸ್ಥಳ |
|---|---|---|---|
| 1 | ಬೆಂಗಳೂರು ಕೇಂದ್ರ | 19.02.2022 & 20.02.2022 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., "ಸೌಹಾರ್ದ ಸಹಕಾರಿ ಸೌಧ", ನಂ.68, ನೆಲ ಮಹಡಿ, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055 |
| 2 | ಶಿವಮೊಗ್ಗ ಕೇಂದ್ರ | 19.02.2022 & 20.02.2022 | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬಾಲರಾಜು ಅರಸು ರಸ್ತೆ, ಶಿವಮೊಗ್ಗ – 577201 |
| 3 | ಹೊಸಪೇಟೆ ಕೇಂದ್ರ | 19.02.2022 & 20.02.2022 | ಮೈರಾಡ್, #14, ಡಣಾಪೂರು(ಗ್ರಾಮ), ಹೊಸಪೇಟೆ, ವಿಜಯನಗರ – 583222 |
| 4 | ಕಾರವಾರ ಕೇಂದ್ರ | 19.02.2022 & 20.02.2022 | ಸೇಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೋಆಪರೇಟಿವ್ ಲಿ. ರೋಜರಿ ಡೇಲ್, ಕೇಶವ ಶೇಟ ರಸ್ತೆ, ಮೊದಲನೇಯ ಕ್ರಾಸ್, ಸೋನಾರವಾಡಾ, ಕಾರವಾರ |
| 5 | ಪುತ್ತೂರು ಕೇಂದ್ರ | 26.02.2022 & 27.02.2022 | ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ, ತೆಂಕಿಲಾ, ಪುತ್ತೂರು |
| 6 | ಬಳ್ಳಾರಿ ಕೇಂದ್ರ | 26.02.2022 & 27.02.2022 | ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸುಕೋ ಭವನ, ಮೋಕಾ ರಸ್ತೆ, ಗಾಂಧಿನಗರ, ಬಳ್ಳಾರಿ–583103 |
| 7 | ಚಿಕ್ಕೋಡಿ ಕೇಂದ್ರ | 26.02.2022 & 27.02.2022 | ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಸಿಟಿಎಸ್ ನಂ 2543/ಬಿ, ಬಸವ ಸರ್ಕಲ್ ಹತ್ತಿರ, ಚಿಕ್ಕೋಡಿ, ಬೆಳಗಾವಿ – 591201 |
| 8 | ಮುಧೋಳ ಕೇಂದ್ರ | 26.02.2022 & 27.02.200 | ವಿಜಯ ಸೌಹಾರ್ದ(ಎಂಆರ್‌ಎನ್) ಪತ್ತಿನ ಸಹಕಾರಿ ನಿ., ನಿರಾಣಿ ಕಟ್ಟಡ, ಮುಖ್ಯ ಪೋಸ್ಟ್‌ನ ಹಿಂದೆ, ಮುಧೋಳ, ಬಾಗಲಕೋಟ – 587313 |

**ಬೊರಗಾಂವ :** ದಿನಾಂಕ 24 ಜನವರಿ 2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್ ಕೃಷ್ಣಾರೆಡ್ಡಿಯವರು, ಮಾನ್ಯ ನಿರ್ದೇಶಕರಾದ ಶ್ರೀ ಎಂ.ಬಿ ಕಲಾಲ ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಬೊರಗಾಂವ, ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ, ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ.,ಯಕ್ಸಂಬಾ, ಡಾ. ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕಲಿ ಸಹಕಾರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಿ ಮಾರ್ಗದರ್ಶನ ಮಾಡಲಾಯಿತು.

# ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಕೋರಿಕೆ ವರ್ಗಾವಣೆ, ಜಿಲ್ಲಾ ಸಂಯೋಜಕರ ಕಾರ್ಯ ಬದಲಾವಣೆ ಮತ್ತು ಆಂತರಿಕ ವಿಭಾಗ ಬದಲಾವಣೆ ಆದೇಶ.

**ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ಶಾಸನಬದ್ಧ ಸಹಕಾರ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, 17–18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

www.souharda.coop, Ph: 080-23378375-80, Email:souharda@souharda.coop

ಪಸಂ:ಕರಾಸೌಸಂಸನಿ/ಸಿ.ವ/04/2021–22 ದಿನಾಂಕ: 02.02.2022

**ಕಛೇರಿ ಆದೇಶ**

ವಿಷಯ: ಸಂಯುಕ್ತ ಸಹಕಾರಿ ಸಿಬ್ಬಂದಿಗಳ ಕೋರಿಕೆ ವರ್ಗಾವಣೆ, ಜಿಲ್ಲಾ ಸಂಯೋಜಕರ ಕಾರ್ಯ ಬದಲಾವಣೆ ಮತ್ತು ಆಂತರಿಕ ವಿಭಾಗ ಬದಲಾವಣೆ ಕುರಿತು.

ಉಲ್ಲೇಖ: ಸಂಯುಕ್ತ ಸಹಕಾರಿಯ ಸಿಬ್ಬಂದಿ ಸೇವಾನಿಯಮಾವಳಿ ಸಂಖ್ಯೆ 17(2)ರನ್ವಯ.

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ಸಿಬ್ಬಂದಿಯವರನ್ನು ಈ ಕೆಳಕಂಡ ಹೆಸರಿನ ಮುಂದೆ ತೋರಿಸಿರುವ ಸ್ಥಳಕ್ಕೆ ಟಾಸ್ಕ್‌ಫೋರ್ಸ್, ಪರಿವೀಕ್ಷಣೆ, ಹಾಗೂ ಆಡಳಿತಾತ್ಮಕ ಮತ್ತು ನಿಯಂತ್ರಣ ಕಾರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುವ ದೃಷ್ಟಿಯಿಂದ ಅಧಿಕಾರಿಗಳ ನಿಯೋಜನೆ ಹಾಗೂ ಸಿಬ್ಬಂದಿಗಳಿಗೆ ಕಾರ್ಯಹಂಚಿಕೆ.

**ಕಾರ್ಯ ಬದಲಾವಣೆ ಪಟ್ಟಿ**

| ಪ್ರಾಂತ | ಕ್ರ.ಸಂ. | ಸಿಬ್ಬಂದಿ ಹೆಸರು | ಕಾರ್ಯ ಉಸ್ತುವಾರಿ ಜಿಲ್ಲೆಗಳು | ಕೇಂದ್ರ ಸ್ಥಾನ |
|---|---|---|---|---|
| ಎ. ಟಾಸ್ಕ್‌ಫೋರ್ಸ್, ಪರಿವೀಕ್ಷಣೆ ಹಾಗೂ ನಿಯಂತ್ರಣಾತ್ಮಕ ಕಾರ್ಯಗಳು | | | | |
| ಬೆಂಗಳೂರು ಪ್ರಾಂತ | 1 | ಶ್ರೀ ಅನೀಲ್ ಕುಮಾರ್ | ಬೆಂಗಳೂರು ನಗರ, ಬೆಂ.ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ | ಬೆಂಗಳೂರು |
| | 2 | ಶ್ರೀ ಕುಶಾಲ್ ಹೆಚ್ ಎಂ | ತುಮಕೂರು ಹಾಗೂ ಟಾಸ್ಕ್‌ಫೋರ್ಸ್ ಕಛೇರಿ ಕಾರ್ಯ | ಬೆಂಗಳೂರು |
| | 3 | ಶ್ರೀ ನಟರಾಜ | ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ | ಚಿತ್ರದುರ್ಗ |
| ಮೈಸೂರು ಪ್ರಾಂತ | 4 | ಶ್ರೀ ಗುರುಪ್ರಸಾದ ಬಂಗೇರ | ಮಂಗಳೂರು, ಉಡುಪಿ, ಚಿಕ್ಕಮಗಳೂರು &ಟಾಸ್ಕ್‌ಫೋರ್ಸ್ ಕಛೇರಿ ಕಾರ್ಯ – ಮೈಸೂರು ಪ್ರಾಂತ್ಯ | ಮಂಗಳೂರು |
| | 5 | ಶ್ರೀ ಶಿವಕುಮಾರ ಎ | ಮೈಸೂರು, ಮಂಡ್ಯ, ಚಾಮರಾಜನಗರ, ಮಡಿಕೇರಿ, ಹಾಸನ | ಮೈಸೂರು |
| ಬೆಳಗಾವಿ ಪ್ರಾಂತ | 6 | ಶ್ರೀ ವೃಷಭನಾಥ ಪರಪ್ಪನವರ | ಬೆಳಗಾವಿ – 1 ಹಾಗೂ ಟಾಸ್ಕ್‌ಫೋರ್ಸ್ ಕಛೇರಿ ಕಾರ್ಯ | ಬೆಳಗಾವಿ |
| | 7 | ಶ್ರೀ ಗಂಗಾರಾಂ ಸಗ್ಗು ಕೊಳಪಾಟೆ | ಬೆಳಗಾವಿ – 2 | ಬೆಳಗಾವಿ |
| | 8 | ಶ್ರೀ ನಾಗರಾಜ ಜಿ ಹೆಚ್ | ಬಾಗಲಕೋಟೆ, | ಬಾಗಲಕೋಟೆ |
| | 9 | ಶ್ರೀ ಪ್ರಭಯ್ಯ ಹಿರೇಮಠ | ವಿಜಯಪುರ, | ವಿಜಯಪುರ |
| | 10 | ಶ್ರೀ ಕಲ್ಮೇಶ ಎಸ್ ಎಂ | ಹಾವೇರಿ, ಗದಗ, ಧಾರವಾಡ, ಉತ್ತರ ಕನ್ನಡ | ಧಾರವಾಡ |
| ಕಲಬುರಗಿ ಪ್ರಾಂತ | 11 | ಶ್ರೀ ಸೂರ್ಯಕಾಂತ ರ‍್ಯಾಕಲೆ | ಬೀದರ, ಕಲಬುರ್ಗಿ ಹಾಗೂ ಟಾಸ್ಕ್‌ಫೋರ್ಸ್ ಕಛೇರಿ ಕಾರ್ಯ – ಕಲಬುರ್ಗಿ ಪ್ರಾಂತ್ಯ | ಕಲಬುರ್ಗಿ |
| | 12 | ಶ್ರೀ ವೆಂಕಟೇಶ ರಾಠೋಡ | ರಾಯಚೂರು, ಯಾದಗಿರಿ | ರಾಯಚೂರು |
| | 13 | ಶ್ರೀ ರವಿಕುಮಾರ ಕೆ ಆರ್ | ಬಳ್ಳಾರಿ, ವಿಜಯನಗರ, ಕೊಪ್ಪಳ | ಹೊಸಪೇಟೆ |

**ಬಿ. ಟಾಸ್ಕ್‌ಫೋರ್ಸ್, ಪರಿವೀಕ್ಷಣೆ ಹೊರತುಪಡಿಸಿ ಇನ್ನಿತರ ಕಾರ್ಯಗಳು**

(ಶಿಕ್ಷಣ, ತರಬೇತಿ, ಪ್ರಚಾರ, ವಂತಿಗೆ/ನಿಧಿ ಸಂಗ್ರಹ, ಶಾಸನಾತ್ಮಕ ಕಾರ್ಯಗಳಾದ ಕಲಂ.34ರ ಮಾಹಿತಿ, ಸಾಮಾನ್ಯ ಸಭೆ, ಚುನಾವಣೆ ನಡೆಸಿದ ಮಾಹಿತಿ ಸಂಗ್ರಹ, ಲೆಕ್ಕಪರಿಶೋಧನಾ ವರದಿ ತರಸಿಕೊಳ್ಳುವುದು ಹಾಗೂ ಪರಿಶೀಲನೆ ಮಾಡುವುದು ಇತ್ಯಾದಿ)

| ಪ್ರಾಂತ | ಕ್ರ.ಸಂ. | ಸಿಬ್ಬಂದಿ ಹೆಸರು | ಕಾರ್ಯ ಉಸ್ತುವಾರಿ ಜಿಲ್ಲೆಗಳು | ಕೇಂದ್ರ ಸ್ಥಾನ |
|---|---|---|---|---|
| ಬೆಂಗಳೂರು ಪ್ರಾಂತ | 1 | ಶ್ರೀ ರಾಜೇಶ ಕೆ ಎಂ | ಬೆಂಗಳೂರು ನಗರ, ಬೆಂ.ಗ್ರಾಮಾಂತರ, ರಾಮನಗರ, | ಬೆಂಗಳೂರು |
| | 2 | ಶ್ರೀ ಉಮೇಶ ಎ ಎಸ್ | ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು | ತುಮಕೂರು |
| | 3 | ಶ್ರೀ ಶಶಿಕುಮಾರ ಎಸ್ | ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ | ಶಿವಮೊಗ್ಗ |
| ಮೈಸೂರು ಪ್ರಾಂತ | 4 | ಶ್ರೀ ಸುರೇಶ ಆರ್ ಎಸ್ | ಮೈಸೂರು, ಕೊಡಗು | ಮೈಸೂರು |
| | 5 | ಶ್ರೀ ವಿಜಯ ಬಿ ಎಸ್ | ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು | ಉಡುಪಿ |
| | 6 | ಶ್ರೀ ಚಂದ್ರಶೇಖರಯ್ಯ ಎಂ | ಚಾಮರಾಜನಗರ, ಮಂಡ್ಯ, ಹಾಸನ | ಮೈಸೂರು |
| ಬೆಳಗಾವಿ ಪ್ರಾಂತ | 7 | ಶ್ರೀ ಜವಾಹರ ಮುಗನ್ನವರ್ | ಬೆಳಗಾವಿ – 1 | ಚಿಕ್ಕೋಡಿ |
| | 8 | ಶ್ರೀ ಸುಜಯ್ ಡಿ ಬೆಳವಿ | ಬೆಳಗಾವಿ – 2 | ಗೋಕಾಕ್ |
| | 9 | ಶ್ರೀ ಶಿವಕಾಂತ ಎನ್ | ವಿಜಯಪುರ | ವಿಜಯಪುರ |
| | 10 | ಶ್ರೀಮತಿ ರೇಷ್ಮಾ ಪಾಟೀಲ್ | ಬಾಗಲಕೋಟೆ | ಬಾಗಲಕೋಟೆ |
| | 11 | ಶ್ರೀ ಬಸವರಾಜ ಎಸ್ | ಹಾವೇರಿ, ಧಾರವಾಡ, ಗದಗ | ಹುಬ್ಬಳ್ಳಿ |
| | 12 | ಶ್ರೀ ಸಂತೋಷ ಕುಮಾರ್ ಎಂ ಜೆ | ಕಾರವಾರ, ಬೆಳಗಾವಿ–3 | ಶಿರಸಿ |
| ಕಲಬುರಗಿ ಪ್ರಾಂತ | 13 | ಶ್ರೀ ವೀರಶೆಟ್ಟಿ | ಬೀದರ, ಯಾದಗಿರಿ, ರಾಯಚೂರು | ಬೀದರ |
| | 14 | ಶ್ರೀ ಓಂಕಾರ | ಬಳ್ಳಾರಿ, ಕಲಬುರ್ಗಿ | ಕಲಬುರ್ಗಿ |
| | 15 | ಶ್ರೀ ಪವನ್ ಎಂ.ಆರ್ | ಕೊಪ್ಪಳ, ವಿಜಯನಗರ | ಕೊಪ್ಪಳ |

**ಕಛೇರಿ ಕಾರ್ಯ ಬದಲಾವಣೆ**

| ಕ್ರ.ಸಂ. | ಸಿಬ್ಬಂದಿ ಹೆಸರು | ಪ್ರಸ್ತುತ ಕಾರ್ಯ | ಕಾರ್ಯ ಬದಲಾವಣೆ | ಕೇಂದ್ರ ಸ್ಥಾನ |
|---|---|---|---|---|
| 1 | ಶ್ರೀ ಶಂಕರ್. | ವಿನ್ಯಾಸಕಾರ | ವಿನ್ಯಾಸ ಕಾರ್ಯ ಹಾಗೂ ಮೈಸೂರು ಪ್ರಾಂತೀಯ ಕಛೇರಿ ಕಾರ್ಯ | ಮೈಸೂರು |
| 2 | ಶ್ರೀಮತಿ ವಿಜಯಶ್ರೀ | ಸಹಾಯಕಿ, ಇ ಸ್ಟಾಂಪಿಂಗ್ ವಿಭಾಗ | ಬೆಂಗಳೂರು & ಮೈಸೂರು ಟಾಸ್ಕ್‌ಫೋರ್ಸ್ ಕಛೇರಿ ಕಾರ್ಯ | ಬೆಂಗಳೂರು |
| 3 | ಶ್ರೀಮತಿ ಹರ್ಷಪ್ರಭಾ | ಸಚಿವಾಲಯ, ಕೇಂದ್ರ ಕಛೇರಿ | ಕೇಂದ್ರ ಕಛೇರಿ ಸ್ವಾಗತಾಲಯ & ಭಾಗಶಃ ಸಚಿವಾಲಯ ವಿಭಾಗ | ಬೆಂಗಳೂರು |
| 4 | ಶ್ರೀಮತಿ ಪ್ರತಿಭಾ ಮಠ | ಸಹಾಯಕಿ, ಬೆಳಗಾವಿ ಪ್ರಾಂತ್ಯ | ಬೆಳಗಾವಿ & ಕಲಬುರಗಿ ಟಾಸ್ಕ್‌ಫೋರ್ಸ್ ಕಛೇರಿ ಕಾರ್ಯ | ಬೆಳಗಾವಿ |

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಹಾಗೂ ದಾವಾ ಪಂಚಾಯ್ತಿ ನ್ಯಾಯಾಲಯ ಬೆಂಗಳೂರು ಕಛೇರಿಯ ವಿಳಾಸ ಬದಲಾವಣೆಯ ಕುರಿತು ಸುತ್ತೋಲೆ.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

ಸಂ:– ಸಂಸ/ಆ.ವಿ/01/2021–22 ದಿನಾಂಕ:13.01.2022

ಇವರಿಗೆ :

ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು

ಮಾನ್ಯರೇ,

ವಿಷಯ : ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಹಾಗೂ ದಾವಾ ಪಂಚಾಯ್ತಿ ನ್ಯಾಯಾಲಯ ಬೆಂಗಳೂರು ಕಛೇರಿಯ ವಿಳಾಸ ಬದಲಾವಣೆಯ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಲ್ಲೇಶ್ವರಂನ ಮಾರ್ಗೋಸಾ ರಸ್ತೆಯಲ್ಲಿರುವ ಸ್ವಂತ ನಿವೇಶನದಲ್ಲಿ 'ಸೌಹಾರ್ದ ಸಹಕಾರಿ ಸೌಧ' ಕಟ್ಟಡವನ್ನು ನಿರ್ಮಿಸಲಾಗಿದ್ದು, ಸದರಿ ಕಟ್ಟಡದ ಪೂಜಾ ಕಾರ್ಯಕ್ರಮ ದಿನಾಂಕ 21 & 22 ಡಿಸೆಂಬರ್ 2021ರಂದು ಜರುಗಿರುತ್ತದೆ.

ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಮತ್ತು ದಾವಾ ಪಂಚಾಯಿತಿ ನ್ಯಾಯಾಲಯದ ಬೆಂಗಳೂರಿನ ಕಛೇರಿಗಳನ್ನು ಇದೇ ತಿಂಗಳ 20 ಜನವರಿಯೊಳಗಾಗಿ 'ಸೌಹಾರ್ದ ಸಹಕಾರಿ ಸೌಧ' ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತಿದೆ. ಆದ್ದರಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಮತ್ತು ದಾವಾ ಪಂಚಾಯಿತಿ ನ್ಯಾಯಾಲಯದ ಬೆಂಗಳೂರಿನ ಕಛೇರಿಗಳಿಗೆ ಸಂಬಂಧಿಸಿದ ಯಾವುದೇ ಪತ್ರ ವ್ಯವಹಾರಗಳನ್ನು 20 ಜನವರಿ 2022ರಿಂದ ಅನ್ವಯವಾಗುವಂತೆ ಈ ಕೆಳಕಂಡಂತೆ ಬದಲಾದ ಕಛೇರಿ ವಿಳಾಸದೊಂದಿಗೆ ವ್ಯವಹರಿಸಲು ಕೋರಿದೆ.

| ಪ್ರಸ್ತುತ ವಿಳಾಸ | ನೂತನ ವಿಳಾಸ |
|---|---|
| **ಕೇಂದ್ರ ಕಛೇರಿ ಬೆಂಗಳೂರು** : ನಿರ್ಮಾಣ ಭವನ, ಡಾ॥ ರಾಜ್ ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 | "ಸೌಹಾರ್ದ ಸಹಕಾರಿ ಸೌಧ", ನಂ.68, ಕ. ರಾ. ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560055 |
| **ಬೆಂಗಳೂರು ಪ್ರಾಂತೀಯ ಕಛೇರಿ** : #141, 1ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ಡಾ॥ ರಾಜ್‌ಕುಮಾರ್ ರಸ್ತೆ, 1ನೇ ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 | "ಸೌಹಾರ್ದ ಸಹಕಾರಿ ಸೌಧ", ನಂ.68, ಕ. ರಾ. ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560055 |
| **ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು** : ಸಂಖ್ಯೆ–246, ಮಾರ್ಗೋಸಾ ರಸ್ತೆ, 17ನೇ & 18ನೇ ಕ್ರಾಸ್ ಮಧ್ಯೆ, ಮಲ್ಲೇಶ್ವರಂ, ಬೆಂಗಳೂರು | "ಸೌಹಾರ್ದ ಸಹಕಾರಿ ಸೌಧ", ನಂ.68, ಕ. ರಾ. ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560055 |
| **ಇ ಸ್ಟಾಂಪಿಂಗ್ ವಿಭಾಗ** : ನಿರ್ಮಾಣ ಭವನ, ಡಾ॥ ರಾಜ್ ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 | "ಸೌಹಾರ್ದ ಸಹಕಾರಿ ಸೌಧ", ನಂ.68, ಕ. ರಾ. ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ ಸ್ಟಾಂಪಿಂಗ್ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560055 |

ವಂದನೆಗಳೊಂದಿಗೆ,

Karnataka State Souharda Federal Cooperative Ltd. Reg. No. RSR / SOU / ACT / 136 / Regn 051 / 2001-02 dated 04-01-2002 * Bangalore *

ಶರಣಗೌಡ ಜಿ ಪಾಟೀಲ
(ವ್ಯವಸ್ಥಾಪಕ ನಿರ್ದೇಶಕರು)

# ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ..ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/– |
| 2 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/– |
| 3 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/– |
| 4 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/– |
| 5 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/– |
| 6 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/– |
| 7 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಕೈಪಿಡಿ | 15/– |
| 8 | ಕರ್ನಾಟಕ ರಾಜ್ಯದ ವಿಶಿಷ್ಟ ಸಹಕಾರ ಸಂಸ್ಥೆಗಳು | 40/– |
| 9 | Special Co-opearative Societies of Karnataka | 25/– |
| 10 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/– |
| 11 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/– |
| 12 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/– |
| 13 | Karnataka High Court Judgements Related to Co-operative Sector | 200/– |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/– |
| 15 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ – 2 | 100/– |
| 16 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/– |
| 17 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀರ್ಪುಗಳು | 120/– |
| 18 | Karnataka High Court Judgements Related to Co-operative Sector Vol -2 | 400/– |
| 19 | Supreme Court Judgement Related to Co-operative Sector Volume - 1 | 150/– |
| 20 | Supreme Court Judgement Related to Co-operative Sector Volume - 2 | 500/– |
| 21 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/– |
| 22 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/– |
| 23 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/– |
| 24 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/– |
| 25 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/– |
| 26 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/– |
| 27 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/– |
| 28 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/– |
| 29 | ಸಾಲ ವಸೂಲಾತಿ ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ಭಾರತದ ಸಂವಿಧಾನ, ಅರ್ಥ, ಆಶಯ ಹಾಗೂ ಪ್ರಮುಖ ಅಂಶಗಳು | 150/– |

# ಸಹಕಾರ ಸಂಘಗಳ/ ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಕುರಿತು ಸರ್ಕಾರದ ಆದೇಶ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಒ 03 ಸಿಎಲ್ಎಮ್ 2022 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:19.01.2022.

**ಇಂದ,**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-1

**ತುರ್ತು**

**ಇವರಿಗೆ**

ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
3ನೇ ಮಹಡಿ, ಟಿ.ಟಿ. ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ,
ಬೆಂಗಳೂರು – 560 027.

**ಮಾನ್ಯರೆ,**

**ವಿಷಯ:** ಸಹಕಾರ ಸಂಘಗಳ/ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಸಿಒ 29 ಸಿಎಲ್ಎಮ್ 2021, ದಿನಾಂಕ: 18.06.2021.
2. ತಮ್ಮ ಸುತ್ತೋಲೆ/ತಿದ್ದೋಲೆ ದಿನಾಂಕ:21.06.2021.
3. ಸರ್ಕಾರದ ಪತ್ರ ಸಂಖ್ಯೆ: ಸಿಒ 40 ಸಿಎಲ್ಎಮ್ 2021, ದಿನಾಂಕ:17.07.2021.
4. ತಮ್ಮ ಸುತ್ತೋಲೆ ದಿನಾಂಕ:19.07.2021.
5. ಸರ್ಕಾರದ ಪತ್ರ ಸಂಖ್ಯೆ: ಸಿಒ 40 ಸಿಎಲ್ಎಮ್ 2021 (ಭಾಗ-1), ದಿನಾಂಕ:08.10.2021.
6. ತಮ್ಮ ಸುತ್ತೋಲೆ ದಿನಾಂಕ:08.10.2021.
7. ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆದೇಶ ಸಂಖ್ಯೆ:ಆರ್‌ಡಿ 158 ಟಿಎನ್‌ಆರ್ 2020, ದಿನಾಂಕ:04.01.2022 ಮತ್ತು 11.01.2022.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆ ತಮ್ಮ ಗಮನ ಸೆಳೆಯಲಾಗಿದೆ. ಉಲ್ಲೇಖ (1) ಮತ್ತು (3)ರ ಪತ್ರಗಳಲ್ಲಿ ಕೋವಿಡ್-19ರ 2ನೇ ಅಲೆಯ ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಸಹಕಾರ ಸಂಘಗಳ/ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಸಾರ್ವತ್ರಿಕ ಚುನಾವಣೆಗಳನ್ನು ಡಿಸೆಂಬರ್ 2021ರ ಅಂತ್ಯದ ವರೆಗೆ ಮುಂದೂಡಲು ತಿಳಿಸಲಾಗಿರುತ್ತದೆ.

ಉಲ್ಲೇಖ (2) ಮತ್ತು (4) ಗಳಲ್ಲಿ ಸಹಕಾರ ಸಂಘಗಳ/ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಡಿಸೆಂಬರ್ 2021ರ ಅಂತ್ಯದ ವರೆಗೆ ಮುಂದೂಡಿ ಸುತ್ತೋಲೆ ಹೊರಡಿಸಲಾಗಿರುತ್ತದೆ.

...2

-2-

ನಂತರ, ಉಲ್ಲೇಖ (5)ರಲ್ಲಿ ಸಹಕಾರ ಸಂಘಗಳ/ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲು ಕ್ರಮವಿಡುವಂತೆ ತಿಳಿಸಿದ ಹಿನ್ನಲೆಯಲ್ಲಿ ಉಲ್ಲೇಖ (6)ರಲ್ಲಿ ಚುನಾವಣೆಗಳನ್ನು ನಡೆಸಲು ಸುತ್ತೋಲೆ ಹೊರಡಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (7)ರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ 3ನೇ ಅಲೆಯಿಂದಾಗಿ ಹಾಗೂ ಒಮಿಕ್ರಾನ್ ರೂಪಾಂತರ ತಳಿಯು ವ್ಯಾಪಕವಾಗಿ ಹರಡುತ್ತಿರುವ ಕಾರಣ ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ಜಾರಿಗೆ ತಂದಿದ್ದು, ಪ್ರಸ್ತುತ ಮಾರ್ಗಸೂಚಿಗಳು ಜಾರಿಯಲ್ಲಿರುತ್ತವೆ.

ಪ್ರಸ್ತುತ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯನುಸಾರ ರಾಜ್ಯದಲ್ಲಿರುವ ಸಹಕಾರ ಸಂಘಗಳು/ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಕೋವಿಡ್-19ರ ನಿಯಮಗಳ ಪಾಲನೆ ಮಾಡಿ ಸಾಮಾಜಿಕ ಅಂತರ ಕಾಯ್ದುಕೊಂಡು ನಡೆಸುವುದು ಕಷ್ಟಸಾಧ್ಯವಾಗಬಹುದು. ಸದರಿ ಚುನಾವಣೆಗಳು ಜರುಗಿದ್ದಲ್ಲಿ ಸಾಂಕ್ರಾಮಿಕ ರೋಗವು ಹರಡುವ ಸಾಧ್ಯತೆ ಇರುವ ಹಿನ್ನಲೆಯಲ್ಲಿ ಎಲ್ಲಾ ಸಹಕಾರ ಸಂಘಗಳು/ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆ/ಉಪ ಚುನಾವಣೆಗಳನ್ನು ಮಾರ್ಚ್, 2022 ರ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೂ ಮುಂದೂಡುವಂತೆ ಹಾಗೂ ಈಗಾಗಲೇ ಚುನಾವಣಾ ಪ್ರಕ್ರಿಯೆಗಳನ್ನು ಪ್ರಾರಂಭಿಸಿರುವ ಪ್ರಕರಣಗಳಿಗೂ ಸಹ ಮೇಲಿನ ಕ್ರಮ ಅನ್ವಯವಾಗುವಂತೆ ಸೂಕ್ತ ಸುತ್ತೋಲೆ ಹೊರಡಿಸಲು ಅಗತ್ಯ ಕ್ರಮವಿಡುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

19/1

**(ಎಂ. ವೆಂಕಟಸ್ವಾಮಿ)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ




**ದಕ್ಷಿಣ ಕನ್ನಡ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್ ಸತೀಶ್ಚಂದ್ರ ಇವರು ತಮ್ಮ ಸಹಕಾರಿಯ ಸಿಬ್ಬಂದಿಗಳಿಗೆ 4ನೇ ತಂಡದ ಡಿ.ಸಿ.ಬಿ.ಎಂ ಅಧ್ಯಯನ ಸಾಹಿತ್ಯವನ್ನು ವಿತರಿಸಿದ್ದರು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಉಪಸ್ಥಿತರಿದ್ದರು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

**ಮಹಾಬಲ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗೋಲಭಾವಿ, ಬಾಗಲಕೋಟ.**



ಶ್ರೀ ಜಯಪಾಲ ತಿಪ್ಪಣ್ಣ ಆಳಪ್ಪನವರ
ಅಧ್ಯಕ್ಷರು



ಶ್ರೀ ಬಿರಪ್ಪ ಬಸಪ್ಪ ಕರಿಗಾರ
ಉಪಾಧ್ಯಕ್ಷರು

**ಶ್ರೀ ವಿಶ್ವಗುರು ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಮಲ್ಲಾಪೂರ ಪಿ.ಜಿ, ಘಟಪ್ರಭ, ಗೋಕಾಕ, ಬೆಳಗಾವಿ**



ಶ್ರೀ ಅರವಿಂದ ಗುರುಸಿದ್ದಪ್ಪಾ ಬಡಕುಂದ್ರಿ
ಅಧ್ಯಕ್ಷರು



ಶ್ರೀ ಬಸವರಾಜ ಬಾಬರಾವ ಬಿಳ್ಳೂರ
ಉಪಾಧ್ಯಕ್ಷರು

## ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಬೀದರನಲ್ಲಿ ಇದರ ಶಾಖೆ ಉದ್ಘಾಟನೆ



**ಬೀದರ** : ದಿನಾಂಕ 12.01.2022 ರಂದು ಬೀದರ ಜಿಲ್ಲೆಯ ಬೀದರ ಮಹಿಳಾ ಅರ್ಬನ್ ಸೌಹಾರ್ದ ಕೋ–ಅಪರೇಟಿವ್ ಬ್ಯಾಂಕ್ ನಿ., ಬೀದರ ಸದರಿ ಸಹಕಾರಿಯು ವಿಕಾಸ ಸೌಹಾರ್ದ ಕೋಆಪರೇಟಿವ್ ಬ್ಯಾಂಕ್. ಲಿ ಹೊಸಪೇಟೆ ಇದರಲ್ಲಿ ವಿಲೀನಗೊಂಡಿರುವ ಹಿನ್ನಲೆಯಲ್ಲಿ 8ನೇ ಶಾಖಾ ಉದ್ಘಾಟನೆಯನ್ನು ಶ್ರೀ ಗುರುಬಸವ ಪಟ್ಟದೇವರು ಹಿರೇಮಠ ಸಂಸ್ಥಾನ ಭಾಲ್ಕಿ ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಕಾಸ ಸೌಹಾರ್ದ ಕೋಅಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠರವರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶಕುಂತಲಾ ಬೆಲ್ದಾಳೆ, ಶ್ರೀ ಸಲಿಮೊದ್ದಿನ ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.

## ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಪದಾಧಿಕಾರಿಗಳ ಆಯ್ಕೆ



**ಬೆಂಗಳೂರು** : ದಿನಾಂಕ 17/01/2022 ರಂದು ನಡೆದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ, ಪದಾಧಿಕಾರಿಗಳ ಚುನಾವಣೆಯಲ್ಲಿ ಒಕ್ಕೂಟದ ನೂತನ ಅಧ್ಯಕ್ಷರಾಗಿ ಶ್ರೀಯುತ ಶ್ರೀಧರ್ ಎನ್ ರಾವ್ ಹಾಗೂ ಉಪಾಧ್ಯಕ್ಷರಾಗಿ ಶ್ರೀಯುತ ಎಸ್.ಎನ್.ಶಂಕರ್ ಮೂರ್ತಿ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿಯವರು ಹಾಗೂ ಸಂಯುಕ್ತ ಸಹಕಾರಿಯ ಬೆಂಗಳೂರು ನಗರದ ನಿರ್ದೇಶಕರಾದ ಶ್ರೀಯುತ ಬಿ.ಎಸ್. ಗಂಡುರಾವ್ ರವರು ಉಪಸ್ಥಿತರಿದ್ದರು.

## ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ



**ಬಾಗಲಕೋಟ** : ದಿನಾಂಕ 28/01/2022 ರಂದು ಜರುಗಿದ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಬಾಗಲಕೋಟೆ ಪದಾಧಿಕಾರಿಗಳ ಚುನಾವಣೆಯಲ್ಲಿ, ಅಧ್ಯಕ್ಷರಾಗಿ ಮಾಜಿ ಸಚಿವರಾದ ಡಾ. ಶ್ರೀ.ಎಸ್ ಆರ್ ಪಾಟೀಲ ಹಾಗೂ ಉಪಾಧ್ಯಕ್ಷರಾಗಿ ಶ್ರೀ. ಜಿ.ಎನ್ ಪಾಟೀಲ, ಆಯ್ಕೆಗೊಂಡರು. ರಿಟರ್ನಿಂಗ್ ಆಫೀಸರ್ ಹಾಗೂ ಸಹಕಾರಿ ಸಂಘಗಳ ಉಪನಿಬಂಧಕರಾದ ಶ್ರೀ.ಕಲ್ಲಪ್ಪ ಓಬಣ್ಣಗೋಳ ಇವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ನೂತನವಾಗಿ ಆಯ್ಕೆಗೊಂಡ ಎಲ್ಲ ನಿರ್ದೇಶಕ ಮಂಡಳಿ ಸದಸ್ಯರು, ಸಹಕಾ–ರಿಯ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಾದ ಶ್ರೀ.ಎಸ್.ಸಿ.ಮೋಟಗಿ, ಸಹಕಾರಿಯ ಚುನಾವಣಾ ಅಧಿಕಾರಿಗಳಾದ ಶ್ರೀ.ಕೆ.ಎಸ್.ಬೆಳವಲ ಹಾಗೂ ಸಹಕಾರಿಯ ವ್ಯವಸ್ಥಾಪಕರಾದ ಶ್ರೀ.ಜಿ.ಡಿ.ಪಾಟೀಲ, ಶ್ರೀ.ಎಮ್.ಎನ್. ಮುರಕಾಟಿಟ್ಟಿ ಉಪಸ್ಥಿತರಿದ್ದರು.



# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು



**ಕಾವೂರು :** 28.11.2021 ರಂದು ಶ್ರೀ ಗುರುಶಕ್ತಿ ಸೌಹಾರ್ದ ಕೋ ಆಪರೇಟಿವ್ ನಿ ಕಾವೂರು. ಇದರ ವಾರ್ಷಿಕ ಸಾಮಾನ್ಯ ಸಭೆಯು ಸೊಸೈಟಿಯ ಆವರಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡ ಶ್ರೀ ಚಂದ್ರಶೇಖರ್ ಕುಮಾರ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಿರ್ದೇಶಕರಾದ ಶ್ರೀಪುರುಷೋತ್ತಮ್. ಎನ್ ಪೂಜಾರಿಯವರು ಸಭೆಯನ್ನು ಸ್ವಾಗತಿಸಿದರು. 2020–21 ನೇ ಸಾಲಿನ ವಾರ್ಷಿಕ ವರದಿಯನ್ನು ಆಡಳಿತ ಮಂಡಳಿಯ ನಿರ್ದೇಶಕಿಯಾದ ಶ್ರೀಮತಿ ಭವ್ಯ ಪೂಜಾರಿಯವರು ಮಂಡಿಸಿದರು. ಸರ್ವಾನುಮತದಿಂದ ಮಂಜೂರಾತಿ ಪಡೆಯಲಾಯಿತು. 2020–21ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ನಿರ್ದೇಶಕರಾದ ಶ್ರೀ ಜಿ. ಚಂದ್ರಶೇಖರ್ ರವರು ಮಂಡಿಸಿ ಮಂಜೂರಾತಿ ಪಡೆಯಲಾಯಿತು. ಇತ್ತೀಚಿಗೆ ಸಹಕಾರ ಕಾಯ್ದೆಗೆ ತಿದ್ದುಪಡಿಗಳನ್ನು ಸಹಕಾರಿಯಲ್ಲಿ ಅಳವಡಿಸುವ ಬಗ್ಗೆ ಮಂಜೂರಾತಿ ಪಡೆಯಲಾಯಿತು. ಅಭಿವೃದ್ಧಿಗೆ ಶ್ರಮಿಸಿದ ಎಲ್ಲಾ ನಿರ್ದೇಶಕರಿಗೆ, ಸದಸ್ಯರಿಗೆ, ಗ್ರಾಹಕರಿಗೆ, ಸಿಬ್ಬಂದಿ ವರ್ಗದವರಿಗೆ ಅಧ್ಯಕ್ಷರು ಕೃತಜ್ಞತೆ ಸಲ್ಲಿಸಿದರು. ಸಹಕಾರಿಯ ಇ–ಸ್ಟಾಂಪಿಂಗ್, RTC ಹಾಗೂ Mini ATM ಸೌಲಭ್ಯಗಳ ಕುರಿತು ಸದಸ್ಯರಿಗೆ ವಿವರಣೆ ನೀಡಲಾಯಿತು. ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಬಿ.ಗಾಯತ್ರಿ ಕಾರ್ಯಕ್ರಮವನ್ನು ನಿರೂಪಿಸಿದರು.

ಸಹಕಾರಿಯ ನಿರ್ದೇಶಕರಾದ ಶ್ರೀ ಸದಾಶಿವ ಪೂಜಾರಿ , ಶ್ರೀ ಕಿಶೋರ್ ಸುವರ್ಣ, ಶ್ರೀಹೇಮಚಂದ್ರ ಹೆಚ್, ಶ್ರೀ.ದಿವಾಕರ್, ಶ್ರೀಸದಾಶಿವ, ಶ್ರೀಮತಿ ಪೂರ್ಣಿಮ ಕೆ. ನಾಯ್ಕ ಕುಮಾರಿ. ಶ್ರೀರಕ್ಷಾ ಹಾಗೂ ಕಛೇರಿ ಸಹಾಯಕಿಯಾದ ಕುಮಾರಿ. ರಚನಾ ರವರು ಸಹ ಉಪಸ್ಥಿತರಿದ್ದರು. ಉಪಾಧ್ಯಕ್ಷರಾದ ಶ್ರೀ ಸಚ್ಚಿದಾನಂದ ಪೂಜಾರಿಯವರು ವಂದನಾರ್ಪಣೆಯನ್ನು ನೆರವೇರಿಸಿದರು.



**ಬೆಂಗಳೂರು ಗ್ರಾಮಾಂತರ :** ದಿನಾಂಕ 12.12.2021 ರ ಭಾನುವಾರ ಬೆಳಗ್ಗೆ 10.00 ಗಂಟೆಗೆ ಪವಾಡ ಶ್ರೀ ಬಸವಣ್ಣ ದೇವರ ಮಠದಲ್ಲಿ ಶ್ರೀಕೂಡಲ ಸಂಗಮ ಸೌಹಾರ್ದ ಸಹಕಾರಿಯ 8ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಶ್ರೀ ಎಸ್. ಎಸ್ ಬಿರಾದಾರ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಸಭೆಯು ಗಿಡಕ್ಕೆ ನೀರೆರೆಯುವುದರ ಮೂಲಕ ಪ್ರಾರಂಭಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಎಸ್. ಎಸ್. ಬಿರಾದಾರ ಅವರು ಸಹಕಾರಿಯ ಆರ್ಥಿಕ ವರ್ಷದ ವಹಿವಾಟುಗಳ ಬಗ್ಗೆ ಸರ್ವ ಸದಸ್ಯರಿಗೆ ಮಾಹಿತಿ ನೀಡಿ, 2020–21 ನೇ ಸಾಲಿನ ಲೆಕ್ಕ ಪತ್ರ ವರದಿಯನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದರು. ಹಾಗೂ 2021–22ನೇ ಸಾಲಿನ ಮುಂಗಡ ಪತ್ರ ಮಂಡಿಸಿ, ಅನುಮೋದನೆ ಪಡೆದರು. ಸಹಕಾರಿಯ ಅಧ್ಯಕ್ಷರಾದ ಎಸ್.ಎಸ್.ಬಿರಾದಾರ, ಉಪಾಧ್ಯಕ್ಷರಾದ ಎಮ್ ಸಿ ಪಾಟೀಲ, ಗೌರವ ಅಧ್ಯಕ್ಷರಾದ ಶ್ರೀ ಎಂ.ವಿ.ನೆಗಳೂರ , ಮಹಿಳಾ ನಿರ್ದೇಶಕಿ ಶ್ರೀಮತಿ ಜಯಶ್ರೀ ವಿಜಯಕುಮಾರ, ಶ್ರೀಮತಿ ಸುಜಾತ ಆರ್ ಜೋಷಿ, ಬಿ ಟಿ ಪಾಟೀಲ, ಪ್ರಹ್ಲಾದ ಕುಲಕರ್ಣಿ, ಶರಣ ಬಸಪ್ಪ ಗೌಡರ, ರಾಜಕುಮಾರ ಮಾಕಾಪುರ, ಜಿ.ಐ.ಬಡಿಗೇರ, ಅಪ್ಪಾಸಾಹೇಬ್ ಗಾಣಿಗೇರ, ಸಂಜೀವ ಕುಲಕರ್ಣಿ, ಮಲ್ಲಿಕಾರ್ಜುನ ಹಲಗತ್ತಿ ಸುಭಾಷ ಕವನಳ್ಳಿ, ವೀರಭದ್ರಪ್ಪ ಕರಜಗಿ ನಿರ್ದೇಶಕರು/ಪದಾಧಿಕಾರಿಗಳು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ವಿಜಯಲಕ್ಷ್ಮಿ,ಸಿಬ್ಬಂದಿ ಶಿಲ್ಪ ಜಿ.ವಿ. ಪಿಗ್ಮಿ ಸಂಗ್ರಹಕಾರರಾದ ಸುಧೀಂದ್ರ ಜೋಷಿ ಅವರು ಭಾಗವಹಿಸಿದ್ದರು. ಎಮ್ ಸಿ ಪಾಟೀಲ ವಂದನಾರ್ಪಣೆ ಸಲ್ಲಿಸುವುದರ ಮೂಲಕ ಸಭೆ ಮುಕ್ತಾಯ ಗೊಂಡಿತು.



**ಚಿತ್ರದುರ್ಗ :** ದಿನಾಂಕ 14.01.2022 ರಂದು ಪ್ರಗತಿದುರ್ಗ ಸೌಹಾರ್ದ ಪತ್ತಿನ ಸಹಕಾರಿ ನಿ,. ಚಿತ್ರದುರ್ಗ, ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜು ರವರು ಭಾಗವಹಿಸಿ, ಆಡಳಿತ ಮಂಡಲಿ ಚುನಾವಣೆ ಪ್ರಕ್ರಿಯೆಗಳ ಬಗ್ಗೆ, ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ಹಾಗೂ ನಿರ್ದೇಶಕರ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ಚಾಮರಾಜನಗರ :** ದಿನಾಂಕ 11.01.2022 ರಂದು ಜೈಭೀಮ್ ಬಿಜಿನೆಸ್ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಪ್ರಥಮ ಸರ್ವಸದಸ್ಯರ ವಾರ್ಷಿಕ ಮಹಾ ಸಭೆಯ ಉದ್ಘಾಟನೆಯನ್ನು ಸಸಿಗೆ ನೀರು ಪೋಷಿಸುವ ಮೂಲಕ ಆಯ್ಯುಷ್ಮಾನ್ ಎಸ್. ನಂಜುಂಡಸ್ವಾಮಿ ರವರು, ಅಧ್ಯಕ್ಷರು, ಆದಿ ಕರ್ನಾಟಕ ಅಭಿವೃದ್ಧಿ ಸಂಘ, ಚಾಮರಾಜನಗರ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಮುಖ್ಯ ಪ್ರವರ್ತಕರಾದ ಆಯುಷ್ಮಾನ್ ಮಲ್ಲಿಕಾರ್ಜುನಸ್ವಾಮಿ ರವರು, ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಹಾಗೂ ಸಹಕಾರಿಯ ಪ್ರವರ್ತಕರು ಉಪಸ್ಥಿತ–ರಿದ್ದರು. ಜಿಲ್ಲಾ ಸಂಯೋಜಕರು ಸೌಹಾರ್ದ ಸಹಕಾರಿ ಕಾಯ್ದೆ, ಆಡಳಿತ ಮಂಡಳಿ ಸದಸ್ಯರ ಹಕ್ಕು– ಕರ್ತವ್ಯಗಳು, ಸದಸ್ಯರ ಜವಾಬ್ದಾರಿ ಕುರಿತು ಮಾಹಿತಿಯನ್ನು ನೀಡಿದರು.

## ಮಹಾಯೋಗಿ ವೇಮನರ 610ನೇ ಜಯಂತ್ಯೋತ್ಸವ



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾ–ರಿಯಲ್ಲಿ ಶ್ರೀ ಶ್ರೀ ಶ್ರೀ ಮಹಾಯೋಗಿ ವೇಮನರ 610ನೇ ಜಯಂತ್ಯೋತ್ಸವ ಪ್ರಯುಕ್ತ, ರೆಡ್ಡಿಜನ ಸಂಘ, ಬೆಂಗಳೂರು ಉತ್ತರ ವಲಯ ಹಾಗೂ ರೆಡ್ ಕ್ರಾಸ್ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ 19.01.2022 ರಂದು ಕೇಂದ್ರ ಕಛೇರಿಯಲ್ಲಿ ಹಾಗೂ ವರ್ತೂರು ಶಾಖೆಯ ಆವರಣದಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿರುತ್ತದೆ. ಈ ಮಹತ್ವದ ರಕ್ತದಾನ ಶಿಬಿರಕ್ಕೆ 400ಜನ ಭಾಗವಹಿಸಿದ್ದು, ಒಟ್ಟು 218 ರಕ್ತದಾನಿಗಳು ರಕ್ತದಾನ ಮಾಡಿರುತ್ತಾರೆ. ಈ ಮಹತ್ವದ ಕಾರ್ಯಕ್ರಮವೂ ಬಹಳ ಯಶಸ್ವಿಯಾಗಿ ನಡೆಯಿತು.



**ಚಾಮರಾಜನಗರ :** ನೇತಾಜಿ ಸುಭಾಷ್ ಚಂದ್ರ ಭೋಸ್ ರವರ 125ನೇ ಜನ್ಮದಿನದ ಅಂಗವಾಗಿ 22ನೇ ವಾರ್ಡ್, ಚಾಮರಾಜನಗರ ನಿವಾಸಿಗಳಿಗೆ ಜಿಲ್ಲಾಡಳಿತ, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಹಾಗೂ ಇತರೆ ಸಂಘ ಸಂಸ್ಥೆಗಳ ವತಿಯಿಂದ ಕೋವಿಡ್–19 ಲಸಿಕಾ ಅಭಿಯಾನ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಶ್ರೀಮತಿ ಮಮತಾ ಬಾಲಸುಬ್ರಹ್ಮಣ್ಯ, ಸಹಕಾರಿಯ ನಿರ್ದೇಶಕರಾದ ಶ್ರೀ ಬಾಲಸುಬ್ರಹ್ಮಣ್ಯ ರವರು, ಶ್ರೀ ರಾಜಣ್ಣ ರವರು, ಶ್ರೀ ಪದ್ಮ ಕುಮಾರ್ ರವರು ಮತ್ತು ಸಿಇಓ ಶ್ರೀ ಸಂಕೀರ್ತನ್ ಹಾಜರಿದ್ದರು.

## 73ನೇ ಗಣರಾಜ್ಯೋತ್ಸವ ದಿನಾಚರಣೆ



**ಗದಗ :** ದಿನಾಂಕ 26.01.2022 ರಂದು ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ 73ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ನಿರ್ದೇಶಕರಾದ ಶ್ರೀ ಅಶೋಕ ಎಸ ಸಂಕಣ್ಣವರ ಇವರ ನೆರವೇರಿಸದಿರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಎಂ ಪಾಟೀಲ, ನಿರ್ದೇಶಕರಾದ ಶ್ರೀ ಎಸ್ ಎಲ್ ನೀಲಗುಂದ ಶ್ರೀ ಎಸ್ ಪಿ ಪಾಟೀಲ, ಶ್ರೀ ಎಸ್ ಬಿ ಕಲಕೇರಿ, ಶ್ರೀ ಎಂ ಆರ್ ಕಿತ್ತೂರು, ಮತ್ತು ಶ್ರೀಮತಿ ಸವಿತಾ ಎಂ ಪಾಟೀಲ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಬೆಂಗಳೂರು :** ದಿನಾಂಕ 01.01.2021 ರಂದು ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ರಾಯಚೂರು :** ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ರಾಯಚೂರು :** ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯಲ್ಲಿ 2022ರ ಕ್ಯಾಲೆಂಡರ್ ಅನ್ನು ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ವಿಜಯಪುರ :** ದಿನಾಂಕ 01.01.2022 ರಂದು ವರಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಮಾನ್ಯ ಶ್ರೀ ಸಂಜಯ ಬ. ಪಾಟೀಲ ನೆರವೇರಿಸಿದರು. ನಂತರ ಮಾತನಾಡಿ ಸೌಹಾರ್ದ ಸಹಕಾರಿಗಳು ಸಮಾಜಕ್ಕೆ ಅಭಿವೃದ್ಧಿ ಹೊಂದಲು ಪರಸ್ಪರ ಸಹಕಾರ ಮನೋಭಾವನೆ ಬೆಳಸಲು ಹಾಗೂ ಸೌಹಾರ್ದಯುತವಾಗಿ ಬೆಳೆಯಲು ಅವಕಾಶ ಮಾಡಿಕೊಡುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಸದಾಶಿವ ರಾ. ಮನಗೂಳಿ, ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಿತ್ರದುರ್ಗ :** ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ., ಚಿತ್ರದುರ್ಗ ಪ್ರಧಾನ ಕಚೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಪಿ. ಎಸ್.ನಾಗರಾಜ ಶೆಟ್ಟಿ ಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಎಂ.ಹೆಚ್.ಪ್ರಾಣೇಶ್ ನಿರ್ದೇಶಕರಾದ ಎಲ್.ಬ್ರಹ್ಮಾನಂದ ಗುಪ್ತ, ಕೆ.ವಿ.ಮಂಜುಪ್ರಸಾದ್ ,ಎಲ್. ಆರ್. ಅನಿತಾರಾಜ್ ಹಾಗೂ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು



**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಬೆಂಗಳೂರು ಕೇಂದ್ರ ಕಛೇರಿ, ಬೈರತಿ ಶಾಖೆ ಮತ್ತು ವರ್ತೂರು ಶಾಖೆಯಲ್ಲಿ ದಿನಾಂಕ 01.01.2022 ರಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀಯುತ.ಎಂ.ಮುನಿರೆಡ್ಡಿ ರವರು ಮತ್ತು ನಿರ್ದೇಶಕರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕರಿಯ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



**ಉಡುಪಿ :** ಕರಾವಳಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.ಶಿರೂರು ಇದರ ವತಿಯಿಂದ ಸರಕಾರಿ ಪ್ರಥಮ ದರ್ಜೆ ಕಾಲೇಜು ಬೈಂದೂರಿನ ವಿದ್ಯಾರ್ಥಿಗಳಿಗೆ ಸೌಹಾರ್ದ ಸಹಕಾರಿಯ ರೂಪುರೇಷೆ ಮತ್ತು ವ್ಯವಹಾರದ ಕುರಿತು ಮಾಹಿತಿ ಕಾರ್ಯಾಗಾರ ನಡೆಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಸತೀಶ್ ಎಂ. ಮತ್ತು ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಆಚಾರ್ಯ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕ ಡಾ.ಅಶ್ವಥ್ ದೇವರಾಯ ನಾಯ್ಕ್, ಸಹಕಾರಿಯ ಸಿಬ್ಬಂದಿಗಳಾದ ನಾಗಯ್ಯ ಬಿಲ್ಲವ, ಕಾರ್ತಿಕ್,ಶಿಲ್ಪಾ ಎಂ.,ಧನಲಕ್ಷ್ಮೀ ಉಪಸ್ಥಿತರಿದ್ದರು.

**ತುಮಕೂರು :** ದಿನಾಂಕ 01.01.2022 ರಂದು ತುಮಕೂರು ಜಿಲ್ಲೆಯ ಉಪನಿಬಂಧಕರ ಕಚೇರಿ, ಸಹಾಯಕ ನಿಬಂಧಕರ ಕಚೇರಿ ಹಾಗೂ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರ ಕಚೇರಿಗೆ ಜಿಲ್ಲಾ ಸಂಯೋಜ–ಕರಾದ ಶ್ರೀ ಉಮೇಶ್ ಎ.ಎಸ್ ರವರು ಭೇಟಿ ನೀಡಿ ನೂತನ ವರ್ಷದ ಶುಭಾಶಯಗಳನ್ನು ಕೋರಿದರು, ಇದೇ ಸಂದರ್ಭದಲ್ಲಿ 2022ನೇ ಸಾಲಿನ ಸಂಯುಕ್ತ ಸಹಕಾರಿಯ ನೂತನ ಕ್ಯಾಲೆಂಡರ್‌ಗಳನ್ನು ವಿತರಿಸಿದರು.



**ಬೆಂಗಳೂರು :** ದಿನಾಂಕ 01.01.2022 ರಂದು ಸಂಘಮಿತ್ರ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಜಿ.ಬಸಪ್ಪ ರವರು ನೇರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಮಂಡ್ಯ :** ಸ್ವಾಮಿ ವಿವೇಕಾನಂದರ ಜಯಂತಿಯನ್ನು ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ, ಮದ್ದೂರು ತಾಲ್ಲೂಕು ಕಛೇರಿಯಲ್ಲಿ ಸಹಕಾರಿಯ ಅಧ್ಯಕ್ಷರ ನೇತೃತ್ವದಲ್ಲಿ ಆಚರಿಸಲಾಯಿತು.



**ಹಾಸನ :** ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಜಯಂತಿಯ ಅಂಗವಾಗಿ ಹಾಸನ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಂಯೋಜಕರು, ಸಹಕಾರಿಯ ಸಿಇಒರಾದ ಶ್ರೀ ದೇವರಾಜು ರವರು ಹಾಗೂ ಸಿಬ್ಬಂದಿ ಶ್ರೀ ರಾಜು ಉಪಸ್ಥಿತರಿದ್ದರು.



**ಕೊಪ್ಪಳ :** ಶ್ರೀ ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ಜಿ ॥ ಕೊಪ್ಪಳ ಸಹಕಾರಿಯ ಸನ್ 2020–21 ಸಾಲಿನ 9ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ದಿನಾಂಕ 28–11–2021 ರವಿವಾರ ಬೆಳ್ಳಗೆ 10:30 ಗಂಟೆಗೆ ಸಹಕಾರಿಯ ಕಟ್ಟಡದ "ಸೌಭಾಗ್ಯಲಕ್ಷ್ಮೀ ಸಂಕೀರ್ಣ" ದಲ್ಲಿ ನೆರವೇರಿಸಲಾಯಿತು. ಮೊದಲಿಗೆ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಸುಂಕದರವರು ಹೃತಪೂರ್ವಕವಾಗಿ ಸ್ವಾಗತಿಸಿದರು. ನಂತರ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಪ್ರಾಣೇಶರಾವ.ಎಲ್.ದೇಸಾಯಿ ಸುಧೀರ್ಘವಾಗಿ ವಾರ್ಷಿಕ ವರದಿಯನ್ನು ಮಂಡಿಸಿ ವಿಷಯ ಸೂಚಿಗನುಗುಣವಾಗಿ ವಿಷಯ ಪ್ರಸ್ತಾಪಿಸಿ ಸದ್ಯಸರಿಂದ ಅನುಮೋದನೆಯನ್ನು ಪಡೆಯಲಾಯಿತು. ಕೊನೆಯದಾಗಿ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶಿಲ್ಪಾ.ಸಿ.ತಾಲೇಡಾ ರವರು ಸಭೆಯನ್ನು ಯಶ್ವಸಿಗೊಳಿಸಿದ ಎಲ್ಲಾ ಸದಸ್ಯರಿಗೂ, ಸಿಬ್ಬಂದಿಗಳಿಗೂ ಮತ್ತು ಪಿಗ್ಮಿ ಸಂಗ್ರಹಾಕರರಿಗೂ ವಂದಿಸಿದರು.



**ರಾಯಚೂರು :** ಅಮೃತ ಶ್ರೀ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 73ನೇ ಗಣರಾಜ್ಯೋತ್ಸವನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಸತ್ಯನಾರಾಯಣ ಗಾಣಧಾಳ್ ರವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಎನ್.ಜಿ.ರವೀಂದ್ರ ಹಾಗೂ ನಿರ್ದೇಶಕರಾದ ಶ್ರೀ ಎನ್.ಜಿ.ರಂಗನಾಥ್, ಶ್ರೀಮತಿ ಅಮೃತಬಾಯಿ, ಶ್ರೀಮತಿ ಶಿರಿಶಾ ಹಾಗೂ ಮುಖ್ಯಕಾರ್ಯನಿರ್ವಾಹಕರು ಮತ್ತು ಸಹಕಾರಿಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬಾಗಲಕೋಟ :** ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಜಮಖಂಡಿ. ಈ ಸಹಕಾರಿಯ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯ ಚೆಕ್ ಅನ್ನು ಸಂಯುಕ್ತ ಸಹಕಾರಿಯ ಪರವಾಗಿ ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ :** ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಕಛೇರಿಯಲ್ಲಿ 73ನೇ ಗಣರಾಜೋತ್ಸವದ ಆಚರಣೆ. ಸಹಕಾರಿ ಅಧ್ಯಕ್ಷರು ಶ್ರೀ ಸಿದ್ದಲಿಂಗಯ್ಯ, ಆಡಳಿತ ಮಂಡಳಿ ಸದಸ್ಯರು, ಸಿಇಓ ಶ್ರೀಮತಿ ಪೂರ್ಣಿಮಾ ಹಾಜರಿದ್ದರು.



**ಬಾಗಲಕೋಟ :** ದಿ ಶ್ರೀ ಸಿದ್ದು ನ್ಯಾಮಾಗೌಡ ಸೌಹಾರ್ದ ಸಹಕಾರಿ ನಿ., ಜಮಖಂಡಿ ಸಹಕಾರಿಯ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯ ಚೆಕ್ ಅನ್ನು ಸಂಯುಕ್ತ ಸಹಕಾರಿಯ ಪರವಾಗಿ ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ :** ಎಸ್.ಡಿ ಮಾಸ್ತಮ್ಮ ಸೌಹಾರ್ದ ಸಹಕಾರಿ ನಿ., ಮದ್ದೂರು ಕಛೇರಿಯಲ್ಲಿ 73ನೇ ಗಣರಾಜೋತ್ಸವದ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸ್ವಾಮಿ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಿಇಓ ಶ್ರೀಮತಿ ಲಕ್ಷ್ಮೀ ಹಾಜರಿದ್ದರು.



**ಮಂಡ್ಯ :** ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಮತ್ತು ಸಹಕಾರ ಭಾರತಿ, ಮಂಡ್ಯ ಇದರ ಜಿಲ್ಲಾ ಅಧ್ಯಕ್ಷರಾದ ಶ್ರೀ ಸಿ.ಪಿ ಉಮೇಶ್ ರವರು ಸಹಕಾರ ಭಾರತಿ ಇದರ ನೂತನ ಸದಸ್ಯತ್ವದ ಅಭಿಯಾನದ ಚಾಲನೆಯನ್ನು ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ, ಮದ್ದೂರು ತಾಲ್ಲೂಕು ಕಛೇರಿಯಲ್ಲಿ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಶ್ರೀ ಸಿದ್ದಲಿಂಗಯ್ಯ ರವರು, ಅಧ್ಯಕ್ಷರು, ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಶ್ರೀ ಬಿ.ಟಿ ಗುರುರಾಜ್ ರವರು, ಅಧ್ಯಕ್ಷರು, ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಮತ್ತು ಸ್ಥಳೀಯ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ಹಾಜರಿದ್ದರು.




**ಮಂಡ್ಯ :** ದಿನಾಂಕ 01.02.2022ರಂದು ಮಡಿವಾಳ ಮಾಚಿದೇವರ" ಜಯಂತಿ ಅಂಗವಾಗಿ ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಕಛೇರಿಯಲ್ಲಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಟಿ ಗುರುರಾಜ್ ರವರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಶ್ರೀಮತಿ ಮಂಜು ಶ್ರೀ ರವರು ಹಾಜರಿದ್ದರು.



**ಮಂಡ್ಯ :** ಕರ್ನಾಟಕ ಗ್ರೀನ್ ಸೌಹಾರ್ದ ಕೋ-ಆಪ್ ಸೊಸೈಟಿ ಲಿ., ಪಾಂಡವಪುರ ಇದರ ಕಛೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ಶುಭಾಷಯ ಕೋರಿದರು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯ ಪ್ರವರ್ತಕರಾದ ಶ್ರೀ ರಿಯಾಜ್ ಪಾಷಾ ರವರು, ಶ್ರೀ ಸಾರಂಗಿ ನಾಗರಾಜು ರವರು, ಅಧ್ಯಕ್ಷರು, ಕೆ.ಆರ್ ಪೇಟೆ ತಾಲ್ಲೂಕು ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ನಿ., ಮತ್ತು ಸಹಕಾರಿಯ ಪ್ರವರ್ತಕರು ಹಾಜರಿದ್ದರು.



**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರಲ್ಲಿ ಕಿತ್ತೂರ ಚನ್ನಮ್ಮಾನ ಪುಣ್ಯಸ್ಮರಣೂತ್ಸವವನ್ನು ಸಹಕಾರಿಯಲ್ಲಿ ಆಚರಿಸಲಾಯಿತು. ಪಂಚಮಸಾಲಿ ಸಮಾಜದ ಬಾಂದವರಲ್ಲಾ ಚನ್ನಮ್ಮಾಜಿಯ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಚನ್ನಮ್ಮಾಜಿಯ ಕಾರ್ಯ ಸಾಹಸದ ಬಗ್ಗೆ ಗಣ್ಯ ವರ್ತಕರು ಯುವಕರು ಸಮಾಜದ ಮುಖಂಡರು ಆದ ಮಹೇಶ ಎಸ್ ಮಾತನಾಡಿದರು. ಬ್ರಿಟೀಷರ ವಿರುದ್ಧ ಜಯ ಸಾಧಿಸಿದ ಬಗ್ಗೆ ವಿವರವಾಗಿ ಪ್ರತಿಯೊಬ್ಬರು ಸುಮಾರು ಘಂಟೆ ಮಾತನಾಡಿದರು ಈ ಪುಣ್ಯಸ್ಮರಣೂತ್ಸವ ಕಾಲಕ್ಕೆ ಸಹಕಾರಿಯ ಮ್ಯಾನೇಕರಾದ ಶ್ರೀ ಸಿ ವ್ಹಿ ಪಾಟೀಲ ಸಹಾಯಕರಾದ ಪರಪ್ಪ ವ್ಹಿ ಬಳಿಗೇರ ಸಹಕಾರಿಯ ನಿರ್ದೇಶಕರಾದ ಶ್ರೀ ಸಿದ್ದನಗೌಡ ಪಿ ಪಾಟೀಲ ಹಾಗೂ ಪಿಗ್ಮಿಸಂಗ್ರಹಕಾರರಾದ ಶ್ರೀ ರಮೇಶ ಪಿ ಅಣ್ಣಿಗೇರಿ ಮತ್ತು ಆಯ್ ಜೆ ಶಿರೂರ ಇವರುಗಳು ಉಪಸ್ಥಿತರಿದ್ದರು.

# “ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಮತ್ತು ಚಟುವಟಿಕೆಗಳ ಬಗ್ಗೆ ವಿಸ್ತೃತ ಅರಿವು ಹಾಗೂ ಪ್ರಚಾರ ಅಗತ್ಯ”

(ಶ್ರೀ ಅನೂಪ ದೇಶಪಾಂಡೆ, ಮಾಜಿ ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ ಇವರು “ತಿರುವು ದಾರಿಯಲ್ಲಿ ಸೌಹಾರ್ದ ಸಹಕಾರಿ” ಎಂಬ ಲೇಖನ ಪತ್ರಿಕೆಯಲ್ಲಿ ಪ್ರಕಟಣೆಯ ಹಿನ್ನಲೆಯಲ್ಲಿ ಶ್ರೀ ಸಿ.ಎಸ್ ಪರಶಿವಮೂರ್ತಿ, ಮಾನ್ಯ ಅಪರ ನಿಬಂಧಕರು (ನಿ) ಇವರ ವಿಮಾರ್ಶಾತ್ಮಕಾ ಲೇಖನವನ್ನು ಓದುಗರ ಮಾಹಿತಿಗಾಗಿ ಪ್ರಕಟಿಸಿದೆ.)



– ಶ್ರೀ ಸಿ.ಎಸ್ ಪರಶಿವಮೂರ್ತಿ

ಈ ಲೇಖನದ ಮುಖ್ಯ ಉದ್ದೇಶ, ಸಂಯುಕ್ತ ಸಹಕಾರಿಯ ಪ್ರಥಮ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಅನೂಪ್‌ದೇಶಪಾಂಡೆ ಅವರು ಪತ್ರಿಕೆಗೆ ಬರೆದ “ತಿರುವು ದಾರಿಯಲ್ಲಿ ಸೌಹಾರ್ದ ಸಹಕಾರಿ” ಎಂಬ ಲೇಖನ. ಆ ಲೇಖನದಲ್ಲಿ ಅವರು ಪ್ರಮುಖವಾಗಿ ಪ್ರಸ್ತಾಪಿಸಿರುವುದು, ಸೌಹಾರ್ದ ಸಹಕಾರಿಗಳ ಕಾಯಿದೆ ಸಮರ್ಪಕ ಬಳಸಿಕೊಳ್ಳುತ್ತಿಲ್ಲ ಮತ್ತು ಸಂಯುಕ್ತ ಸಹಕಾರಿ ತನ್ನ ನಿಯಂತ್ರಣ ಜವಾಬ್ದಾರಿ ನಿರ್ವಹಿಸುತ್ತಿಲ್ಲ ಮತ್ತು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಿಗೆ ವಿಚಾರಣೆ ಮಾಡುವ ಅಧಿಕಾರ ನೀಡಿದ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸಿ, ತಮ್ಮ ಲೇಖನ ಮುಕ್ತಾಯಗೊಳಿಸುವಾಗ ಎರಡೂ ಕಾಯಿದೆ ಅವಶ್ಯಕವಿಲ್ಲ ಮತ್ತು ಈಗ ಎರಡು ಕಾಯಿದೆಗಳಲ್ಲಿ ವ್ಯತ್ಯಾಸವಿಲ್ಲ ಎಂಬ ಕಾರಣಕ್ಕೆ ವಿಲೀನಗೊಳಿಸಲು ಅಭಿಪ್ರಾಯಕ್ಕೆ ಬಂದಿದ್ದಾರೆ.

ಆದರೆ ಅವರು ಪ್ರಥಮ ವ್ಯವಸ್ಥಾಪಕ ನಿರ್ದೇಶಕರಾಗಿದ್ದು ಇಂತಹ ಅಭಿಪ್ರಾಯ ವ್ಯಕ್ತ ಪಡಿಸಬಾರದಿತ್ತು ಮತ್ತು ಈಗ ಅವರು ಉಚ್ಚನ್ಯಾಯಾಲಯದ ನ್ಯಾಯವಾದಿಗಳಾಗಿದ್ದು. ಕಾನೂನಿನ ಬಗ್ಗೆ ಅರಿವು ಇದೆ. ಯಾವುದೇ ಕಾಯಿದೆ ರೂಪಿಸುವುದು, ಅದರಡಿ ಬರುವ ಸಂಘ ಸಂಸ್ಥೆಗಳ ಅಭಿವೃದ್ಧಿ ದೃಷ್ಟಿಯಿಂದ ಎಂಬುದನ್ನು ಮರೆಯಬಾರದು. ಹೊಸ ಕಾಯಿದೆ ರೂಪಿಸುವಾಗ, ಫಲಾನುಭವಿ ಸಹಕಾರಿಗಳಲ್ಲಿ ನಡೆಯಬಹುದಾದ ನ್ಯೂನತೆ ಬಗ್ಗೆ ವಿಮರ್ಷೆ ಮಾಡುವುದಿಲ್ಲ. ಅಂತಹ ಪ್ರಸಂಗ ಬಂದಾಗ, ಕಾಯಿದೆಗೆ/ನಿಯಮಕ್ಕೆ ತಿದ್ದುಪಡಿ ಮಾಡುವ ಅಧಿಕಾರ ಸರ್ಕಾರ ಯಾವಾಗಲೂ ತಯಾರಿರುತ್ತದೆ. ಆದರೆ ಜಾರಿ ಮಾಡುವ ಪ್ರಾಧಿಕಾರಗಳು ತಮ್ಮ ಅಧಿಕಾರ/ಜವಾಬ್ದಾರಿ/ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡಿದಾಗ ಮಾತ್ರ ಅದರಿಂದ ಫಲಾಪೇಕ್ಷೆ ಮಾಡಬೇಕು. ಸೌಹಾರ್ದ ಸಹಕಾರ ಕಾಯಿದೆ ರೂಪಿಸಿ 20 ವರ್ಷಗಳಾಗಿದೆ. ತೊಡಕುಗಳಿರುವುದು ಸಹಜ. ಆದರೆ ಆ ಕಾರಣದಿಂದ ಕಾಯಿದೆ ರೂಪಿಸಿದ್ದು ಸರಿಯಿಲ್ಲ ಎಂಬ ಭಾವನೆ ಬೆಳೆಸಿಕೊಳ್ಳತಕ್ಕದ್ದಲ್ಲ. ಈಗಲೂ 97ನೇ ಸಂವಿಧಾನ ತಿದ್ದುಪಡಿಯಲ್ಲಿ ರಾಜ್ಯ ಮಟ್ಟದಲ್ಲಿ ಏಕ ರೂಪ ಸಹಕಾರಿ ಕಾಯಿದೆ ತರುವ ಪ್ರಯತ್ನ ನಡೆದಿದ್ದರೂ, ಈ ಸಂವಿಧಾನ ತಿದ್ದುಪಡಿಗೆ ಕರ್ನಾಟಕ ಸೌಹಾರ್ದ ಕಾಯಿದೆಯೇ ಒಂದು ಮೂಲ ಮತ್ತು ರಾಜ್ಯ ಮಟ್ಟದಲ್ಲಿ ಈ ಕಾಯಿದೆ ಚರ್ಚೆಯಾಗಿ ಎಲ್ಲಾ ಸಹಕಾರಿಗಳ ಗಮನ ಸೆಳೆದಿರುವುದನ್ನು ಅಲ್ಲಿಗಳೆಯಲಾಗದು. ಇದಕ್ಕೆ ಪೂರಕವಾಗಿ ಸೌಹಾರ್ದ ಕಾಯಿದೆ ರೂಪಿಸಿದ ಹಿನ್ನೆಲೆ, ಅವಶ್ಯಕತೆ ಮತ್ತು ಉಪಯುಕ್ತತೆ ಬಗ್ಗೆ ವಿಮರ್ಷಿಸುವ ಪ್ರಯತ್ನ ಮಾಡುತ್ತೇನೆ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ರಚನೆಯಾದದ್ದು ಕೇಂದ್ರ ಸರ್ಕಾರ ಯೋಜನಾ ಆಯೋಗದ ಮುಖಾಂತರ ರಾಷ್ಟ್ರಮಟ್ಟದಲ್ಲಿ ಒಂದು ಉದಾರೀಕೃತ ಸಹಕಾರ ಕಾಯಿದೆ ರೂಪಿಸಿ, ಅಳವಡಿಸಿಕೊಳ್ಳಲು 1991 ರಲ್ಲಿ ರಾಜ್ಯಗಳಿಗೆ ರವಾನಿಸಿದ ಬ್ರಹ್ಮಪ್ರಕಾಶ್ ಸಮಿತಿ ಮಾದರಿ ಕಾಯಿದೆ. “ಸಹಕಾರ” ಎಂಬ ವಿಷಯ ರಾಜ್ಯ ಪಟ್ಟಿಯಲ್ಲಿರುವುದರಿಂದ ಕೇಂದ್ರ ಸರ್ಕಾರ ಈ ಮಾದರಿ ಕಾಯಿದೆಯನ್ನು ರಾಜ್ಯಗಳಿಗೆ ರವಾನಿಸಿತು. ಆದರೆ ಬಹಳಷ್ಟು ರಾಜ್ಯಗಳು ಈ ಮಾದರೀ ಸಹಕಾರ ಕಾಯಿದೆ ಅಳವಡಿಸಿಕೊಳ್ಳಲಿಲ್ಲ. ಅಳವಡಿಸಿಕೊಂಡ ಸುಮಾರು 9 ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಬೇರೆ ರಾಜ್ಯಗಳ ಅಳವಡಿಸಿಕೊಂಡ ನೀತಿ ಮತ್ತು ಕರ್ನಾಟಕ ಅಳವಡಿಸಿಕೊಂಡ ನೀತಿಗೆ ಬಹಳಷ್ಟು ವ್ಯತ್ಯಾಸಗಳಿವೆ.

ಇತ್ತೀಚೆಗೆ ಸೌಹಾರ್ದ ಕಾಯಿದೆ ರಚನೆಯಲ್ಲಿ ರೂಪಿಸಿದ ಸಂಯುಕ್ತ ಸಹಕಾರಿ ಎಂಬ, ಶಾಸನದಲ್ಲಿಯೇ ಸೃಷ್ಟಿಯಾದ ಒಂದು ಪ್ರಜಾಪ್ರಭುತ್ವದಡಿ ರಚನೆಯಾದ ಚುನಾಯಿತ ಮಂಡಳಿಯ ಪ್ರಥಮ ವೃತ್ತಿಪರ ವ್ಯವಸ್ಥಾಪಕ ನಿರ್ದೇಶಕರಾಗಿದ್ದವರು. (ಶ್ರೀ ಅನೂಪ್‌ದೇಶ್‌ಪಾಂಡೆ) ಈ ಕಾಯಿದೆ ಮೂಲ ಉದ್ದೇಶವನ್ನು ಜಾರಿ ಮಾಡುವ ಜವಾಬ್ದಾರಿ ಇದ್ದಂತಹ ವ್ಯಕ್ತಿ ಯಾವುದೇ ಹೊಸ ವ್ಯವಸ್ಥೆಯಲ್ಲಿ ಪ್ರಾರಂಭದಲ್ಲಿ ಕೆಲಸ ನಿರ್ವಹಿಸಿದ ಮಂಡಳಿ ಮತ್ತು ಅಧಿಕಾರಿಗಳ ಜವಾಬ್ದಾರಿಯುತವಾಗಿ, ನಿಷ್ಠೆಯಿಂದ ಕಾಯಿದೆ ಉದ್ದೇಶಗಳನ್ನು ಜಾರಿ ಮಾಡಿದಾಗ ಮಾತ್ರ ಅದರ ಸದುಪಯೋಗ ಆಗುತ್ತದೆ. ರಾಷ್ಟ್ರದಲ್ಲಿ ಪ್ರಥಮ ಬಾರಿ ಸಹಕಾರಿ ಕಾಯಿದೆಯಲ್ಲಿ ಒಂದು ಚುನಾಯಿತ ಮಂಡಳಿ ಸೃಷ್ಟಿಸಿ, ನಿಬಂಧಕರ ಅಧಿಕಾರವನ್ನು ವರ್ಗಾಯಿಸಿದಾಗ ಅದಕ್ಕೆ ಸ್ಪಂದಿಸಬೇಕಾದ ಬಹುಮುಖ್ಯವಾದ ವ್ಯಕ್ತಿ ಎಂದರೆ, ಆ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ಹಿರಿಯ ಅಧಿಕಾರಿಗಳು. ಅದರಲ್ಲೂ ಪ್ರಮುಖವಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು. ಆ ಕೆಲಸವನ್ನು ಶ್ರೀ ಅನೂಪ್‌ದೇಶ್‌ಪಾಂಡೆಯವರು ನಿರ್ವಹಿಸಿದ್ದರೆ. ಈ ಕಾಯಿದೆ ಇನ್ನು ಶ್ರೇಷ್ಠ ಮಟ್ಟಕ್ಕೆ ಮುಟ್ಟುತ್ತಿತ್ತು. ಆದರೆ, ನುರಿತ ಸಿಬ್ಬಂದಿ ಇಲ್ಲದೆ. ಎಲ್ಲಾ ಹೊಸ ವ್ಯಕ್ತಿಗಳನ್ನು ಅದರಲ್ಲೂ ಪ್ರಮುಖವಾಗಿ ಸಂಘ ಪರಿವಾರದ ಸಂಪರ್ಕದಲ್ಲಿದ ವ್ಯಕ್ತಿಗಳೇ ಆಕ್ರಮಿಸಿದ್ದರಿಂದ ವೃತ್ತಿಪರ ಮಾರ್ಗದರ್ಶನವನ್ನು ಸಂಯುಕ್ತ ಸಹಕಾರಿ ಮಂಡಳಿ ಸದಸ್ಯರಿಗೆ ನೀಡದೇ ಸ್ವಲ್ಪ ಮಟ್ಟಿನ ಸ್ವೇಚ್ಛತೆಗೆ ಅವಕಾಶ ನೀಡಿದ್ದು ಈ ಕಾಯಿದೆ ಜಾರಿಯಲ್ಲಿ ತೊಡಕಾಗಿದೆ. ಯಾವುದೇ ವ್ಯವಸ್ಥೆಯಲ್ಲಿ, ಹುಟ್ಟಿ ಹಾಕಿದ ಹೊಸ ಸಂಸ್ಥೆ ನಿರ್ವಹಣೆ ಮಾಡುವಾಗ, ಪ್ರಾರಂಭದಲ್ಲಿ

ಸೇರ್ಪಡೆಯಾದ ನೌಕರಶಾಹಿ ಜವಾಬ್ದಾರಿಯುತ ಮತ್ತು ಪಾರದರ್ಶಕ ಮಾರ್ಗದರ್ಶನ ನೀಡಿ, ಸಂಸ್ಥೆಯನ್ನು ಬೆಳೆಸಲು ಸಹಕಾರಿಯಾಗಬೇಕು. ಹಲವಾರು ಸಹಕಾರ ಸಂಸ್ಥೆಗಳನ್ನು (1959ರ ಕಾಯಿದೆಯಡಿ) ಸೃಷ್ಟಿ ಮಾಡಿದಾಗ, ಆ ಸಂಸ್ಥೆಗೆ ಸೇರಿದ ಪ್ರಥಮ ಕಾರ್ಯಾಂಗದ ಮುಖ್ಯಸ್ಥ ಮತ್ತು ಆ ಸಂಸ್ಥೆಗೆ ಆಯ್ಕೆಯಾದ ಅಧ್ಯಕ್ಷರು, ತಮ್ಮ ಸಮುದಾಯದ ಆಸ್ತಿಯಂತೆ ರೂಪಿಸಿದ್ದಾರೆ. ನೌಕರರ ನೇಮಕಾತಿ ಮಾಡುವಾಗ (ಮೀಸಲಾತಿ ಇಲ್ಲದ ಅವಧಿಯಲ್ಲಿ) ಒಂದೇ ಸಮುದಾಯದ ವ್ಯಕ್ತಿಗಳೇ ಆಯ್ಕೆಯಾದರೆ ಆ ಸಂಸ್ಥೆಯಲ್ಲಿ ಪಾರದರ್ಶಕತೆ/ ವೃತ್ತಿಪರತೆ, ಅಪೇಕ್ಷೆ ಪಡುವುದು ಸೂಕ್ತವಲ್ಲ. ಆ ರೀತಿ ರೂಪಿತವಾದ ಸಂಸ್ಥೆಗಳು 30–40 ವರ್ಷ ಅಂತಹ ಸಿಬ್ಬಂದಿ ಮುಖಂಡತ್ವದಲ್ಲಿಯೇ ಅವರಿಗೆ ತಿಳಿದಂತೆಯೇ ಸಂಸ್ಥೆ ನಡೆಸುತ್ತಾರೆ. ಚುನಾಯಿತ ಪ್ರತಿನಿಧಿಗಳು ಅವರ ಮುಷ್ಟಿಯಿಂದ ಮುಕ್ತನಾಗುವುದೇ ಇಲ್ಲ. ಅಂದರೆ ಅವರ ಘಟ್ಟಂಗಿತನದಿಂದ, ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಾರೆ ಮತ್ತು ಅವರಿಗೆ ಸಂಸ್ಥೆಯನ್ನು ಬೆಳೆಸಬೇಕೆಂಬ ಭಾವನೆ ಇರುವುದೇ ಇಲ್ಲ. ಮೈಸೂರು ಜಿಲ್ಲೆಯಲ್ಲಿ ಎರಡು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು, ಅಭಿವೃದ್ಧಿ ಇಲಾಖೆಯಲ್ಲಿನ ಒಬ್ಬ ಅಧಿಕಾರಿ ಪ್ರಥಮ ವ್ಯವಸ್ಥಾಪಕ ನಿರ್ದೇಶಕನಾಗಿ ಸರ್ಕಾರ ನೇಮಿಸಿತು. (ವಿವಿಧ ವರ್ಷಗಳಲ್ಲಿ) ಆ ಅಧಿಕಾರಿ 400–500 ಕೆಲಸಗಾರರಲ್ಲಿ 350–400 ನೌಕರು ಒಂದೇ ಸಮುದಾಯಕ್ಕೆ ಸೇರಿದ ವ್ಯಕ್ತಿಗಳಿದ್ದರು. ಕೆಲಸದಲ್ಲಿ ಆಸಕ್ತಿ ಇಲ್ಲದೇ ಇದ್ದರೂ, ನೇಮಕಾವಾಯಿತು. ಆ ಎರಡೂ ಸಹಕಾರಿ ಸಕ್ಕರೆ ಕಾರ್ಖಾನೆಗಳು ಈಗ ಮುಚ್ಚಿವೆ. ಇದು ಒಂದು ಸಣ್ಣ ಉದಾಹರಣೆ. ರಾಜ್ಯ ಮಟ್ಟದ ಅಪೆಕ್ಸ್ ಸಂಸ್ಥೆಗಳು ಇದೇ ನಡೆದಿತ್ತು/ನಡೆಯುತ್ತಿದೆ.

ಈ ಮೇಲ್ಕಂಡ ಉದಾಹರಣೆ ಕೊಟ್ಟ ಉದ್ದೇಶ, ಪ್ರಾರಂಭಿಕ ವ್ಯವಸ್ಥೆಯಲ್ಲಿ ನೇಮಕವಾದ ಅಧಿಕಾರಿಗಳ ನಿಸ್ವಾರ್ಥ ದೂರದೃಷ್ಟಿಯ, ನಿಷ್ಠೆಯ, ಪಾರದರ್ಶಕ ಸಾಮಾಜಿಕ ಕಳಕಳಿ ಇರುವ ವ್ಯಕ್ತಿ ಇದ್ದಾಗ ಮಾತ್ರ ಆ ಸಂಸ್ಥೆ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಅಂದರೆ, ಸಂಯುಕ್ತ ಸಹಕಾರಿ ರಚನೆಯಾದಾಗ ಪ್ರಾರಂಭಿಕ ಹಂತದಲ್ಲಿದ ಚುನಾಯಿತ/ನೇಮಕವಾದ ಅಧಿಕಾರಿ ವರ್ಗ, ನಿಷ್ಠೂರವಾಗಿ ಕೆಲಸ ನಿರ್ವಹಿಸಿದ್ದರೆ, ಅಂದರೆ, ಒತ್ತಡದಿಂದ ತಪ್ಪು ಮಾರ್ಗದರ್ಶನ ನೀಡಿ, ಈ ಹೊಸ ವ್ಯವಸ್ಥೆ ಸನ್ಮಾರ್ಗದಲ್ಲಿ ನಡೆಸಲು ತೊಡಕು ಬಂದಿದೆ. ಸಂಯುಕ್ತ ಸಹಕಾರಿ ಎಂಬ ಚುನಾಯಿತ ಮಂಡಳಿಗೆ ಆಯ್ಕೆಯಾದ ನಿರ್ದೇಶಕರು, 1959ರ ಕಾಯಿದೆಯೂ ಮಾದರಿಯಲ್ಲೇ ಕಾರ್ಯನಿರ್ವಹಿಸಲು ಪ್ರಾರಂಭಿಸಿದರು. ಅಂತಹ ಮಂಡಳಿಗೆ ಮಾರ್ಗದರ್ಶನ ನೀಡಲು ಅನುಭವಿ ಅಧಿಕಾರಿಗಳು ಇರಲಿಲ್ಲ ಮತ್ತು ಆ ಮಂಡಳಿ ಸದಸ್ಯರು ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಾವಲಂಬಿ ಹಾಗೂ ಸ್ವಯಂ ನಿಯಂತ್ರಣದ ಅರ್ಥವನ್ನೇ ಗ್ರಹಿಸದೆ, ಸ್ವೇಚ್ಛತೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದರಿಂದಲೇ ಈ ಕಾಯಿದೆ ಪ್ರಾರಂಭಿಕ ಹಂತದಲ್ಲಿ ಎಡವಿದಂತೆ ಕಾಣುತ್ತಿದೆ. ಆದರೆ ಅದಕ್ಕೆ ಸೌಹಾರ್ದ ಕಾಯಿದೆಯ ತಪ್ಪು ಎಂದು ಹೇಳಲಾಗದು. ಏಕೆಂದರೆ ಕಾಯಿದೆಯಲ್ಲಿ ರೂಪಿಸಿದ ಸಹಕಾರಿ ನೀತಿ, ರಾಜ್ಯ ಸರ್ಕಾರ ಸೌಹಾರ್ದ ಕಾಯಿದೆ ರಚನೆ ಮಾಡುವ ಪೂರ್ವದಲ್ಲಿ, ಒಂದು ಸಮಿತಿಯನ್ನು ರಚಿಸಿ, ಅದಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿತ್ತು, ಈ ಸಮಿತಿ ಸಲ್ಲಿಸಿದ ವರದಿಯನ್ನು, ರಾಜ್ಯದ ಯೋಜನ ಆಯೋಗದ ಆಗಿನ ಮುಖ್ಯಸ್ಥರಾಗಿದ್ದ ಡಾ॥ ಡಿ.ಎಂ.ನಂಜುಂಡಪ್ಪನವರ ಅನುಮೋದನೆ ಯೊಂದಿಗೆ ರಾಜ್ಯ ಸರ್ಕಾರದ ಅನುಮೋದನೆ ಪಡೆದು, ಗೆಜೆಟ್‌ನಲ್ಲಿ ಪ್ರಕಟಿಸಿದ ರಾಷ್ಟ್ರದ ಪ್ರಥಮ “ಸಹಕಾರಿ ನೀತಿಯೇ” ಪ್ರಮುಖ ಕಾರಣ. ಈ ನೀತಿಯ ಎರಡು ಕಾಯಿದೆ ಇರಬೇಕೆಂದು, ಅದರಲ್ಲೂ ಉದಾರೀಕೃತ ಕಾಯಿದೆಗೆ ಹೆಚ್ಚು ಪ್ರಾಶಸ್ತ್ಯ ನೀಡಬೇಕೆಂದು ಅನುಮೋದಿಸಲಾಯಿತು. ಇದಕ್ಕೆ ಕೇಂದ್ರ ಸರ್ಕಾರದ ಮಾದರಿ ಕಾಯಿದೆಯೊಂದೇ ಕಾರಣವಲ್ಲ. ಇದಕ್ಕೆ ಪೂರ್ವದಲ್ಲಿ ಹಲವಾರು ಸಮಿತಿ ವರದಿಗಳು, ಸಹಕಾರಿ ಸಂಸ್ಥೆಗಳನ್ನು ನಿಬಂಧಕರ/ಸರ್ಕಾರದ ನಿಯಂತ್ರಣದಿಂದ ಬಿಡುಗಡೆ ಮಾಡಬೇಕೆಂಬ ಕೂಗಿಗೆ ಪೂರಕವಾಗಿ, ಈ “ಸಹಕಾರ ನೀತಿ” ರೂಪಿಸಿ ಅದರಂತೆ ಕರ್ನಾಟಕ ಸೌಹಾರ್ದ ಕಾಯಿದೆ ರಚಿಸಲಾಗಿದೆ. ಜಾರಿ ಮಾಡುವಾಗ ತೊಡಕಾದರೆ ಅದಕ್ಕೆ ಸರ್ಕಾರ ಪರಿಹಾರ ನೀಡುತ್ತದೆ. ಇದಕ್ಕೆ ಪೂರಕವಾಗಿ ಒಂದು ಉದಾಹರಣೆ ನೀಡ ಬಯಸುತ್ತೇನೆ. 1979–80 ರಲ್ಲಿ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ, ರಾಜ್ಯದ ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ಒಂದು ಕಾರ್ಯಾಗಾರ ನಡೆಸಿತು. ಅದರಲ್ಲಿ ಪ್ರಮುಖ ಭಾಷಣಕಾರರಾಗಿ ಆಗಿನ ಯೋಜನಾ ಇಲಾಖೆ ಕಾರ್ಯದರ್ಶಿಯಾಗಿದ್ದ ಡಾ॥ ಡಿ. ಎಂ.ನಂಜುಂಡಪ್ಪ ನವರು ಮಾತನಾಡಿದರು. ಅವರ ಭಾಷಣ ಮುಕ್ತಾಯವಾದ ಮೇಲೆ ಆಗಿನ ಕೋಲಾರ ಉಪವಿಭಾಗದ, ಒಬ್ಬ ಐಎಎಸ್ ಅಧಿಕಾರಿ ಕೂಲಿಗಾಗಿ ಕಾಳು ಯೋಜನೆಯನ್ನು ರಾಜಕೀಯ ವ್ಯಕ್ತಿಗಳು ಹಣ ತಿಂದು ಹಾಕಲು ರೂಪಿಸಿದ ಯೋಜನೆ ಎಂದು ಸೂಚಿಸಿದರು, ಅದಕ್ಕೆ ಡಾ॥ ನಂಜುಂಡಪ್ಪನವರು ಮಧ್ಯಪ್ರವೇಶಿಸಿ, ಸರ್ಕಾರ ಯೋಜನೆ ರೂಪಿಸುತ್ತಿದೆ. ಅದನ್ನು ಪ್ರಶ್ನೆ ಮಾಡುವ ಅಧಿಕಾರಿ ಅಧಿಕಾರಿಗಳಿಗೆ ಇಲ್ಲ, ಆ ಕೆಲಸ ಕಾರ್ಯರೂಪಕ್ಕೆ ತರುವಾಗ, ಆಗುವ ತೊಡಕುಗಳಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರುವುದಷ್ಟು ಅಧಿಕಾರಿ ಕೆಲಸ, ಹಾಗೂ ಅವನ್ನು ಪ್ರಶ್ನಿಸತಕ್ಕದ್ದಲ್ಲವೆಂದು ದೊಡ್ಡ ಮಟ್ಟದ ಚರ್ಚೆಯಾಗಿ ಆ ಅಧಿಕಾರಿ ತನ್ನ ಅನುಭವದ ಮಾತನ್ನು ಹಿಂಪಡೆದರು. ಅದೇ ನೀತಿ ಈ ಕಾಯಿದೆ ಜಾರಿಯಲ್ಲಿ ಬಂದ ತೊಡಕಿಗೂ ಅನ್ವಹಿಸುತ್ತದೆ. ಸರ್ಕಾರ ಕಾಯಿದೆ ರೂಪಿಸುವಾಗ, ಫಲಾನುಭವಿಗಳ ಅನುಕೂಲಕ್ಕಾಗಿ ರೂಪಿಸುತ್ತಿದೆವೇ ಹೊರತು ಅದರ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಕರ್ತವ್ಯ ಎಂಬುದನ್ನು ಮನದಟ್ಟು ಮಾಡಿಕೊಂಡರೆ, ಅದು ಆ ಸಂಸ್ಥೆ ಬೆಳವಣಿಗೆಗೆ ಅನುಕೂಲವಾಗುತ್ತಿದೆ.

ಈ ಮೇಲ್ಕಂಡ ಪೀಠಿಕೆಗೆ ಮತ್ತೊಂದು ಆಯಾಮದಲ್ಲಿ ವಿಮರ್ಷಿಸಬಹುದು. ಸಂವಿಧಾನಕ್ಕೆ 72 ಮತ್ತು 73ನೇ ತಿದ್ದುಪಡಿಯೂ, ಪಂಚಾಯತ್‌ರಾಜ್ ವ್ಯವಸ್ಥೆ ಮತ್ತು ಪಟ್ಟಣ ಪ್ರದೇಶದ ಆಡಳಿತ ವ್ಯವಸ್ಥೆ ಬಗ್ಗೆ ತಿದ್ದುಪಡಿ ಮಾಡಲಾಯಿತು. ಅದರಂತೆ ಗ್ರಾಮ, ತಾಲ್ಲೂಕು, ಜಿಲ್ಲಾ ಹಾಗೂ ಪಟ್ಟಣ ಪ್ರದೇಶದಲ್ಲಿ ಸ್ವಾಯತ್ತ, ಸ್ವಾತಂತ್ರ ಸಂಸ್ಥೆಗಳನ್ನು ಹುಟ್ಟು ಹಾಕಿ, ಅವರಿಗೆ ಆರ್ಥಿಕ ಮತ್ತು ರಾಜಕೀಯ ಶಕ್ತಿ ನೀಡಿದ ಮೇಲೆ, ಆ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳು ಪ್ರದರ್ಶಿಸುತ್ತಿರುವ ಸ್ವೇಚ್ಛತೆಯನ್ನು ಮಾದರಿಯನ್ನಾಗಿಸಿಕೊಂಡು ಸಹಕಾರಿ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ತಮ್ಮ ಸ್ವಚ್ಛತೆ, ಸ್ವಾರ್ಥತೆ ಪ್ರದರ್ಶಿಸಲು ಪ್ರಾರಂಭಿಸಿದ್ದಾರೆ. ಒಂದು ಗ್ರಾಮ ಪಂಚಾಯಿತಿಗೆ ವಾರ್ಷಿಕ ಸುಮಾರು ರೂ.50/– ಲಕ್ಷ ಅನುದಾನ ಪಡೆದು, ಪ್ರಗತಿ ಇಲ್ಲದೆ, ಹಣ ಲಪಟಾಯಿಸುತ್ತಿವೆ ಎಂಬ ಭಾವನೊಚನೆಯಲ್ಲಿ

ಹಾಗೆಯೂ ಸಹಕಾರಿ ಸಂಸ್ಥೆಗಳು ಇದೇ ಮಾದರಿ ತಮ್ಮ ವಶದಲ್ಲಿರುವ ಸಂಸ್ಥೆಯೂ ಉಪಯೋಗಿಸಲು ಪ್ರಾರಂಭಿಸಿವೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಬಹಳಷ್ಟು ಚುನಾಯಿತ ಪ್ರತಿನಿಧಿಗಳು ಸ್ವಾಯತ್ತತೆ ಎಂದರೆ ಸ್ವೇಚ್ಛತೆ ಎಂದೇ ಭಾವಿಸುತ್ತಾರೆ. ಇದರ ಜೊತೆಗೆ ವಿಧಾನ ಸಭೆ, ವಿಧಾನ ಪರಿಶತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಕೋಟಿಗಟ್ಟಲೆ ಹಣ ವಿನಿಯೋಗಿಸಿ, ಅದರ ಅವಧಿ ಮುಗಿಯುವ ಪೂರ್ವದಲ್ಲಿ, ಹೂಡಿದ ಹಣದ ಹತ್ತು ಇಪ್ಪತ್ತು ಪಟ್ಟು ಆಸ್ತಿಯನ್ನು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವಾಗ ಅವರು ಚುನಾವಣ ಆಯೋಗಕ್ಕೆ ಸಲ್ಲಿಸುವ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತಾರೆ. ಆ ಆಸ್ತಿ ಎಲ್ಲಿಂದ ಬಂತು ಎಂದು ಪ್ರಶ್ನಿಸುವ ಅಧಿಕಾರ ಮತದಾರರಿಗೆ ನೀಡಿಲ್ಲ. ನೀಡಿದರೂ ಅವರ ಬಾಯಿ ಮುಚ್ಚಿಸುವ ವಿಧಾನ ಚುನಾಯಿತ ಪ್ರತಿನಿಧಿಗಳಿಗೆ ತಿಳಿದಿದೆ. ಇಂತಹ ಉದಾಹರಣೆಗಳೇ ಸಹಕಾರಿ ಸಂಸ್ಥೆಯ ಮಂಡಳಿ ಸದಸ್ಯರಿಗೆ ಏಕೆ ಬರಬಾರದು? ಅಂದರೆ ಒಬ್ಬ ರಾಜಕೀಯ ವ್ಯಕ್ತಿ 5–10 ವರ್ಷಗಳಲ್ಲಿ ಕೋಟ್ಯಾದಿಪತಿಯಾದಾಗ, ಅದೇ ದಾರಿ ತುಳಿಯಲು ಸಹಕಾರಿ ಮುಖಂಡರು ಸಹಕಾರಿಯನ್ನು ಉಪಯೋಗಿಸಿಕೊಂಡು ರಾಜಕೀಯ ರಂಗ ಪ್ರವೇಶಿಸಲು ಪ್ರಯತ್ನಿಸುವ ಒಂದು ವೇದಿಕೆ ಈ ಸಹಕಾರಿ ಸಂಸ್ಥೆಗಳು, ಅಂದರೆ ಸಮಾಜದ ವಿವಿಧ ಅಂಗಗಳ ಭಾಗಿದಾರರು ವ್ಯವಸ್ಥೆಯನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸುವ ಒಂದು ದಾರಿಯೇ ಸಹಕಾರಿ ಸಂಸ್ಥೆಗಳು. ಆದರೆ, ಸಹಕಾರಿಗಳು ಅರ್ಥೈಸಿಕೊಳ್ಳದ ಒಂದು ಪ್ರಮುಖ ಅಂಶ ವೆಂದರೆ ಸಂಸ್ಥೆಯನ್ನು ಸರಿದಾರಿಯಲ್ಲಿ ಕಟ್ಟಿ – ಸದಸ್ಯರಿಗೆ ಗರಿಷ್ಠ ಸೇವೆ ನೀಡಿದಾಗ ಹೆಸರು ತನ್‌ತಾನೆ ಬರುತ್ತಿದೆ ಮತ್ತು ಆ ಹೆಸರಿನಿಂದಲೇ ರಾಜಕೀಯ ಪ್ರವೇಶಕ್ಕೆ ಅವಕಾಶ ಪಡೆಯಬಹುದು ಎಂದು ಅರ್ಥೈಸಿಕೊಳ್ಳುವ ಸಹಕಾರಿಗಳು ಇಲ್ಲ.

ಯಶಸ್ಸು ಕಂಡ ಕೆಲವು ಕ್ಷೇತ್ರಗಳೆಂದರೆ, ಕ್ಷೀರ ಕ್ರಾಂತಿ, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, ಇತರೆ ಕೆಲವು ಇದಕ್ಕೆ ಎರಡು ಕಾರಣ (1) ಕ್ಷೀರ ಕ್ಷೇತ್ರದ ಯಶಸ್ಸಿಗೆ, ಹಾಲು ನಿಗದಿತ ಅವಧಿಯೊಳಗೆ ಸಂಸ್ಕರಿಸದಿದ್ದರೆ, ಅದು ಹಾಳಾಗುತ್ತದೆ, ಅದಕ್ಕಾಗಿ ರೈತರು ನಿಷ್ಠೆ ತೋರಿಸಿ, ಹಾಲು ಸಹಕಾರ ಸಂಸ್ಥೆಗಳಿಗೆ ಹಾಲು ನೀಡಿ, ತುರ್ತಾಗಿ ಹಣ ಪಡೆಯುತ್ತಾರೆ ಮತ್ತು ಅದರಿಂದ ಅದರ ದಿನ ನಿತ್ಯದ ಅರ್ಥ ಶಕ್ತಿ ವೃದ್ಧಿಯಾಗುತ್ತಿದೆ. (2) ಅದೇ ರೀತಿ ಪಟ್ಟಣ ಪ್ರದೇಶದಲ್ಲಿ ಮಧ್ಯಮ ವರ್ಗದ ನೌಕರಶಾಯಿ ತಮ್ಮ ಆರ್ಥಿಕ ಬೆಳವಣಿಗೆಗೆ ಪಟ್ಟಣ ಸಹಕಾರಿ ಬ್ಯಾಂಕ್‌ಗಳು ಸ್ಥಾಪಿಸಿ, ತಮ್ಮ ಆರ್ಥಿಕ ಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ. ಇವರು ಸಹಕಾರಿ ತತ್ವಗಳನ್ನು ತಿಳಿದುಕೊಳ್ಳದೇ ಇದ್ದರೂ, ಆ ಸಂಸ್ಥೆಗಳಿಂದಾಗುವ/ಪಡೆಯುವ ಸೌಲತ್ತುಗಳಿಂದ ಬೆಳೆಯುತ್ತಾರೆ. ಮುಂದುವರಿದ ಭಾಗವಾಗಿ, ಸಹಕಾರಿ ಸಕ್ಕರೆ ಕಾರ್ಖಾನೆಗಳು ರೈತರ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದ್ದಾರೆ, ಏಕೆಂದರೆ ಕಬ್ಬನ್ನು ನಿಗದಿತ ಅವಧಿಯಲ್ಲಿ ನುರಿಸದಿದ್ದರೆ, ಸಂಸ್ಕರಿಸದಿದ್ದರೆ, ಅದರಿಂದ ನಷ್ಟವಾಗುತ್ತದೆ ಎಂಬುದು ರೈತರಿಗೆ ತಿಳಿದಿದೆ. ಇದರ ಅನುಕೂಲ ಪಡೆಯಲು ಬಹಳಷ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳು ಮಾಲೀಕರು, ಅವರ ನೇತೃತ್ವದಲ್ಲಿ ಒಂದು ಸಹಕಾರಿ ಸಂಸ್ಥೆ ಸ್ಥಾಪಿಸಿ, ರೈತರ ಕಬ್ಬಿನ ಹಣವನ್ನು, ಆ ಸಂಸ್ಥೆಯಲ್ಲಿ ಠೇವಣಿ ಎಂದು ಹೂಡಿಕೆ ಮಾಡಿ, ಅದನ್ನು ಅದೇ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸಾಲದ ರೂಪದಲ್ಲಿ ಭದ್ರತೆ ನೀಡಿದೆ ಪಡೆದು, ತಮ್ಮ ಅಭಿವೃದ್ಧ ಮಾಡಿಕೊಳ್ಳುತ್ತಿದ್ದಾರೆ, ಮತ್ತು ಹಲವಾರು ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬೆಲೆ ನೀಡಿದ ವಿಳಂಬ ಮಾಡುತ್ತಿವೆ. ಇದು ಆಡಳಿತಾತ್ಮಕ ತೊಡಕು ಇದನ್ನು ಜಾಗೃತ ಸದಸ್ಯರು ತಮ್ಮ ಹಕ್ಕನ್ನು ಚಲಾಯಿಸಲು ಪ್ರಯತ್ನ ಮಾಡುವುದೇ ಇಲ್ಲ. ಇದಕ್ಕಾಗಿ ಸಂಭಾವನೆಗಳನ್ನು ಮಾಡಿ ಮುಖಂಡರು ಬೆಳೆಯುತ್ತಿದ್ದಾರೆ, ರೈತರ ಅಭಿವೃದ್ಧಿ ಸಾದ್ಯವಾಗದೇ ತೊಂದರೆ ಅನುಭವಿಸುತ್ತಾರೆ. ಈ ಮೇಲ್ಕಂಡ ಮೂರು ಉದಾಹರಣೆಗಳನ್ನು ನೀಡಿದ ಪ್ರಮುಖ ಉದ್ದೇಶ, ಈ ಮೂರು ವ್ಯವಸ್ಥೆಗಳಲ್ಲಿ, ಗ್ರಾಹಕರು, ರೈತರು ಮತ್ತು ಮಧ್ಯಮ ವರ್ಗದ ದುಡಿಯುವ ನೌಕರರು. ಸದಸ್ಯರಿಗೆ ಸಹಕಾರ ತತ್ವಗಳ, ಸದಸ್ಯರ ಹಕ್ಕು ಭಾದ್ಯತೆಗಳ ಬಗ್ಗೆ ಅರಿವು ಮಾಡಿಸುವ ಪ್ರಯತ್ನವೇ ಸೌಹಾರ್ದ ಕಾಯಿದೆಯಲ್ಲಿ ನೀಡಿದ ಸಹಕಾರಿ ಸಂಸ್ಥೆಗಳ ಸ್ವಾಯತ್ತ, ಸ್ವಾತಂತ್ರ ಮತ್ತು ಸ್ವಯಂ ನಿಯಂತ್ರಣ ಸಂಸ್ಥೆಗಳು ಎಂದು, ಅದಕ್ಕೆ ಪೂರಕವಾಗಿ ಸೌಹಾರ್ದ ಕಾಯಿದೆಯಡಿ ರಚನೆಯಾಗುವ ಸಹಕಾರಿಗಳ ಸದಸ್ಯರು ಜಾಗ್ರತ ಸದಸ್ಯರಾಗುತ್ತಾರೆಂಬ ಭಾವನೆಯಿಂದ, ಅಂದರೆ ಒಂದು ಸೌಹಾರ್ದ ಸಹಕಾರಿಯನ್ನು ನೋಂದಾಯಿಸುವಾಗ, ಸದಸ್ಯರಾಗಬಯಿಸುವವರು, ಸ್ವಾಯತ್ತತೆ, ಸ್ವಯಂ ನಿಯಂತ್ರಣದ ಬಗ್ಗೆ ತಿಳಿದಿದ್ದರೆ ಮಾತ್ರ ಈ ಸಂಘಟನೆಯಲ್ಲಿ ಭಾಗವಹಿಸಬೇಕೆಂಬ ತಿಳುವಳಿಕೆ ಇದ್ದರೇ ಮಾತ್ರ ಯಶಸ್ವಿಗಳಿಸಲು ಸಾಧ್ಯ ಎಂಬುದನ್ನು ಮನಗಾಣದೆ, 1959ರ ಕಾಯಿದೆಯಲ್ಲಿನಂತೆ ಬೇರೊಬ್ಬರ ನಿಯಂತ್ರಣದಿಂದ ಸಂಸ್ಥೆ ನಡೆಸಬೇಕೆಂಬ ಭಾವನೆ ಸೌಹಾರ್ದ ಸಹಕಾರಿಗಳ ತಿಳಿದಿದೆ. ಅದರ ಉಪಯೋಗವನ್ನು ಈ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ದುರುಪಯೋಗ ಮಾಡಿಕೊಂಡು ಸ್ವಾರ್ಥ ಸಾಧನೆ ಮಾಡುತ್ತಿದ್ದಾರೆ. ಆ ಕಾರಣದದಿಂದ ಸೌಹಾರ್ದ ಕಾಯಿದೆ ಸೋತಿದೆ ಎಂದು ತಿಳಿಯ ಬಾರದು ಸದಸ್ಯರನ್ನು ಜಾಗೃತಗೊಳಿಸುವ ಪ್ರಯತ್ನ ನಡೆಯಬೇಕು. ಅದಕ್ಕಾಗಿ ತರಬೇತಿ ಕಾರ್ಯಕ್ರಮಗಳು ಜರುಗುತ್ತಿವೆ, ಆದರೆ, ಅವು ಸಾಮಾನ್ಯ ಸದಸ್ಯರೇ ಮುಟ್ಟುತ್ತಿಲ್ಲ, ಪದಾಧಿಕಾರಿಗಳಿಗೆ ಮುಟ್ಟಿಸಿದರೆ ಅದರ ದುರುಪಯೋಗಕ್ಕೆ ಆಸ್ಪದ ನೀಡಿದಂತೆ, ಜಾಗೃತ ಸದಸ್ಯರು ಅಂದರೆ ಯಾರು? ಕಾಯಿದೆ ಕಲಂ.23 ರಲ್ಲಿ ವಾರ್ಷಿಕ ಸಭೆಗಳನ್ನು ಚರ್ಚಿಸಬೇಕಾದ ವಿಷಯ ಪಟ್ಟಿ ಸೇರಿಸಿದೆ. ಈ ಪಟ್ಟಿಯಲ್ಲಿರುವ ಎಲ್ಲಾ ಅಂಶಗಳು ಮಹಾ ಸಭೆಯಲ್ಲಿ ಮಂಡಿಸಿದಾಗ, ಅವುಗಳ ಚರ್ಚೆ ಸಮಯದಲ್ಲಿ ಸದಸ್ಯರು ತಮ್ಮ ಹಕ್ಕನ್ನು ನಿರ್ವಹಿಸುವುದೇ ಇಲ್ಲ. ಚರ್ಚೆ ಇಲ್ಲದೆ, ಮಹಾಸಭೆಯಲ್ಲಿ (ಡಿವಿಡೆಂಡ್ ಹೊರತು ಪಡಿಸಿ) ಮುಕ್ತಾಯವಾಗುತ್ತದೆ. ಜಾಗೃತ ಸದಸ್ಯರಾಗಬೇಕಾದರೆ, ಅದನ್ನು ಹೂಡಿದ ಪಾಲು ಬಂಡವಾಳ ಮತ್ತು ಠೇವಣಿ ಸಮರ್ಪಕವಾಗಿ ಮಂಡಳಿ ನಿರ್ವಹಿಸುತ್ತಿದೆಯೇ ಎಂಬುದನ್ನು ಪರಿಶೀಲಿಸುವುದೇ ಇಲ್ಲ. ಆ ರೀತಿ ಪರಿಶೀಲಿಸಿದಾಗ ಮಾತ್ರ ಸದಸ್ಯರು ಜಾಗೃತವಾಗಿದ್ದಾರೆಂದು ತಿಳಿಯಬೇಕು. ಇದಕ್ಕೆ ಇತ್ತೀಚೆಗೆ ಮುಂಬೈನ ಪಿ.ಎಂ.ಸಿ ಬ್ಯಾಂಕ್‌ನಲ್ಲಿ ಒಟ್ಟು ಠೇವಣಿ ಶೇ.80% ರಷ್ಟು ಸಾಲವನ್ನು ಒಂದೇ ಸಂಸ್ಥೆಗೆ ನೀಡಿದ್ದನ್ನು ಸದಸ್ಯರು ವಿಮರ್ಷಿಸಿದ್ದರೆ ಅಥವಾ ಭಾರತೀಯಾ ರಿಸರ್ವ್ ಬ್ಯಾಂಕ್ ತನ್ನ ತಪಾಸಣ ಅವಧಿಯಲ್ಲಿ ಗುರುತಿಸಿದ್ದರೆ, ಆ ಅವ್ಯವಹಾರ ನಡೆಯುತ್ತಲೇ ಇರಲಿಲ್ಲ. ನಮ್ಮ ರಾಜ್ಯದಲ್ಲಿ ಬೆಳೆಗಾರನ ಒಂದ ಸೌಹಾರ್ದ ಸಂಸ್ಥೆಯಲ್ಲಿ ಸದಸ್ಯರು ಹೂಡಿದ ಠೇವಣಿ ಹಣವನ್ನು ಚಲನಚಿತ್ರ ತಯಾರಿಸಲು ಹೂಡಿಕೆ ಮಾಡಿದ್ದ ವಿಷಯ ಸದಸ್ಯರಿಗೆ ತಿಳಿದಿರಲಿಲ್ಲವೇ? ತಿಳಿದಿದ್ದರೂ ಸಮಾಜದ ಮುಖಂಡನ ಅವಹೇಳನವಾಗುತ್ತದೆಂದು ಸುಮ್ಮನಿದ್ದರೆ ಅಥವಾ ಅವರನ್ನು

ತಪ್ಪು ಲೆಕ್ಕ ಪತ್ರ ನೀಡಿ ಮೈಮರೆಸಲಾಗಿದೇ ಗಮನಿಸಬೇಕಾದ್ದ ಜಾಗೃತ ಸದಸ್ಯರು ಮಾತ್ರ – ಹೊರಗಿದವರಲ್ಲ.

ಈ ಮೇಲ್ಕಂಡ ಕೆಲವು ಉದಾಹರಣೆ ನೀಡಿದ ಉದ್ದೇಶ, ಸೌಹಾರ್ದ ಕಾಯಿದೆ ಆಶಯದಂತೆ, ಸದಸ್ಯರು ಜಾಗೃತರಾಗಿರಬೇಕು ಎಂಬ ನಂಬಿಕೆಗೆ ವಿರುದ್ದವಾಗಿ ಅಮಾಯಕತನ ತೋರಿಸಿ, ಕುರುಡು ನಂಬಿಕೆಯಿಂದ ಸಹಕಾರಿಯಲ್ಲಿ ಹೂಡಿಕೆ ಮಾಡಿದ ಸದಸ್ಯರು ಪರಿತಪಿಸುವಂತೆ ಮಾಡಿದ ಸಹಕಾರಿ ಮುಖಂಡರು ಸೌಹಾರ್ದ ಕಾಯಿದೆ ರಚನೆ ಮಾಡಿದ ಉದ್ದೇಶವನ್ನು ನಿರರ್ಥತಗೊಳಿಸಲು ಅಥವಾ ಈ ಕಾಯಿದೆಯಿಂದ ಮೋಸ ಮಾಡುವ ಒಂದು ನೋಂದಾಯಿತ ವೇದಿಕೆ ನಿರ್ಮಿಸಿಕೊಂಡ ಸಹಕಾರಿ ಮುಖಂಡರು. ಮಾರುಕಟ್ಟೆ ದರಕ್ಕಿಂತ ಹೆಚ್ಚು ಬಡ್ಡಿ ನೀಡುತ್ತಿದ್ದಾರೆ, ಅಂಥಹ ಸಹಕಾರಿಗಳ ಬಗ್ಗೆ ಜಾಗೃತರಾಗಿರುವ ಬದಲು, ಹೆಚ್ಚಾಗುತ್ತಿರುವ ಮುಳುಗುವ ಆರ್ಥಿಕ ಸಂಸ್ಥೆಗಳ ಸಂಖ್ಯೆ ಹೆಚ್ಚಿದ್ದರೂ ಮತ್ತು ಪ್ರಚಾರಕ್ಕೆ ಬರುತ್ತಿದ್ದರೂ ಸಾಮಾನ್ಯ ಜನತೆ, ಸಹಕಾರಿ ಸದಸ್ಯರು ಗಮನಿಸುವುದಿಲ್ಲವೇಕೆಂದು ಸಂಯುಕ್ತ ಸಹಕಾರಿ ಗಮನಿಸುತ್ತಿರಬೇಕು. ಭಾರತೀಯ ರಿಜರ್ವ್ ಬ್ಯಾಂಕ್ ಬಡ್ಡಿದರ ನಿಯಂತ್ರಿಸುವುದನ್ನು ನಿಲ್ಲಿಸಿದ್ದು, ಸಂಸ್ಥೆಗಳೇ ಬಡ್ಡಿದರ ನಿಗದಿ ಪಡಿಸಲು ಸ್ವಾಯತ್ತತೆ ನೀಡಿದ್ದರಿಂದ ಗ್ರಾಹಕರನ್ನು/ಸದಸ್ಯರನ್ನು ಹೆಚ್ಚು ಬಡ್ಡಿ ನೀಡುವುದನ್ನು ಅದರಿಂದಾಗುವ ಸಂಯುಕ್ತ ಸಹಕಾರಿ ನಿಯಂತ್ರಿಸುವ ಪ್ರಯತ್ನ ಮಾಡುತ್ತಲೇ ಇಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಪ್ರತಿಯೊಂದು ನೋಂದಾಯಿತ ಸಹಕಾರಿಯೂ ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಣ ಸಂಸ್ಥೆಗಳ ಕಾರ್ಯನಿರ್ವಹಣೆ ಮಾಡಿದರೆ, ಅದನ್ನು ಮಧ್ಯಪ್ರವೇಶ ಮಾಡಿದಂತಾಗುತ್ತಿದೆಂಬ, ನೀತಿ ಸಂಯುಕ್ತ ಸಹಕಾರಿ ತಿಳಿದಿದೆಯೇ?

**ಸಹಕಾರ ಸಚಿವಾಲಯ ಮತ್ತು ಸಹಕಾರ ಇಲಾಖಾಧಿಕಾರಿಗಳು :**

ಈ ಕಾಯಿದೆ ರಚನೆ ಮಾಡುವಾಗ ಇದ್ದ ಸಹಕಾರ ಸಚಿವರು, ಈ ಕಾಯಿದೆಯಲ್ಲಿ ನೀಡಿದ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣದ ಬಗ್ಗೆ ಇದ್ದ ಮನೊಸ್ಥಿತಿಗೂ, ಮುಂದೆ ಸಚಿವರಾದವರು ಇದೇ, ಮನೊಸ್ಥಿತಿಯಲ್ಲಿ ಇಲ್ಲ. ಅವರಿಗೆ ಎರಡೂ ಕಾಯಿದೆಯಲ್ಲಿ ಅಷ್ಟು ವ್ಯತ್ಯಾಸವನ್ನು ಗುರುತಿಸುತ್ತಿಲ್ಲ. ಇದನ್ನು ಅನೂಪ್‌ದೇಶಪಾಂಡೆ ತಮ್ಮ ಲೇಖನದಲ್ಲಿ ಹೇಳುವುದು. ಅಂದರೆ 97ನೇ ಸಂವಿಧಾನ ತಿದ್ದುಪಡಿ ನಂತರ ಎರಡು ಕಾಯಿದೆ ಅವಶ್ಯಕವಿಲ್ಲ ಎಂಬ ಭಾವನೆ. ಇದರ ಜೊತೆಗೆ ಸಹಕಾರ ಇಲಾಖಾಧಿಕಾರಿಗಳು ನೋಂದಣಿ ಸಮಯದಲ್ಲಿ ತಮ್ಮ ಅಧಿಕಾರ ದರ್ಪಪ್ರದರ್ಶಿಸಿ, ಆ ನಂತರ ಅದರ ಕಾರ್ಯನಿರ್ವಹಣೆ ಬಗ್ಗೆ ನಿಷ್ಕ್ರಿಯ ಮನೊಭಾವನೆ ಹೊಂದಿರುವುದು ಮತ್ತು ಈ ಸಂಸ್ಥೆಗಳು ನಮ್ಮ ಕಾರ್ಯವ್ಯಾಪ್ತಿಗೆ ಇಲ್ಲ ಎಂಬ ಭಾವನೆ. ಇದಕ್ಕಾಗಿ ಇಲಾಖಾಧಿಕಾರಿಗಳಿಗೆ, ಸಂಯುಕ್ತ ಸಹಕಾರಿ ಒಂದು ಕಾರ್ಯಗಾರ ಮಾಡಿ, ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣದ ನೀತಿ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಸಂಯುಕ್ತ ಸಹಕಾರಿ ಜವಾಬ್ದಾರಿ ಎಂದು ತಿಳಿದು ಅವುಗಳ ಕಾರ್ಯನಿರ್ವಹಣೆ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡದೇ ಇರುವುದು ಒಂದು ಆಭಾಸ. ಏಕೆಂದರೆ ಶಾಸನಾತ್ಮಕ ಅಧಿಕಾರ ನಿರ್ವಹಣೆ, ನಿಬಂಧಕರು ಮತ್ತು ಸಂಯುಕ್ತ ಸಹಕಾರಿಗೆ ಹಂಚಿಕೆಯಾಗಿದೆ. ಅವುಗಳ ವ್ಯಾಪ್ತಿಯಲ್ಲಿ ಸಂಯುಕ್ತ ಸಹಕಾರಿಯೂ ಇಲಾಖೆ ಅರ್ಥೈಸಿಕೊಳ್ಳಬೇಕು. ಸಂಸ್ಥೆಯ ಪ್ರಾರಂಭಿಕ ಹಂತದಲ್ಲಯೇ ಸ್ವಯಂ ಶಿಸ್ತುತರಲು ಪ್ರಯತ್ನ ಮಾಡಬೇಕು. ಸಂಸ್ಥೆ ನೋಂದಾವಣೆ ಸಮಯದಲ್ಲಿ ಲಂಚ ನೀಡಿ ನೋಂದಾಯಿಸಿದಾಗ ಅಂತಹ ಸಂಸ್ಥೆಯನ್ನು ನಿಯಂತ್ರಿಸುವ ಪ್ರಯತ್ನ ಯಶಸ್ವಿಗಳಿಸುತ್ತಿದೆಯೇ?

**ಜಾಗೃತ ಸದಸ್ಯರ ಕೊರತೆ :** ಸಹಕಾರಿ ರಚನೆಯಾದಾಗ, ಪ್ರಾರಂಭ ಹಂತದಲ್ಲಿ ಸದಸ್ಯರಾದ ವ್ಯಕ್ತಿಗಳು ಅಥವಾ ಆ ನಂತರ ಸೇರ್ಪಡೆಯಾದ ಸದಸ್ಯರು, ಸಹಕಾರಿ ಸ್ವಯಂ ನಿಯಂತ್ರಣದ ಬಗ್ಗೆ ತಿಳುವಳಿಕೆ ಪಡೆಯಲು ಪ್ರಯತ್ನಿಸುವುದು ಅಥವಾ ಪ್ರಾರಂಭಿಕ ಹಂತದಲ್ಲಿದ್ದ ಪದಾಧಿಕಾರಿಗಳು ಅಂತಹ ಪ್ರಯತ್ನ ಮಾಡುವುದೇ ಇಲ್ಲ/ಮಾಡಿಸುವುದೇ ಇಲ್ಲ. ಅಂದರೆ ಪ್ರಾರಂಭಿಕ ಹಂತದಲ್ಲಿದ್ದ ಪದಾಧಿಕಾರಿಗಳೇ ಆಡಳಿತ ನಡೆಸಲು ತಂತ್ರಗಳನ್ನು ಹೂಡುತ್ತಾರೆ. ಸಹಕಾರಿ ನಡೆಸುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಾಯಿದೆ ಕಲಂ.23ರಲ್ಲಿ ನಿಗದಿ ಪಡಿಸಿದ ಮಾಹಿತಿಯನ್ನು ಸದಸ್ಯರಿಗೆ ನೀಡುವುದೇ ಇಲ್ಲ. ಇದನ್ನು ಸದಸ್ಯರೂ ಪ್ರಶ್ನಿಸುವುದಿಲ್ಲ ಅಥವಾ ಸಂಯುಕ್ತ ಸಹಕಾರಿ ಮಾರ್ಗದರ್ಶನ ನೀಡುತ್ತಿಲ್ಲ. ಉದಾಹರಣೆಗೆ ಮೈಸೂರಿನ ಒಂದ ಸೌಹಾರ್ದ ಸಹಕಾರಿ ತನ್ನ ವಾರ್ಷಿಕ ಸಾಮಾನ್ಯ ಸಭೆ ನೋಟೀಸನ್ನು 4 ಪುಟಗಳ ಆಹ್ವಾನ ನೀಡಿ ಕರೆದಿದೆ. ಅದರಲ್ಲಿ ಸಹಕಾರಿಗೆ ಸಂಬಂಧಪಟ್ಟ ಯಾವುದೇ ಮಾಹಿತಿ ಇಲ್ಲ. ಒಂದನೇ ಪುಟದಲ್ಲಿ ಆಹ್ವಾನ, ಎರಡನೇ ಪುಟದಲ್ಲಿ, ಅಧ್ಯಕ್ಷತೆ ವಹಿಸುದನ್ನು ಹೆಸರು, ಮೂರನೇ ಪುಟದಲ್ಲಿ 4–5 ವಿಷಯಗಳ ಕಾರ್ಯಸೂಚಿ, ಕೊನೆ ಪುಟ ಖಾಲಿ. ಇಂತಹ ಸಾಮಾನ್ಯ ಸಭೆ ಆಹ್ವಾನ ಪತ್ರಿಕೆ ನೀಡಿದ ಸಹಕಾರಿ ಬಗ್ಗೆ ಸದಸ್ಯರು ಕೇಳುವುದಿಲ್ಲ, ಸಂಯುಕ್ತ ಸಹಕಾರಿ ತನ್ನ ಕ್ಷೇತ್ರ ಸಿಬ್ಬಂದಿ ಮೂಲಕ ಮಾಹಿತಿ ಪಡೆದು ಮಾರ್ಗದರ್ಶನ ನೀಡುವ ಪ್ರಯತ್ನ ಮಾಡುವುದೇ ಇಲ್ಲ. ಆರ್ಥಿಕ ತಃಖ್ತೆಗಳ, ಲೆಕ್ಕ ತಪಾಸಣಾ ವರದಿ, ಯೋಜನಾ ವರದಿಯನ್ನು ಸದಸ್ಯರಿಗೆ ಸಾಮಾನ್ಯ ಸಭೆಯಲ್ಲಿ ನೀಡಬೇಕು. ಮತ್ತು ಅವುಗಳನ್ನು ಮಂಡಳಿ ಲಿಖಿತವಾಗಿ ಸದಸ್ಯರಿಗೆ ತಿಳಿಸಿರಬೇಕು ಇಲ್ಲವಾದರೆ ಸದಸ್ಯರೇ ಸಭೆಯಲ್ಲಿ ಮಾಹಿತಿಯನ್ನು ಲಿಖಿತವಾಗಿ ಏಕೆ ನೀಡಲ್ಲಿ ಎಂದು ಕೇಳಿದಾಗ ಮಾತ್ರ, ಅಂತಹ ಸದಸ್ಯರು ಜಾಗೃತ ಸದಸ್ಯರು. ಸೌಹಾರ್ದ ಕಾಯಿದೆಯಡಿ ರಚನೆಯಾದ ಸಹಕಾರಿ ಸಂಸ್ಥೆಗಳ ಸದಸ್ಯರಿಗೆ ಪೂರ್ಣ ಪ್ರಮಾಣದ ಮಾಹಿತಿ ನೀಡಿದಾಗ ಮಾತ್ರ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ಎಂಬ ನೀತಿಗೆ ಅರ್ಥಸಿಗುತ್ತದೆ. ಆದರೆ ಬಹಳಷ್ಟು ಸಹಕಾರಿಗಳು ಸದಸ್ಯರಿಗೆ ಸಾಮಾನ್ಯ ಸಭೆಯಲ್ಲಿ ಮಾಹಿತಿಯನ್ನು ನೀಡದೆ, ಸಾಮಾನ್ಯ ಸಭೆ ಜರುಗಿಸುತ್ತಿದ್ದಾರೆ. ಇದನ್ನು ನಿಯಂತ್ರಿಸಲು ಸಂಯುಕ್ತ ಸಹಕಾರಿ ಕ್ಷೇತ್ರ ಸಿಬ್ಬಂದಿ ವರದಿ ನೀಡುವ ವ್ಯವಸ್ಥೆಯಲ್ಲಿ ಹಾಗೂ, ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳು ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಿಲ್ಲವೆಂದು ಯಾವುದೇ ಕ್ರಮ ಜರುಗಿಸಿದ ಉದಾಹರಣೆಗಳೇ ಇಲ್ಲ ಎಂದರೆ ತಪ್ಪಾಗಲಾರದು. ಏಕೆಂದರೆ ಸಾಮಾನ್ಯ ಸಭೆಯಲ್ಲಿ ಕಾಯಿದೆ ಕಲಂ.23 ರಲ್ಲಿ ನಿಗದಿ ಪಡಿಸಿದ ವಿಷಯ ಪಟ್ಟಿಯಲ್ಲಿನ ಮಾಹಿತಿ ಸದಸ್ಯರಿಗೆ ನೀಡದೆ ಸಾಮಾನ್ಯ ಸಭೆ ಜರುಗಿಸಿದ ಬಗ್ಗೆ ಯಾವುದೇ ಕ್ರಮ ಸಂಯುಕ್ತ ಸಹಕಾರಿ ಜರುಗಿಸಿಲ್ಲ ಅಥವಾ ಸಹಕಾರಿ ಸದಸ್ಯರು, ಅಗತ್ಯ ಮಾಹಿತಿ ನೀಡಿದ ಸಾಮಾನ್ಯ ಸಭೆ ನಡೆಸಲಾಗುತ್ತಿದೆ ಎಂದು ಪ್ರತಿರೋದವನ್ನು ಸದಸ್ಯರು ವ್ಯಕ್ತ ಪಡಿಸಿ ಪತ್ರ ವ್ಯವಹಾರ ಮಾಡಿಲ್ಲ.



# ಸಹಕಾರಿ ಸಂಘವನ್ನು ಬಳಸಿಕೊಳ್ಳುವ ಎಲ್ಲಾ ಜವಾಬ್ದಾರಿ ಜನ ಸಾಮಾನ್ಯರಿಗೆ ಇದೆ

– ಶ್ರೀ ವಿಶ್ವಾರಾಧ್ಯ ಸತ್ಯಂಪೇಟೆ, ಶಹಾಪುರ.

ಕಲ್ಯಾಣ ಕರ್ನಾಟಕದ ಬಹುತೇಕ ಸಹಕಾರಿ ಸಂಘಗಳನ್ನು ಪುನಶ್ಚೇತನ ಗೊಳಿಸಬೇಕಾಗಿದೆ. ಸಹಕಾರಿ ತತ್ವದ ಮೂಲಕ ಜನ ಸಾಮಾನ್ಯರ ಅದರಲ್ಲೂ ಹಳ್ಳಿಗರ ಬದುಕನ್ನು ಮೇಲೆತ್ತಬಹುದು ಎಂಬ ಸತ್ಯವನ್ನು ಪ್ರಚುರ ಪಡಿಸಬೇಕಾಗಿದೆ. ಕಲ್ಯಾಣ ಕರ್ನಾಟಕದ ತುಂಬೆಲ್ಲ ಸಹಕಾರಿ ಸಂಘಗಳೇನೋ ಇವೆ. ಆದರೆ ಅಲ್ಲಿನ ಆಡಳಿತ ಮಂಡಳಿಯ ನಿಷ್ಕ್ರಿಯತನವೋ, ಸಹಕಾರಿ ಸದಸ್ಯರ ಪಾಲ್ಗೊಳ್ಳುವಿಕೆಯ ಕೊರತೆಯೋ ಏನೋ ! ಬಹಳಷ್ಟು ಸಹಕಾರಿ ಸಂಸ್ಥೆಗಳು ಆಟಕ್ಕುಂಟು ಲೆಕ್ಕಕ್ಕೆ ಇಲ್ಲ ಎನ್ನುವ ಸ್ಥಿತಿಯಲ್ಲಿರುವುದು ವಾಸ್ತವ ಸತ್ಯವಾಗಿದೆ.

ರೈತರು ಕೂಲಿ ಕಾರ್ಮಿಕರಿಗಾಗಿಯೆ ಸಂಸ್ಥೆಗಳು ಕೆಲಸ ಮಾಡುತ್ತಿವೆ ಎಂಬ ಅರಿವು ಜಿಲ್ಲೆಯ ಜನತೆಯ ಅರಿವಿಗೆ ಬಾರದಿರುವುದು ವಿಷಾದದ ಸಂಗತಿ. ತಮ್ಮ ತಮ್ಮ ಹಳ್ಳಿಗಳಲ್ಲಿರುವ ಸಹಕಾರಿ ಸಂಘಗಳು ಕೇವಲ ಸಾಲವನ್ನು ಮಾತ್ರ ನೀಡುತ್ತವೆ ಎಂಬ ತಪ್ಪು ತಿಳುವಳಿಕೆಯಲ್ಲಿಯೆ ಜನರಿದ್ದಾರೆ.

ರೈತರ ಬದುಕಿಗೆ ಆಸರೆಯಾಗುವ ಅವರ ಕಷ್ಟ ಸುಖದಲ್ಲಿ ಪಾಲ್ಗೊಳ್ಳುವ ಹಂಬಲ ಹೊಂದಿರುವ ಸಹಕಾರಿ ಸಂಘಗಳನ್ನವರು ಆಶ್ರಯಿಸಬೇಕಿದೆ. ಬದಲಾಗಿ ಹಳ್ಳಿಗಳಲ್ಲಿ ಶ್ರೀಮಂತ ಜನಗಳಿಂದ ಹಣವನ್ನು ಸಾಲವಾಗಿ ಪಡೆದು ಆ ಸಾಲಕ್ಕೆ ಬಡ್ಡಿಯನ್ನು ಕಟ್ಟಿ ತಮ್ಮ ಬದುಕನ್ನು ಕೊನೆಗಾಣಿಸುವ ಹಲವಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇವೆ.

ಆದ್ದರಿಂದ ರೈತರು ತಮಗಾಗಿಯೆ ರೂಪಿಸಿಕೊಂಡಿರುವ ಸಹಕಾರಿ ಸಂಘಗಳಲ್ಲಿ ಸದಸ್ಯರಾಗಿ, ಆ ಸಂಘದ ಏಳು ಬೀಳುಗಳಲ್ಲಿ ಪಾಲ್ಗೊಂಡಾಗ ಸಂಘದ ಜೊತೆ ಜೊತೆಗೆ ತಮ್ಮ ಏಳಿಗೆಯೂ ಸಾಧ್ಯ ಎಂಬ ಅರಿವು ಅವರಲ್ಲಿ ಉಂಟಾಗುತ್ತದೆ. ಬಿತ್ತನೆಯ ಬೀಜಕ್ಕೂ ಅವರಿವರಲ್ಲಿ ಸಾಲ ಪಡೆದ ರೈತ, ಬಿತ್ತಿದ ಬೀಜ ಮೊಳಕೆ ಒಡೆಯದೆ, ಉತ್ತಿದ ಭೂಮಿಯಲ್ಲಿಯೆ ಬೀಜಗಳು ಕಮರಿ ಹೋದಾಗ ಬದುಕಿನಲ್ಲಿ ನಿರಾಶೆಗೊಳ್ಳುತ್ತಾನೆ. ಸಾಲದ ಶೂಲ ಎದೆಗೆ ಇರಿದಂತೆಲ್ಲ ತನ್ನ ಮುದ್ದಿನ ಮಡದಿ, ಮಕ್ಕಳು ಮನೆಯನ್ನು ಬಿಟ್ಟು ನಿರಾಶೆಯಿಂದ ಉರುಲು ಹಾಕಿಕೊಳ್ಳುವ ಪ್ರಸಂಗ ಎದುರಾಗುತ್ತದೆ.

**ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿರ್ದಡೆ ಆ ಬೆವಸಾಯದ ಘೋರವೇತಕ್ಕಯ್ಯಾ ?**

ಎಂಬ ವಚನಕಾರ ಅಲ್ಲಮಪ್ರಭುಗಳ ವಚನದ ಸಾಲಿನಂತೆ ಆತನ ಪರಿಸ್ಥಿತಿಯಾಗಿದೆ. ಆದ್ದರಿಂದ ರೈತರು ನೇರವಾಗಿ ತಾವು ಸಂಘಟಿಸಿರುವ ಸಹಕಾರಿ ಸಂಘಗಳ ಮೂಲಕವೆ ಉತ್ತಮ ತಳಿಯ ಬೀಜಗಳನ್ನು ಪಡೆದುಕೊಳ್ಳಬೇಕು. ಸಹಕಾರಿ ಸಂಸ್ಥೆ ರೈತರನ್ನು ವಂಚಿಸುವ ಪ್ರಶ್ನೆಯೆ ಇಲ್ಲ. ಇವು ಹುಟ್ಟಿಕೊಂಡಿರುವುದೆ ರೈತರ ಏಳಿಗೆಗಾಗಿ ಎಂಬ ತಿಳುವಳಿಕೆ ಎಲ್ಲರಲ್ಲಿ ಬಂದರೆ ಸಂಸ್ಥೆ ಸದೃಢಗೊಳ್ಳುವುದರಲ್ಲಿ ಯಾವುದೆ ಅನುಮಾನವಿಲ್ಲ.

ಸಹಜವಾಗಿ ರೈತ ಭೂಮಿಗೆ ಬೀಜ ಬಿತ್ತಿದ ಮೇಲೆ ರಸಗೊಬ್ಬರಕ್ಕೆ ಅಲೆದಾಡುವ ಪ್ರಸಂಗ ಎದುರಾಗುತ್ತದೆ. ಇದನ್ನು ಸಹ ಸಹಕಾರಿ ಸಂಘಗಳಲ್ಲಿಯೆ ಪಡೆದರೆ ಕಡಿಮೆ ದರದಲ್ಲಿ ಉತ್ಕೃಷ್ಟ ಗುಣ ಮಟ್ಟದ ರಸಗೊಬ್ಬರ ಸಿಗುತ್ತದೆ. ಪಟ್ಟಣದ ಹಲವಾರು ಕಡೆ ರೈತರನ್ನು ಯಾಮಾರಿಸುವ ಖಾಸಗಿ ಅಂಗಡಿಗಳಲ್ಲಿ ರಸಗೊಬ್ಬರ ಪಡೆಯುವುದಕ್ಕಿಂತ ಸರಕಾರದ ಭಾಗವೇ ಆಗಿರುವ ಸಹಕಾರಿ ಸಂಘಗಳಲ್ಲಿ ರಸ ಗೊಬ್ಬರ ಪಡೆಯಬೇಕು. ಇಲ್ಲಿ ಖಾತ್ರಿಯೂ ಇದೆ. ಕಡಿಮೆ ದರದಲ್ಲೂ ಸಿಗುತ್ತದೆ.

ಬೀಜ, ಗೊಬ್ಬರವನ್ನು ಭೂಮಿಗೆ ಹಾಕಿದ ಮೇಲೆ ಒಳ್ಳೆಯ ಫಸಲು ಬರುವುದು ಖಂಡಿತ. ಉತ್ತಮ ಫಸಲು ರೈತರ ಮೊಗದಲ್ಲಿ ಸಂತೋಷವನ್ನು ತರುತ್ತದೆ. ಯಾವ ಸಮಾಜ, ದೇಶದಲ್ಲಿ ನೆಮ್ಮದಿಯಾಗಿ ಇರಬಲ್ಲನೋ ಆ ದೇಶ ಸಮಾಜ ಬೆಳವಣಿಗೆಯತ್ತ ದಾಪುಗಾಲು ಇಡುತ್ತದೆಂದೆ ಅರ್ಥ.

ಯಾವುದೆ ದೇಶ ಎಷ್ಟೇ ಮುಂದುವರೆದಿದ್ದರೂ ಕೂಡ ಅಲ್ಲಿನ ನಿವಾಸಿಗಳು ಹೊಟ್ಟೆಗೆ ತಿನ್ನುವುದು ರೈತ ಬೆಳೆದ ಆಹಾರ ಧಾನ್ಯವಲ್ಲದೆ ಇನ್ನೇನು ಅಲ್ಲ. ರೈತರ ಬೆನ್ನೆಲುಬು ಗಟ್ಟಿಗೊಳಿಸಲೆಂದೆ ಹುಟ್ಟಿಕೊಂಡ ಸಹಕಾರಿ ಸಂಘವನ್ನು ಬಳಸಿಕೊಳ್ಳುವ ಉಳಿಸಿಕೊಳ್ಳುವ ಎಲ್ಲಾ ಜವಾಬ್ದಾರಿ ರೈತರಿಗೆ ಇದೆ.

ಸಣ್ಣ ಪುಟ್ಟ ವ್ಯಾಪಾರಸ್ಥರು ಸಹ ಸೌಹಾರ್ದ ಸಹಕಾರಿಯ ಸದಸ್ಯರಾಗುವ ಮೂಲಕ ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದಬಹುದಾಗಿದೆ. ನಿತ್ಯ ಹೇಗೂ ತಮ್ಮ ವ್ಯವಹಾರದ ನಡುವೆ ಇಂತಿಷ್ಟು ಹಣವನ್ನು ತಾವು ಸದಸ್ಯತ್ವ ಹೊಂದಿದ ಸೌಹಾರ್ದ ಸಹಕಾರಿಗೆ ಜಮಾ ಮಾಡುತ್ತ ಹೋಗಬಹುದು. ಆರು ತಿಂಗಳ ನಂತರ ನಮ್ಮ ಹಣವೆ ನಮಗೆ ಹಿಂತಿರುಗಿ ಬರುತ್ತದೆ. ಇದರಿಂದ ಸೌಹಾರ್ದ ಸಹಕಾರಿಯೂ ಬೆಳೆಯಲು ಅನುಕೂಲವಾಗುತ್ತದೆ. ಸಣ್ಣ ಪುಟ್ಟ ಸಾಲಕ್ಕೆ ರಾಷ್ಟ್ರೀಯ ಬ್ಯಾಂಕ್ ಗಳಿಗೆ ಹೋಗಿ ಅಲೆದಾಡುವುದಕ್ಕಿಂತ ನಾವೇ ಕಟ್ಟಿಕೊಂಡ ಸಹಕಾರಿ ಸಂಘಗಳಲ್ಲಿ ಸಾಲವನ್ನೂ ಪಡೆಯಬಹುದು. ಸಾಲಕ್ಕೆ ಅರ್ಜಿ ಹಾಕಿ ನಮ್ಮದೆ ಸಂಘದ ಸದಸ್ಯರ ಜಾಮೀನು ಮಾಡಿಸುವುದು ತುಂಬಾ ಸರಳವಾದ ಪ್ರಕ್ರಿಯೆ. ನಾವೇ ಕಟ್ಟಿಕೊಂಡ ಸಹಕಾರಿ ಎಂಬ ಅರಿವು ಇದ್ದರೆ ಖಂಡಿತವಾಗಿಯೂ ಆ ಸಹಕಾರಿಯ ಬಗೆಗೆ ಪ್ರೀತಿ , ಮುತುವರ್ಜಿ ಇದ್ದೆ ಇರುತ್ತದೆ. ನನ್ನ ಆರ್ಥಿಕ ಕಷ್ಟಕಾಲಕ್ಕೆ ನಮ್ಮ ನೆರವಿಗೆ ಬಂದ ಸಹಕಾರಿ ಸಂಘದ ಋಣದಲ್ಲಿ ಯಾವುದೆ ಮನುಷ್ಯ ಇರಲು ಬಯಸಲಾರ.

ಸಹಕಾರಿ ಸಂಘ ನಮ್ಮದು ಎಂಬ ಅರಿವು ಹಾಗೂ ಹೊಣೆಗಾರಿಕೆ ಇಟ್ಟುಕೊಂಡ ಸಹಕಾರಿ ಸದಸ್ಯ ಎಂದಿಗೂ ಸೌಹಾರ್ದ ಸಹಕಾರಿಗೆ ಹೊರೆಯಾಗಲು ಸಾಧ್ಯವಿಲ್ಲ. ಸಂಘ ಪ್ರತಿ ವರ್ಷ ಗಳಿಸುವ ನಿವ್ವಳ ಲಾಭ, ಬರೀ ಬ್ಯಾಂಕಿನ ಬಂಡವಾಳವನ್ನಷ್ಟೇ ಹೆಚ್ಚಿಸುವುದಿಲ್ಲ. ಆ ಸಹಕಾರಿ ಸದಸ್ಯನ ಆತ್ಮ ಬಲವನ್ನು ಅದು ವೃದ್ಧಿಗೊಳಿಸುತ್ತದೆ. ಮನುಷ್ಯನಿಗೆ ಎಲ್ಲಾ ಬಲಗಳಿಗಿಂತ ಆತ್ಮಬಲ ತುಂಬಾ ದೊಡ್ಡದು. ಆ ಶಕ್ತಿಯನ್ನು ತುಂಬಿಕೊಡುವ ಸೌಹಾರ್ದ ಸಹಕಾರಿ ಕ್ಷೇತ್ರ ಕಾನೂನು ಅಡಿಯ ಮೇಲೆ ಸಹಕಾರದಿಂದ ನಡೆಯಬೇಕು.

ರಾಜಕೀಯ ಹಸ್ತಕ್ಷೇಪ, ಅಧಿಕಾರಿಗಳ ಕಾಟ ಸೌಹಾರ್ದ ಸಹಕಾರಿಗೆ ಇಲ್ಲವೆ ಇಲ್ಲ. ಇಲ್ಲಿ ಸದಸ್ಯರೆ ಸುಪ್ರಿಂ. ಸಹಕಾರಿ ಇಲಾಖೆ ರೂಪಿಸಿದ ಕಾನೂನಿನ ಹಳಿಯ ಮೇಲೆ ಜನ ಮಾನಸಕ್ಕೆ ಬೇಕಾದಷ್ಟು ಸಹಾಯ ಹಸ್ತ ಚಾಚಬಹುದಾದ ವಿಸ್ತೀರ್ಣ ಸೌಹಾರ್ದ ಸಹಕಾರಿ ಸಂಘಕ್ಕೆ ಇದೆ. ಸಹಕಾರಿ ಸದಸ್ಯರು ಹಾಗೂ ಇತರರಿಗೆ ಒಳ್ಳೆಯ ಶಿಕ್ಷಣ ನೀಡಲು ಉತ್ತಮವಾದ ಶಾಲೆ–ಕಾಲೇಜುಗಳನ್ನೂ ಸಹ ನಡೆಸಿಕೊಂಡು ಹೋಗಬಹುದು. ಜನ ಸಾಮಾನ್ಯರಿಗೆ ಅರಿವನ್ನು ಉಂಟು ಮಾಡಲು ಒಳ್ಳೊಳ್ಳೆಯ ಪುಸ್ತಕಗಳುಳ್ಳ ಗ್ರಂಥಾಲಯಗಳನ್ನು ತೆಗೆಯಬಹುದು. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ ಸಹಕಾರಿ ಸಾರಿಗೆಯನ್ನೂ ಸಹ ಆರಂಭಿಸಬಹುದು.

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಸಹಕಾರಿ ಪ್ರವೇಶಿಸದ ಕ್ಷೇತ್ರವೆ ಇಲ್ಲವೆಂದೂ ನಡೆಯುತ್ತದೆ. ಜನ ಸಾಮಾನ್ಯನಿಗೆ ಇಂದು ಆರೋಗ್ಯ ತುಂಬಾ ಪ್ರಮುಖ ವಿಷಯವಾಗಿ ಕಾಣಿಸಿಕೊಂಡಿದೆ. ಸೌಹಾರ್ದ ಸಹಕಾರಿ ಆರ್ಥಿಕವಾಗಿ ಸಬಲವಾಗಿದ್ದಾಗ ಅದು ತನ್ನ ಸಹಕಾರಿಯ ಆರೋಗ್ಯದ ಕಡೆಗೂ ಗಮನಹರಿಸಬಹುದಾಗಿದೆ. ಸೌಹಾರ್ದ ತತ್ವಗಳನ್ನು ಇಂಬಿಟ್ಟುಕೊಂಡು ಸೌಹಾರ್ದ ಸಹಕಾರಿಯ ಆರೋಗ್ಯ ತಪಾಸಣೆ ಮಾಡುವ, ಆತನಿಗೆ ಔಷಧಿಗಳನ್ನು ಕಡಿಮೆ ದರದಲ್ಲಿ ಒದಗಿಸುವ ಕಾರ್ಯವನ್ನೂ ಅದು ಮಾಡಬಹುದು. ಇಲ್ಲಿ ಲಾಭ ಗಳಿಕೆಯೆ ಮುಖ್ಯವಾಗಿಲ್ಲದ್ದರಿಂದ ಸಹಜವಾಗಿ ಸಹಕಾರಿ ಸದಸ್ಯನಿಗೆ ಹೆಚ್ಚಿನ ಆರೋಗ್ಯ ಸೌಲತ್ತು ಸಿಗುತ್ತದೆ.

ಮಹಿಳೆಯರನ್ನು, ದುರ್ಬಲರನ್ನು, ಗುರಿಯಾಗಿಟ್ಟುಕೊಂಡು ಸೌಹಾರ್ದ ಸಹಕಾರಿ ಸಂಘಗಳು ಕಾರ್ಯ ತತ್ಪರಗೊಂಡರೆ ಸರಕಾರಗಳೂ ಮಾಡದೆ ಇರುವ ಕೆಲಸವನ್ನು ಸೌಹಾರ್ದ ಸಂಘಟನೆಗಳು ಮಾಡಬಹುದು. ಮಹಿಳೆಯರ ಸಣ್ಣ ಸಣ್ಣ ಗುಂಪುಗಳನ್ನು ಮಾಡಿ ಆ ಗುಂಪಿಗೆ ಆರ್ಥಿಕ ಸಹಾಯವನ್ನು ನೀಡಿದರೆ ಸಹಜವಾಗಿಯೆ ಮಹಿಳೆ ತನ್ನ ದುರ್ಬಲತೆಯನ್ನು ಕಳೆದುಕೊಳ್ಳಬಲ್ಲಳು. ಒಬ್ಬ ಮಹಿಳೆಯ ಆರ್ಥಿಕ ಸ್ವಾತಂತ್ರ್ಯ ಸಮಾಜದ ಬೆಳವಣಿಗೆಗೆ ಕಾರಣವಾಗುತ್ತದೆ ಎಂಬುದನ್ನು ಮರೆಯಬಾರದು.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2020-2022.



# ಪಂಜಾಬ್ ಆಂಡ್ ಮಹಾರಾಷ್ಟ್ರ ಕೋ-ಆಪರೇಟಿವ್ ಬ್ಯಾಂಕ್ ಮತ್ತು ಅದರ ಶಾಖೆಗಳು ಇನ್ನೂ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಆಗಿ ಕಾರ್ಯನಿರ್ವಹಣೆ - ಆರ್.ಬಿ.ಐ ಆದೇಶ.

प्रेस प्रकाशनी PRESS RELEASE

भारतीय रिज़र्व बैंक
RESERVE BANK OF INDIA

वेबसाइट : www.rbi.org.in/hindi
Website : www.rbi.org.in
ई-मेल/email : helpdoc@rbi.org.in

संचार विभाग, केंद्रीय कार्यालय, एस.बी.एस.मार्ग, फोर्ट, मुंबई-400001
Department of Communication, Central Office, S.B.S.Marg, Fort, Mumbai-400001
फोन/Phone: 022- 22660502

January 25, 2022

**The Punjab and Maharashtra Co-operative Bank Ltd. branches to operate as Unity Small Finance Bank Ltd. branches from January 25, 2022**

The Government of India has today sanctioned and notified the Scheme for the amalgamation of the Punjab and Maharashtra Co-operative Bank Ltd. (PMC Bank) with Unity Small Finance Bank Ltd. (USFBL). The amalgamation will come into force with effect from the date of the notification of the scheme i.e. January 25, 2022. All the branches of the PMC Bank will function as branches of Unity Small Finance Bank Ltd. with effect from this date.

USFBL is making necessary arrangements to implement the provisions of the scheme.

The Scheme of amalgamation notified today envisages takeover of the assets and liabilities of PMC Bank, including deposits, by the USFBL in terms of the provisions of the scheme.

**(Yogesh Dayal)**
Chief General Manager

**Press Release: 2021-2022/1616**

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831–2401551.

ಕಲಬುರಗಿ ಪಾಂತೀಯ ಕಛೇರಿ : ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010